ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ, ತಿ. ನರಸೀಪುರ

# ಸವಿ ಕಿರಣ

## 10ನೇ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ ಪ್ರಶ್ನೋತ್ತರ ಮಾಲಿಕೆ



ಚನ್ನಕೇಶವ ದೇವಾಲಯ, ಸೋಮನಾಥಪುರ

# ಸಮಾಜ ವಿಜ್ಞಾನ ಪಾಸಿಂಗ್ ಪ್ಯಾಕೇಜ್







ಕೊಡುಗೆ : ಸಮಾಜ ವಿಜ್ಞಾನ ಶಿಕ್ಷಕರ ವೇದಿಕೆ, ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ

# ಮುನ್ನುಡಿ



ಆತ್ಮೀಯ ಶಿಕ್ಷಕ ಮಿತ್ರರೇ,

ಗುಣಾತ್ಮಕ ಬೋಧನೆಯಿಂದ ಮಾತ್ರ ಗುಣಾತ್ಮಕ ಫಲಿತಾಂಶ ಸಾಧಿಸಲು ಸಾಧ್ಯವಿದ್ದು, ಶಿಕ್ಷಕರೆಲ್ಲರೂ ಪೂರ್ವ ಸಿದ್ಧತೆಯೊಂದಿಗೆ ಉತ್ತಮ ಕಲಿಕೋಪಕರಣಗಳನ್ನು ಬಳಸಿ ಗುಣಾತ್ಮಕ ಬೋಧನೆ ನೀಡಬಹುದಾಗಿದೆ. ಗುಣಾತ್ಮಕ ಬೋಧನೆಯು ಈಡೇರಿದ್ದಲ್ಲಿ ಗುಣಾತ್ಮಕ ಫಲಿತಾಂಶವು ಸಾಧ್ಯವಾಗಬಲ್ಲದು. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ಕುರಿತು ನಮ್ಮ ತಾಲ್ಲೂಕಿನ ಪ್ರಮುಖ ಮೂರು ಧ್ಯೇಯಗಳು ಈ ಕೆಳಕಂಡಂತಿವೆ.

1. ಎಲ್ಲಾ ವಿದ್ಯಾರ್ಥಿಗಳು ಶೇ.100 ರಷ್ಟು ಫಲಿತಾಂಶದೊಂದಿಗೆ ಉತ್ತೀರ್ಣರಾಗಬೇಕು.
2. ಶೇ. 85 ಕ್ಕಿಂತ ಹೆಚ್ಚಿನ ಮಕ್ಕಳು ಶೇ.85 ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಬೇಕು.
3. ಹತ್ತು ಮಕ್ಕಳಿಗೆ ಒಬ್ಬರು 625ಕ್ಕೆ 625 ಅಂಕಗಳನ್ನು ಪಡೆದು ಉತ್ತೀರ್ಣರಾಗಬೇಕು.

ಈ ಮೇಲ್ಕಂಡ ಧ್ಯೇಯಗಳನ್ನು ಈಡೇರಿಸಲು ತಾಲ್ಲೂಕನ್ನು ಒಂದು ಘಟಕವಾಗಿ ಪರಿಗಣಿಸಿ, ಎಲ್ಲಾ ಮುಖ್ಯೋಪಾಧ್ಯಾಯರು ಹಾಗೂ ಸಹ ಶಿಕ್ಷಕರು, ಪೋಷಕರು ಮತ್ತು ಮಕ್ಕಳು ಕಾರ್ಯ ನಿರ್ವಹಿಸಬೇಕಾಗಿರುತ್ತದೆ.

**“One Team, On Aim”** ಎಂಬ ಮಾತಿನಂತೆ ಎಸ್.ಎಸ್.ಎಲ್.ಸಿ. ಮಕ್ಕಳಿಗೆ ಉತ್ತಮ ಕಾರ್ಯಕ್ರಮಗಳನ್ನು ಯೋಜಿಸಿ, ಅನುಷ್ಠಾನಗೊಳಿಸಿ ಮಕ್ಕಳ ಭವಿಷ್ಯಕ್ಕೆ ಉತ್ತಮ ಭಾಷ್ಯವನ್ನು ಬರೆಯಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಸಂತಸದಾಯಕ ಕಲಿಕೆಯು ಮಕ್ಕಳ ಕಲಿಕೆಗೆ ಪೂರಕ ಮತ್ತು ಪ್ರೇರಕ. ಈ ನಿಟ್ಟಿನಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಉತ್ತಮಪಡಿಸುವ ದೃಷ್ಟಿಯಿಂದ ಸಮಾಜ ವಿಜ್ಞಾನ ವಿಷಯದ ಪ್ರಶ್ನೋತ್ತರ ಕೈಪಿಡಿಯನ್ನು ರಚಿಸಿದ್ದು, ಈ ಕೈಪಿಡಿಯನ್ನು ಶಿಕ್ಷಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಆಶಿಸುತ್ತೇನೆ.

ಎಲ್ಲರಿಗೂ ಶುಭವಾಗಲಿ....

ಶ್ರೀ ಸ್ವಾಮಿ ಎಸ್.
ಕ್ಷೇತ್ರ ಶಿಕ್ಷಣಾಧಿಕಾರಿಗಳು,
ಸಾರ್ವಜನಿಕ ಶಿಕ್ಷಣ ಇಲಾಖೆ,
ತಿ.ನರಸೀಪುರ ತಾಲ್ಲೂಕು,ಮೈಸೂರು ಜಿಲ್ಲೆ.

# ಮುನ್ನುಡಿ



ಆತ್ಮೀಯ ಶಿಕ್ಷಕ ಮಿತ್ರರೇ,

10ನೇ ತರಗತಿ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಉತ್ತಮಗೊಳಿಸುವುದು ಹಾಗೂ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ಸಮಾಜ ವಿಜ್ಞಾನ ವಿಷಯದ ಪ್ರಶ್ನೋತ್ತರ ಕೈಪಿಡಿಯನ್ನು ಆಯ್ದ ಸಂಪನ್ಮೂಲ ಶಿಕ್ಷಕರ ತಂಡ ರಚಿಸಿದೆ. ಇದರ ಸದ್ಬಳಕೆಯನ್ನು ಸಮಾಜ ವಿಜ್ಞಾನ ಶಿಕ್ಷಕರು ಮಾಡಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರಣಕರ್ತರಾಗುವರೆಂದು ಆಶಿಸುತ್ತೇನೆ. ಈ ಪ್ರಶ್ನೋತ್ತರ ಕೈಪಿಡಿಯನ್ನು ಹೊರತರಲು ಶ್ರಮಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

ಶುಭವಾಗಲಿ.....


ಶ್ರೀ ಎಚ್.ಆರ್. ಗಂಗಾಧರ್

ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು,

ಸಾರ್ವಜನಿಕ ಶಿಕ್ಷಣ ಇಲಾಖೆ,

ತಿ.ನರಸೀಪುರ ತಾಲ್ಲೂಕು,ಮೈಸೂರು ಜಿಲ್ಲೆ.

# ಸಂಯೋಜಕರು



ಶ್ರೀ ಚಿನ್ನಸ್ವಾಮಿ

ಅಧ್ಯಕ್ಷರು, ತಾಲ್ಲೂಕು ಮುಖ್ಯಶಿಕ್ಷಕರ ಸಂಘ ಹಾಗೂ

ಮುಖ್ಯ ಶಿಕ್ಷಕರು, ಸ.ಪ್ರೌ.ಶಾಲೆ, ಅತ್ತಹಳ್ಳಿ, ತಿ.ನರಸೀಪುರ ತಾ.



ಶ್ರೀ ಎಸ್. ಸಿ. ಶಿವಮೂರ್ತಿ

ಉಪ ಪ್ರಾಂಶುಪಾಲರು, **GJC** ಸಂತೆಮಾಳ,

ತಿ.ನರಸೀಪುರ ಟೌನ್ ಮತ್ತು ತಾ.



ಶ್ರೀ ಡಿ.ಆರ್.ಪ್ರಸನ್ನ

ಮುಖ್ಯಶಿಕ್ಷಕರು, ಸ.ಪ್ರೌಢಶಾಲೆ,

ಮೇದಿನಿ, ತಿ.ನರಸೀಪುರ ತಾ.

# ಸಹಕಾರ



ಶ್ರೀ ಜಿ. ಪುಟ್ಟಸ್ವಾಮಿ

ಅಧ್ಯಕ್ಷರು, ಪ್ರೌಢಶಾಲಾ ಸಹಶಿಕ್ಷಕರ ಸಂಘ,

ತಿ.ನರಸೀಪುರ ತಾಲ್ಲೂಕು.

# ಸಂಪನ್ಮೂಲ ಕ್ರೋಢೀಕರಣ



ಶ್ರೀ ಜಿ. ರವೀಶ್

GJC, ಸಂತೆಮಾಳ, ತಿ.ನರಸೀಪುರ ಟೌನ್

ತಿ.ನರಸೀಪುರ ತಾ. ಮೈಸೂರು ಜಿಲ್ಲೆ



ಶ್ರೀ ರಾಘವೇಂದ್ರ

ಸರ್ಕಾರಿ ಪ್ರೌಢಶಾಲೆ, ವ್ಯಾಸರಾಜಪುರ

ತಿ.ನರಸೀಪುರ ತಾ. ಮೈಸೂರು ಜಿಲ್ಲೆ



ಶ್ರೀ ಪಿ.ಆರ್. ಮುರಳೀಧರ

ಸರ್ಕಾರಿ ಪ್ರೌಢಶಾಲೆ, ಹೆಗ್ಗೂರು

ತಿ.ನರಸೀಪುರ ತಾ. ಮೈಸೂರು ಜಿಲ್ಲೆ



ಶ್ರೀ ಶ್ರೀನಿವಾಸ ಮೂರ್ತಿ ಬಿ.ಎಂ.

ಸರ್ಕಾರಿ ಪ್ರೌಢಶಾಲೆ, ಮಾವಿನಹಳ್ಳಿ

ತಿ.ನರಸೀಪುರ ತಾ. ಮೈಸೂರು ಜಿಲ್ಲೆ



ಶ್ರೀ ಶ್ರೀನಿವಾಸ್ ಪಿ.

ಸರ್ಕಾರಿ ಪ್ರೌಢಶಾಲೆ, ಹಳೇ ಕೆಂಪಯ್ಯನಹುಂಡಿ

ತಿ.ನರಸೀಪುರ ತಾ. ಮೈಸೂರು ಜಿಲ್ಲೆ



ಶ್ರೀ ಕುಮಾರ್

G.J.C., ಮೂಗೂರು

ತಿ.ನರಸೀಪುರ ತಾ. ಮೈಸೂರು ಜಿಲ್ಲೆ

ತಾಂತ್ರಿಕ ನೆರವು:

ಶ್ರೀ ರಾಘವೇಂದ್ರ, ಸ.ಪ್ರೌ.ಶಾಲೆ, ವ್ಯಾಸರಾಜಪುರ, ತಿ.ನರಸೀಪುರ ತಾ. ಮೈಸೂರು ಜಿಲ್ಲೆ. ಮೊಬೈಲ್: 9740701904

# ಸೂಚನೆಗಳು:

* ‘ಸವಿಕಿರಣ’ ಎಂಬ ಹೊತ್ತಿಗೆಯನ್ನು ವಿದ್ಯಾರ್ಥಿಗಳು ಓದಿ ಮನನ ಮಾಡಿಕೊಳ್ಳುವುದು.
* ಸಾಧಾರಣ ಹಾಗೂ ನಿಧಾನಗತಿಯಲ್ಲಿ ಕಲಿಯುವವರಿಗಾಗಿ ಎಲ್ಲಾ ಅಧ್ಯಾಯಗಳಲ್ಲೂ ಅತಿ ಮುಖ್ಯವೆನಿಸಿದ ಅಂಶಗಳನ್ನು ಸಂಗ್ರಹಿಸಿದ್ದು, ಅವುಗಳನ್ನು ಕಲಿಸುವುದು.
* ಈ ಕಲಿಕಾಂಶಗಳನ್ನು ಶಾಲಾವಧಿ ಮತ್ತು ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.
* ನಿರಂತರ ಅಭ್ಯಾಸ ಮತ್ತು ಪುನರಾವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.
* ಇದು ಕೇವಲ ಕಲಿಕಾ ಸಹಾಯಕವೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.
* ಬಹು ಆಯ್ಕೆ ಹಾಗೂ ಬಿಟ್ಟ ಸ್ಥಳ ತುಂಬಿರಿ ಪ್ರಶ್ನೆಗಳಿಗೆ ಉತ್ತರವನ್ನು ಗಾಢ ಬಣ್ಣದಲ್ಲಿ ಗುರುತಿಸಲಾಗಿದೆ.

****************************************************************************************************

# ಪರಿವಿಡಿ


| ಕ್ರಮ ಸಂಖ್ಯೆ | ವಿಭಾಗಗಳು | ಪುಟ ಸಂಖ್ಯೆ |
|---|---|---|
| 1 | ಇತಿಹಾಸ | 01-15 |
| 2 | ರಾಜ್ಯಶಾಸ್ತ್ರ | 16-22 |
| 3 | ಸಮಾಜಶಾಸ್ತ್ರ | 23-27 |
| 4 | ಭೂಗೋಳಶಾಸ್ತ್ರ | 28-39 |
| 5 | ಅರ್ಥಶಾಸ್ತ್ರ | 40-44 |
| 6 | ವ್ಯವಹಾರ ಅಧ್ಯಯನ | 45-50 |
| 7 | ನಕ್ಷೆ | 51-52 |

# ಇತಿಹಾಸ

## ಅಧ್ಯಾಯ-1

## ಭಾರತಕ್ಕೆ ಯುರೋಪಿಯನ್ನರ ಆಗಮನ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 1453ರಲ್ಲಿ ಆಟೋಮಾನ್ ಟರ್ಕರು **ಕಾನ್ಸಟಾಂಟಿನೋಪಲ್** ನಗರವನ್ನು ವಶಪಡಿಸಿಕೊಂಡರು.

2 ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿದವನು **ವಾಸ್ಕೊಡಗಾಮ.**

3 ಜಲಮಾರ್ಗದ ಮೂಲಕ ಭಾರತಕ್ಕೆ ಬಂದ ಮೊದಲ ಮತ್ತು ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು **ಪೋರ್ಚುಗೀಸರು.**

4 ಪ್ಲಾಸಿ ಕದನವು 1757ರಲ್ಲಿ **ಬ್ರಿಟಿಷರು** ಮತ್ತು ಬಂಗಾಳದ ನವಾಬ **ಸಿರಾಜ್-ಉದ್-ದೌಲ**ರ ನಡುವೆ ನಡೆಯಿತು.

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ಕಾರಣವಾದ ಅಂಶಗಳಾವುವು? **ಅಥವಾ** ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ.' ಈ ಹೇಳಿಕೆಯನ್ನು ಸಮರ್ಥಿಸಿ.

ವೈಜ್ಞಾನಿಕ ಶೋಧನೆಗಳಾದ ದಿಕ್ಸೂಚಿ, ಆಸ್ಟ್ರೋಲೋಬ್, ಸಿಡಿಮದ್ದು, ಭೂಪಟಗಳು ಸಮುದ್ರಯಾನಕ್ಕೆ ನೆರವಾದವು. ಯುರೋಪ್ ರಾಜರು ನಾವಿಕರಿಗೆ ಪ್ರೋತ್ಸಾಹ ನೀಡಿದರು.

2 ಪ್ಲಾಸಿ ಕದನಕ್ಕೆ ಕಾರಣವಾದ ಅಂಶಗಳಾವುವು?

* ದಸ್ತಕ್ ಗಳ ದುರುಪಯೋಗ * ಅನುಮತಿ ಇಲ್ಲದೆ ಕೋಟೆಯ ದುರಸ್ಥಿ * ಕಪ್ಪು ಕೋಣೆ ದುರಂತ

3 ಪ್ಲಾಸಿ ಕದನದ ಪರಿಣಾಮಗಳನ್ನು ತಿಳಿಸಿ.

* ಸಿರಾಜ್-ಉದ್-ದೌಲ ಮಡಿದನು
* ಕಂಪನಿಯು ಬಂಗಾಳದಲ್ಲಿ ವ್ಯಾಪಾರದ ಅನಿರ್ಬಂಧಿತ ಹಕ್ಕನ್ನು ಪಡೆಯಿತು.
* ಮೀರ್ ಜಾಫರ್ ಬಂಗಾಳದ ನವಾಬನಾದನು
* ಕಂಪನಿಯು 17 ಕೋಟಿ 70 ಲಕ್ಷ ರೂಪಾಯಿಗಳನ್ನು ಪಡೆಯಿತು.

4 ಬಕ್ಸಾರ್ ಕದನದ ಪರಿಣಾಮಗಳಾವುವು?

* ಕಂಪನಿಯು ಬಂಗಾಳದಲ್ಲಿ ದಿವಾನಿ ಹಕ್ಕನ್ನು ಪಡೆಯಿತು * ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದನು
* ಔದ್ ನ ನವಾಬನು 50 ಲಕ್ಷ ರೂಪಾಯಿ ನೀಡಬೇಕಾಯಿತು * ಕಂಪನಿಯು ಬಂಗಾಳದ ಪೂರ್ಣ ಆಡಳಿತವನ್ನು ನಿರ್ವಹಿಸಿತು.

5 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು? ದ್ವಿ ಪ್ರಭುತ್ವ (ದ್ವಿ ಸರ್ಕಾರ ಪದ್ಧತಿ) ಪದ್ಧತಿಯನ್ನು ಜಾರಿಗೆ ತಂದವನು ಯಾರು?

ಬಂಗಾಳದಲ್ಲಿ ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಬ್ರಿಟಿಷರು, ಆಡಳಿತ, ನ್ಯಾಯವನ್ನು ನವಾಬನು ನಿರ್ವಹಿಸುತ್ತಿದ್ದನು. ಇದನ್ನು 'ದ್ವಿ ಪ್ರಭುತ್ವ' ಪದ್ಧತಿ ಎನ್ನುವರು. ಇದನ್ನು ಜಾರಿಗೆ ತಂದವನು ರಾಬರ್ಟ್ ಕ್ಲೈವ್.

6 ನೀಲಿ ನೀರಿನ ನೀತಿ ಎಂದರೇನು? ಈ ನೀತಿಯನ್ನು ಜಾರಿಗೆ ತಂದವನು ಯಾರು?

ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ ನೀತಿಯೇ 'ನೀಲಿ ನೀರಿನ ನೀತಿ.' ಈ ನೀತಿಯನ್ನು ಜಾರಿಗೆ ತಂದವನು ಫ್ರಾನ್ಸಿಸ್ಕೊ ಡಿ ಆಲ್ಮೆಡ.

ಶ್ರೀ ಶ್ರೀನಿವಾಸ ಶಾ. ಮೈಸೂರು ಜಿಲ್ಲೆ

# ಅಧ್ಯಾಯ-2

# ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1 ಮೊದಲನೇ ಆಂಗ್ಲೋ-ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯೆ ಈ ಒಪ್ಪಂದವಾಯಿತು.______

**ಅ) ಸಾಲ್ಬಾಯಿ ಒಪ್ಪಂದ** ಆ) ಮದ್ರಾಸ್ ಒಪ್ಪಂದ ಇ) ಪೂನಾ ಒಪ್ಪಂದ ಈ) ಅಮೃತಸರ ಒಪ್ಪಂದ

2 ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ದೇಶೀಯ ರಾಜ್ಯ ಇದಾಗಿದೆ._________

ಅ) ಮೈಸೂರು ಆ) ಪಂಜಾಬ್ **ಇ) ಹೈದರಾಬಾದ್ ಸಂಸ್ಥಾನ** ಈ) ಮರಾಠರು

3 ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದವನು.______

ಅ) ರಾಬರ್ಟ್ ಕ್ಲೈವ್ **ಆ) ಡಾಲ್ ಹೌಸಿ** ಇ) ಕಾರ್ನ್ ವಾಲೀಸ್ ಈ) ವೆಲ್ಲೆಸ್ಲಿ

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. 1798ರಲ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ಯಾರು?

ಲಾರ್ಡ್ ವೆಲ್ಲೆಸ್ಲಿ.

2 ಎರಡನೇ ಆಂಗ್ಲೋ-ಮರಾಠ ಯುದ್ಧದ ಸಂದರ್ಭದಲ್ಲಿ ಬಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮರಾಠ ಪೇಶ್ವೆ ಯಾರು?

2ನೇ ಬಾಜೀರಾವ್.

3 ಮೊದಲನೇ ಆಂಗ್ಲೋ-ಸಿಖ್ ಯುದ್ಧವು ಯಾವ ಒಪ್ಪಂದದಂತೆ ಅಂತ್ಯವಾಯಿತು?

ಲಾಹೋರ್ ಒಪ್ಪಂದ.

4 ಎರಡನೇ ಬಾಜೀರಾಯನು ಸಹಾಯಕ ಸೈನ್ಯ ಪದ್ಧತಿಗೆ ಒಳಪಡಲು ಕಾರಣವೇನು?

ಹೋಳ್ಕರನ ಸೈನ್ಯ 2ನೇ ಬಾಜೀರಾವ್ ಮತ್ತು ಸಿಂಧಿಯಾನ ಸೈನ್ಯವನ್ನು ಸೋಲಿಸಿದ್ದರಿಂದ.

5 ಲಾರ್ಡ್ ವೆಲ್ಲೆಸ್ಲಿ ಕಾಲದಲ್ಲಿ ಬ್ರಿಟಿಷ್ ಆಡಳಿತದ ವಿಸ್ತರಣೆ ಸುಲಭವಾಯಿತು.ಏಕೆ?

ಇವನ ಆಗಮನದ ಹೊತ್ತಿಗೆ ಮರಾಠ ಮತ್ತು ಮೈಸೂರು ರಾಜ್ಯಗಳು ದುರ್ಬಲಗೊಂಡಿದ್ದರಿಂದ ಸುಲಭವಾಯಿತು.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು?

* ಭಾರತೀಯ ರಾಜನು ತನ್ನ ರಾಜ್ಯದಲ್ಲಿ ಬ್ರಿಟಿಷ್ ಸೇನೆಯ ತುಕಡಿಯನ್ನು ಇಟ್ಟುಕೊಳ್ಳಬೇಕು.
* ಸೇನೆಯ ವೇತನ ಮತ್ತು ವೆಚ್ಚವನ್ನು ರಾಜ್ಯವೇ ಭರಿಸಬೇಕು. * ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
* ಬ್ರಿಟಿಷರ ಅನುಮತಿ ಇಲ್ಲದೆ ಇತರ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡುವಂತಿಲ್ಲ.

2 ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾವುವು?

ಸತಾರ, ಜೈಪುರ, ಉದಯಪುರ, ನಾಗಪುರ, ಝಾನ್ಸಿ.

## ಅಧ್ಯಾಯ-3

## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 'ಮಹಲ್' ಎಂದರೆ **ತಾಲ್ಲೂಕು** ಎಂದರ್ಥ.

2 ರೈತವಾರಿ ಪದ್ಧತಿಯನ್ನು ಮೊದಲಿಗೆ ಬಾರಮಹಲ್ ನಲ್ಲಿ **ಅಲೆಗ್ಸಾಂಡರ್ ರೀಡ್** ಎಂಬುವವನು ಹಾಗೂ ಮದ್ರಾಸ್ ಮತ್ತು ಮೈಸೂರಿನಲ್ಲಿ **ಥಾಮಸ್ ಮನ್ರೋ** ಎಂಬುವವನು ಜಾರಿಗೊಳಿಸಿದನು.

3 ಈ ಆಯೋಗದ ಶಿಫಾರಸ್ಸಿನ ಮೇರೆಗೆ ಡಾಲ್ ಹೌಸಿಯು ಕಲ್ಕತ್ತ, ಬಾಂಬೆ, ಮದ್ರಾಸ್ ಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದನು. **ಚಾರ್ಲ್ಸ್ ವುಡ್ ಆಯೋಗ.**

4 ರೆಗ್ಯುಲೇಟಿಂಗ್ ಕಾಯ್ದೆಯು **1773** ರಲ್ಲಿ ಜಾರಿಗೆ ಬಂದಿತು.

5 1909ರ ಭಾರತೀಯ ಪರಿಷತ್ ಕಾಯ್ದೆಯನ್ನು **ಮಿಂಟೋ ಮಾರ್ಲೆ ಸುಧಾರಣೆ ಕಾಯ್ದೆ** ಎಂತಲೂ ಕರೆಯುವರು.

6 ಮುಸ್ಲಿಮರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ 'ಪ್ರತ್ಯೇಕ ಚುನಾವಣಾ ಮತಗಟ್ಟೆ'ಗೆ ಅವಕಾಶ ಮಾಡಿಕೊಟ್ಟ ಕಾಯ್ದೆ **1909ರ ಭಾರತೀಯ ಪರಿಷತ್ ಕಾಯ್ದೆ.**

7 1919ರ ಭಾರತೀಯ ಪರಿಷತ್ ಕಾಯ್ದೆಯನ್ನು **ಮಾಂಟೆಗೋ-ಚಮ್ಸ್‌ಫರ್ಡ್ ಸುಧಾರಣೆ ಕಾಯ್ದೆ** ಎಂತಲೂ ಕರೆಯುವರು.

8 ಅಖಿಲ ಭಾರತ ಒಕ್ಕೂಟ ರಚನೆಗೆ ಅವಕಾಶ ಮಾಡಿಕೊಟ್ಟ ಕಾಯ್ದೆ **1935ರ ಭಾರತ ಸರ್ಕಾರ ಕಾಯ್ದೆ**.

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೊಳಿಸಿವನು ಮತ್ತು ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದವನು ಹಾಗೂ ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವನು ಯಾರು?

ಲಾರ್ಡ್ ಕಾರ್ನ್ ವಾಲೀಸ್.

2 ಕಲ್ಕತ್ತದಲ್ಲಿ ಸುಪ್ರೀಂ ಕೋರ್ಟ್ (ಸರ್ವೋಚ್ಛ ನ್ಯಾಯಾಲಯ) ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಕಾಯ್ದೆ (ಶಾಸನ) ಯಾವುದು?

1773ರ ರೆಗ್ಯುಲೇಟಿಂಗ್ ಕಾಯ್ದೆ.

3 ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲೀಷ್ ಶಿಕ್ಷಣದ ವಿಸ್ತರಣೆ ಹೆಚ್ಚಿಸಿದ ಹಾಗೂ ಭಾರತಕ್ಕೆ ಚರ್ಚ್ ಪ್ರವೇಶಿಸಲು ಅವಕಾಶ ಮಾಡಿಕೊಟ್ಟ ಕಾಯ್ದೆ ಯಾವುದು?

1813ರ ಚಾರ್ಟರ್ ಕಾಯ್ದೆ.

4 ಬಂಗಾಳದ ಗವರ್ನರ್ ಜನರಲ್ ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಿದ ಕಾಯ್ದೆ ಯಾವುದು

1833 ಚಾರ್ಟರ್ ಕಾಯ್ದೆ.

5 'ಪಾಲಿಸಿ ಆಫ್ ಅಸೋಸಿಯೇಷನ್' ಎಂದರೇನು?

ಭಾರತೀಯರು ಬ್ರಿಟಿಷರ ಬಗ್ಗೆ ತಿಳಿದಿರುವ ಅಭಿಪ್ರಾಯಗಳನ್ನು ತಿಳಿಯಲು ಭಾರತೀಯರಿಗೆ ಪ್ರಾತಿನಿಧ್ಯ ನೀಡಲಾಯಿತು. ಇದನ್ನು 'ಪಾಲಿಸಿ ಆಫ್ ಅಸೋಸಿಯೇಷನ್' ಎನ್ನುವರು.

6 ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚನೆಗೆ, ಪ್ರಾಂತ್ಯದಲ್ಲಿ ದ್ವಿ ಸರ್ಕಾರ ಪದ್ಧತಿಗೆ ಅವಕಾಶ ಮಾಡಿಕೊಟ್ಟ, 'ಪ್ರತ್ಯೇಕ ಚುನಾವಣಾ ಮತಗಟ್ಟೆ'ಯನ್ನು ಮುಸ್ಲಿಂ, ಸಿಖ್, ಆಂಗ್ಲೋ ಭಾರತೀಯರಿಗೂ ವಿಸ್ತರಿಸಿದ ಕಾಯ್ದೆ ಯಾವುದು?

1919ರ ಬಾರತೀಯ ಪರಿಷತ್ ಕಾಯ್ದೆ.

7 ಕೇಂದ್ರದಲ್ಲಿ ದ್ವಿ ಸರ್ಕಾರವನ್ನು, ಸ್ಥಾಪಿಸಿದ ಹಾಗೂ ಪ್ರಾಂತ್ಯದಲ್ಲಿ ದ್ವಿ ಸರ್ಕಾರವನ್ನು ರದ್ಧುಗೊಳಿಸಿದ ಕಾಯ್ದೆ ಯಾವುದು?

1935ರ ಭಾರತ ಸರ್ಕಾರದ ಕಾಯ್ದೆ.

8 ಭಾರತೀಯ ರಿಸರ್ವ್ ಬ್ಯಾಂಕು ಮತ್ತು ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಕಾಯ್ದೆ ಯಾವುದು?

1935ರ ಭಾರತ ಸರ್ಕಾರದ ಕಾಯ್ದೆ.

**III ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಭಾರತೀಯರ ಮೇಲೆ ಬ್ರಿಟಿಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳನ್ನು ವಿವರಿಸಿ.

* ಭಾರತೀಯರು ಆಧುನಿಕತೆ, ಪ್ರಜಾಪ್ರಭುತ್ವ ಮುಂತಾದ ಮೌಲ್ಯಗಳನ್ನು ರೂಢಿಸಿಕೊಂಡರು.
* ಸ್ಥಳೀಯ ಭಾಷೆಯಲ್ಲಿ ಸಾಹಿತ್ಯ ರಚನೆಯಾಯಿತು.
* ವೃತ್ತ ಪತ್ರಿಕೆಗಳು ಹುಟ್ಟಿಕೊಂಡವು.
* ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿ ನಡೆದವು.
* ರಾಷ್ಟ್ರೀಯ ಜಾಗೃತಿಗೆ ಸಹಾಯ.
* ಭಾರತದ ಸಾಂಸ್ಕೃತಿಕ ಪರಂಪರೆಯ ಪರಿಚಯವಾಯಿತು.
* ಇಂಗ್ಲೀಷ್ ಸಂಪರ್ಕ ಭಾಷೆಯಾಯಿತು.

2 1935ರ ಭಾರತ ಸರ್ಕಾರ ಕಾಯ್ದೆಯು "ಭಾರತ ಸಂವಿಧಾನದ ಬುನಾದಿ" ಸಮರ್ಥಿಸಿ.

* ಭಾರತದ ಸಂವಿಧಾನದ ರಚನೆಗೆ ಈ ಕಾಯ್ದೆ ಬುನಾದಿಯಾಗಿದೆ
* ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿವೆ
* ಸಂಪೂರ್ಣ ಜವಾಬ್ದಾರಿ ಸರ್ಕಾರ ರಚನೆಗೆ ಅವಕಾಶ
* ಅಖಿಲ ಭಾರತ ಒಕ್ಕೂಟ ರಚನೆಗೆ ಅವಕಾಶ
* ಕೇಂದ್ರದಲ್ಲಿ ದ್ವಿ ಸರ್ಕಾರ ಜಾರಿಗೆ
* ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ
* ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ರದ್ದು
* ಭಾರತೀಯ ರಿಸರ್ವ್ ಬ್ಯಾಂಕು ಸ್ಥಾಪನೆ

3 ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳಾವುವು?

* ಇಂಗ್ಲೀಷ್ ಶಿಕ್ಷಣ ಜಾರಿ
* ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಲಾಯಿತು.
* ಕಲ್ಕತ್ತ, ಬಾಂಬೆ, ಮದ್ರಾಸ್ ಗಳಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ
* ಶಿಕ್ಷಣದ ಸಾರ್ವತ್ರೀಕರಣ
* ಕಲ್ಕತ್ತಾ ಮದರಸಾ ಸ್ಥಾಪನೆ
* ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜು ಸ್ಥಾಪನೆ.

4 ಜಮೀನ್ದಾರಿ ಪದ್ಧತಿಯು ರೈತವಾರಿ ಪದ್ಧತಿಗಿಂತ ಹೇಗೆ ಭಿನ್ನವಾಗಿದೆ?

**ಜಮೀನ್ದಾರಿ ಪದ್ಧತಿ:** ಲಾರ್ಡ್ ಕಾರ್ನ್ ವಾಲೀಸನು ಜಾರಿಗೆ ತಂದನು. ಜಮೀನ್ದಾರನು ಭೂಮಾಲೀಕನಾದನು. ಇವನು ಪ್ರತಿ ವರ್ಷ ಸರ್ಕಾರಕ್ಕೆ ಕಂದಾಯ ನೀಡಬೇಕಾಯಿತು. ಇವರು ನಿಗಧಿತ ಕಂದಾಯಕ್ಕಿಂತ ಹೆಚ್ಚು ವಸೂಲು ಮಾಡಿ ರೈತರನ್ನು ಶೋಷಿಸಿದರು.

**ರೈತವಾರಿ ಪದ್ಧತಿ:** ಈ ಪದ್ಧತಿಯನ್ನು ಥಾಮಸ್ ಮನ್ರೋ ಜಾರಿಗೆ ತಂದನು. ರೈತನು ಭೂಮಿಯ ಹಕ್ಕನ್ನು ಹೊಂದಿದನು. ಶೇ.50ರಷ್ಟು ಕಂದಾಯ ನೀಡಬೇಕಿತ್ತು. ರೈತರೇ ನೇರವಾಗಿ ಕಂದಾಯ ನೀಡುತಿದ್ದರು. ಕಂದಾಯವನ್ನು 30 ವರ್ಷಗಳ ಅವಧಿಗೆ ನಿಗಧಿಗೊಳಿಸಲಾಗಿತ್ತು.

5 ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳೇನು?

* ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು
* ರೈತರು ಜಮೀನ್ದಾರರ ಶೋಷಣೆಗೆ ಒಳಗಾದರು
* ಭೂಮಿ ಮಾರಾಟದ ವಸ್ತುವಾಯಿತು
* ಕೃಷಿಯು ವಾಣಿಜ್ಯೀಕರಣಗೊಂಡಿತು
* ಲೇವಾದೇವಿಗಾರರು ಬಲಿಷ್ಠರಾದರು
* ರೈತರು ಹೆಚ್ಚು ಭೂಕಂದಾಯ ಕೊಡಬೇಕಿತ್ತು.

6 1919ರ ಕಾಯ್ದೆಯ ಪ್ರಮುಖಾಂಶಗಳಾವುವು?

* ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚನೆ
* ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ
* ಭಾರತಕ್ಕೆ ಒಬ್ಬ ಹೈ ಕಮಿಷನರ್ ನೇಮಕ
* ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ
* ಕೇಂದ್ರ ಬಜೆಟ್ ನಿಂದ ಪ್ರಾಂತ್ಯಗಳ ಬಜೆಟ್ ಬೇರ್ಪಡಿಸಲಾಯಿತು
* ಮುಸ್ಲಿಂ, ಸಿಖ್, ಆಂಗ್ಲೋ ಭಾರತೀಯರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆ ಸೌಲಭ್ಯ.

7 ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಬ್ರಿಟಿಷರು ಭಾರತದಲ್ಲಿ ರೂಪಿಸಿದ ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಗಳಲ್ಲಿ ಆದ ಸುಧಾರಣೆಗಳನ್ನು ತಿಳಿಸಿ.

**ನ್ಯಾಯಾಂಗ ವ್ಯವಸ್ಥೆ:**

* ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯಗಳು ಮತ್ತು 'ಫೌಜುದಾರಿ ಅದಾಲತ್' ಎಂಬ ಅಪರಾಧ

ನ್ಯಾಯಾಲಯಗಳ ಸ್ಥಾಪನೆ.

* ನಾಗರಿಕ ನ್ಯಾಯಾಲಯಗಳು ಯುರೋಪಿನ ಜಿಲ್ಲಾಧಿಕಾರಿಗಳ ಮೂಲಕ ನಡೆಯುತ್ತಿತ್ತು.
* ಅಪರಾಧ ನ್ಯಾಯಾಲಯಗಳು ಯುರೋಪಿನ ಮೇಲ್ವಿಚಾರಣೆಯಲ್ಲಿ 'ಕಾಜಿ'ಗಳ ಮೂಲಕ ನಡೆಯುತ್ತಿತ್ತು.

**ಪೊಲೀಸ್ ವ್ಯವಸ್ಥೆ:**

* ಲಾರ್ಡ್ ಕಾರ್ನ್ ವಾಲೀಸನು ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಜಾರಿಗೆ ತಂದನು
* ಸೂಪರಿಡೆಂಟೆಂಟ್ ಆಫ್ ಪೊಲೀಸ್ ಎಂಬ ಹುದ್ದೆ ಸೃಷ್ಟಿ * ಪ್ರತಿ ಜಿಲ್ಲೆಯನ್ನು ಠಾಣೆಗಳಾಗಿ ವಿಭಜಿಸಲಾಯಿತು.
* 1861ರಲ್ಲಿ 'ಪೊಲೀಸ್ ಕಾಯ್ದೆ' ಜಾರಿಗೆ

8 ಬ್ರಿಟಿಷ್ ಆಳ್ವಿಕೆಯ ಪರಿಣಾಮವಾಗಿ ಭಾರತದ ನಾಗರಿಕ ಸೇವೆ ಮತ್ತು ಸೈನ್ಯ ವ್ಯವಸ್ಥೆಯಲ್ಲಿ ಆದ ಪ್ರಮುಖ ಬದಲಾವಣೆಗಳನ್ನು ವಿವರಿಸಿ.

**ನಾಗರಿಕ ಸೇವೆಗಳು:**

* ಲಾರ್ಡ್ ಕಾರ್ನ್ ವಾಲೀಸನು ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು.
* ನಾಗರಿಕ ಸೇವೆಗೆ ತರಬೇತಿ ನೀಡಲು ಕಲ್ಕತ್ತಾದಲ್ಲಿ ಕಾಲೇಜು ಸ್ಥಾಪನೆ
* 1853ರ ನಂತರ ನಾಗರಿಕ ಸೇವೆಯ ನೇಮಕಾತಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ನಿರ್ಧಾರ.
* ಇದರಿಂದ ಭಾರತೀಯರಿಗೆ ಹೆಚ್ಚಿನ ಪ್ರಯೋಜನವಾಗಲಿಲ್ಲ.

**ಸೈನ್ಯ ವ್ಯವಸ್ಥೆ:**

* ಬ್ರಿಟಿಷರು ಭಾರತೀಯರನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡು ವಿರೋಧಿಗಳನ್ನು ಹತ್ತಿಕ್ಕಿದರು.
* ಅಧಿಕಾರಿಗಳು ಬ್ರಿಟಿಷರೇ ಆಗಿದ್ದರು * ಭಾರತೀಯರಿಗೆ ಲಭಿಸುತ್ತಿದ್ದ ಉನ್ನತ ಹುದ್ದೆಯೆಂದರೆ ಸುಬೇದಾರ್ ಸ್ಥಾನ.
* ಪೀಲ್ ಶಿಫಾರಸ್ಸಿನಂತೆ ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲಾಯಿತು.

## ಅಧ್ಯಾಯ-4

## ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಮೊದಲನೇ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಯಾಯಿತು?

ಮದ್ರಾಸ್ ಒಪ್ಪಂದ.

2 ಎರಡನೇ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಯಾಯಿತು?

ಮಂಗಳೂರು ಒಪ್ಪಂದ.

3 ಮೂರನೇ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಯಾಯಿತು?

ಶ್ರೀರಂಗಪಟ್ಟಣ ಒಪ್ಪಂದ.

4 ಸುರಪುರದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದವರು ಯಾರು?

ವೆಂಕಟಪ್ಪನಾಯಕ.

5 ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ದಂಗೆ ಏಳಲು ಕಾರಣವೇನು?

ಬ್ರಿಟಿಷರು ಜಾರಿಗೆ ತಂದ ಶಸ್ತ್ರ ಬಳಕೆ ನಿರ್ಬಂಧದ ಕಾಯ್ದೆಯನ್ನು ವಿರೋಧಿಸಿ ದಂಗೆ ಎದ್ದರು.

6 ಅಮರ ಸುಳ್ಯ ಬಂಡಾಯವು ಮೂಲತಃ ಯಾರ ಬಂಡಾಯವಾಗಿದೆ?

ರೈತರ ಬಂಡಾಯ.

**II ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ. **ಅಥವಾ** ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ತಿಳಿಸಿ.

* ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವು ಅಪಾರವಾದದು
* ಕಿತ್ತೂರಿನ ಯುದ್ಧದಲ್ಲಿ ಸೆರೆಯಾಗಿ ನಂತರ ಬಿಡುಗಡೆಯಾದನು
* ಬ್ರಿಟಿಷರ ವಿರುದ್ಧ ಸೈನಿಕರನ್ನು ಸಂಘಟಿಸಿದನು
* ಗುಪ್ತ ಸಭೆ ನಡೆಸಿ ಮುಂದಿನ ಯೋಜನೆಗಳನ್ನು ರೂಪಿಸಿದನು
* ತಾಲ್ಲೂಕು ಕಛೇರಿ ಮತ್ತು ಖಜಾನೆಗಳನ್ನು ಲೂಟಿ ಮಾಡಿದನು
* ಬ್ರಿಟಿಷರು ರಾಯಣ್ಣನನ್ನು ಬಂಧಿಸಲು ಸಂಚು ರೂಪಿಸಿ ದೇಸಾಯಿಗಳನ್ನು ಪ್ರಚೋದಿಸಿದರು
* ರಾಯಣ್ಣನನ್ನು ಬಂಧಿಸಿ ಗಲ್ಲಿಗೇರಿಸಲಾಯಿತು.

2 ಸ್ವಾತಂತ್ರ್ಯ ಹೋರಾಟದ ಸಂಧರ್ಭ ಬ್ರಿಟಿಷರ ವಿರುದ್ಧ ನಡೆದ ಕಿತ್ತೂರಿನ ಬಂಡಾಯವನ್ನು ವಿವರಿಸಿ.

ಕಿತ್ತೂರಿನ ರಾಣಿ ಚೆನ್ನಮ್ಮಳು ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಮಗುವನ್ನು ದತ್ತು ತೆಗೆದುಕೊಂಡರು. ಇದು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಗೆ ವಿರುದ್ಧವಾಗಿದ್ದು, ಬ್ರಿಟಿಷರು ಕಿತ್ತೂರನ್ನು ವಶಪಡಿಸಿಕೊಳ್ಳಲು ಮುಂದಾದರು. ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಯುದ್ಧ ಸಾರಿ ಅನೇಕ ಬ್ರಿಟಿಷ್ ಸೈನಿಕರನ್ನು ಬಂಧಿಸಿದಳು. ಕೊನೆಗೆ ಚೆನ್ನಮ್ಮ ಬಂಧಿಯಾದಳು. ನಂತರ ಸಂಗೊಳ್ಳಿ ರಾಯಣ್ಣನು ಕಿತ್ತೂರಿನಲ್ಲಿ ಹೋರಾಟವನ್ನು ಮುಂದುವರಿಸಿ ಸೈನ್ಯವನ್ನು ಸಂಘಟಿಸಿನು. ತಾಲ್ಲೂಕು ಕಛೇರಿ ಮತ್ತು ಖಜಾನೆಗಳನ್ನು ಲೂಟಿ ಮಾಡಿದನು. ಬ್ರಿಟಿಷರು ಸಂಚಿನಿಂದ ರಾಯಣ್ಣನನ್ನು ಬಂಧಿಸಿ ಗಲ್ಲಿಗೇರಿಸಿದರು.

3 ದೋಂಡಿಯಾ ವಾಘ್ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.

* ಬ್ರಿಟಿಷರ ವಿರುದ್ಧದ ದಂಗೆಗಳಲ್ಲಿ ದೋಂಡಿಯಾ ವಾಘ್ ನ ಸಶಸ್ತ್ರ ದಂಗೆ ಪ್ರಮುಖವಾಗಿದೆ
* ಹೈದರನ ಸೈನ್ಯದಲ್ಲಿ ಸೇರಿ ಮುಂದೆ ಸೇನಾ ನಾಯಕನಾದನು
* ಟಿಪ್ಪುವಿನೊಂದಿಗೆ ಮನಸ್ತಾಪವಾಗಿ ಸೆರೆಮನೆ ಸೇರಿದನು
* ಟಿಪ್ಪುವಿನ ಮರಣಾನಂತರ ಬಿಡುಗಡೆಯಾಗಿ ಒಂದು ಸೈನ್ಯ ಕಟ್ಟಿದನು
* ಶಿವಮೊಗ್ಗ ಮತ್ತು ಬಿದನೂರನ್ನು ವಶಪಡಿಸಿಕೊಂಡನು
* ಬ್ರಿಟಿಷರು ಶಿಕಾರಿಪುರವನ್ನು ವಶಪಡಿಸಿಕೊಂಡಾಗ ಅಲ್ಲಿಂದ ತೆರಳಿ ಅನೇಕ ಪಾಳೇಗಾರರು ಮತ್ತು ಫ್ರೆಂಚರ ನೆರವಿನಿಂದ ಹೋರಾಟ ಮುಂದುವರಿಸಿದನು
* ಕೊನೆಗೆ ಬ್ರಿಟಿಷರು ದೋಂಡಿಯಾನನ್ನು ಬಂಧಿಸಿ ಹತ್ಯೆ ಮಾಡಿದರು.

4 ಮೂರನೆಯ ಆಂಗ್ಲೋ-ಮೈಸೂರು ಯುದ್ಧದ ಪರಿಣಾಮಗಳನ್ನು ತಿಳಿಸಿ. **ಅಥವಾ** ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳು ಯಾವುವು? **ಅಥವಾ** 'ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅವಮಾನಕರವಾದ ಒಪ್ಪಂದವಾಗಿತ್ತು.' ವಿಮರ್ಶಿಸಿ.

* ಟಿಪ್ಪು ಯುದ್ಧದಲ್ಲಿ ಸೋತನು
* ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಟ್ಟನು
* ಯುದ್ಧ ನಷ್ಟಕ್ಕಾಗಿ ಮೂರು ಕೋಟಿ ರೂಪಾಯಿಗಳನ್ನು ಕೊಡಬೇಕಾಯಿತು
* ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿಟ್ಟನು
* ಯುದ್ಧದಲ್ಲಿ ಸೆರೆಯಾದ ಸೈನಿಕರನ್ನು ಬಿಡುಗಡೆ ಮಾಡುವುದು
* ಶ್ರೀರಂಗಪಟ್ಟಣದಿಂದ ಬ್ರಿಟಿಷರು ಸೇನೆಯನ್ನು ಹಿಂತೆಗೆದರು.

5 ಹೈದರಾಲಿ ಹೇಗೆ ಅಧಿಕಾರಕ್ಕೆ ಬಂದನು?

* ಹೈದರಾಲಿಯು ಮೈಸೂರು ರಾಜ್ಯದ ಸೇವೆಗೆ ಸಾಮಾನ್ಯ ಸೈನಿಕನಾಗಿ ಸೇರಿದನು.
* ಇವನು ತನ್ನ ಚಾಣಾಕ್ಷ ರಾಜಕೀಯ ನಡೆಗೆ ಹೆಸರಾಗಿದ್ದನು
* ಮೈಸೂರಿನ ರಾಜಕೀಯ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದನು
* ದೇವನಹಳ್ಳಿ ಮುತ್ತಿಗೆ ಮತ್ತು ಆರ್ಕಾಟಿನ ನಿಜಾಮನ ವಿರುದ್ಧದ ಸೈನಿಕ ದಾಳಿಯ ವೇಳೆ ಏಳಿಗೆಗೆ ಬಂದನು

* ಸೈನಿಕರನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಂಡನು * ದಳವಾಯಿಗಳ ಬಲ ಕುಂದಿಸಿದನು
* ಮೈಸೂರು ಒಡೆಯರನ್ನು ಮೂಲೆ ಗುಂಪು ಮಾಡಿ ಅಧಿಕಾರಕ್ಕೆ ಬಂದನು.

## ಅಧ್ಯಾಯ-5

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

**I ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 19ನೇ ಶತಮಾನವನ್ನು ಭಾರತದ ಚರಿತ್ರೆಯಲ್ಲಿ 'ಭಾರತೀಯ ನವೋದಯ ಕಾಲ'ವೆಂದು ಕರೆಯಲಾಗಿದೆ. ಏಕೆ?
* ಈ ಅವಧಿಯಲ್ಲಿ ಭಾರತೀಯರಿಗೆ ಪಾಶ್ಚಿಮಾತ್ಯ ನಾಗರಿಕತೆಯ ಸಂಪರ್ಕವು ಬೆಳೆಯಿತು.
* ಭಾರತೀಯ ವಿದ್ಯಾವಂತ ವರ್ಗ ಸೃಷ್ಟಿಯಾಯಿತು. * ಸಮಾನತೆ, ರಾಷ್ಟ್ರೀಯತೆ ಮುಂತಾದವು ಪರಿಚಯವಾದವು.
* ಅನೇಕ ಸುಧಾರಕರು ಸಮಾಜದ ಸುಧಾರಣೆಗಾಗಿ ಶ್ರಮಿಸಿದರು.

2 ಬ್ರಹ್ಮ ಸಮಾಜದ ಬೋಧನೆಗಳೇನು? **ಅಥವಾ** ಭಾರತದ ಸಾಮಾಜಿಕ ಸುಧಾರಣೆಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು?
* ಏಕ ದೇವತಾರಾಧನೆಯನ್ನು ಪ್ರತಿಪಾದಿಸಿತು. * ಸತಿ ಪದ್ಧತಿ ನಿಷೇಧಕ್ಕೆ ಶ್ರಮಿಸಿತು
* ಜಾತಿ ಪದ್ಧತಿ, ಮೂಢನಂಬಿಕೆ, ಬಹು ಪತ್ನಿತ್ವ, ಬಾಲ್ಯ ವಿವಾಹವನ್ನು ವಿರೋಧಿಸಿತು. * ಸ್ತ್ರೀ ಸಮಾನತೆ

3 ದಯಾನಂದ ಸರಸ್ವತಿಯವರ "ವೇದಗಳಿಗೆ ಮರಳಿ" (ವೇದಗಳಿಗೆ ಹಿಂದಿರುಗಿ) ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ.
* ಆಧುನಿಕ ಭಾರತದ ಸಮಸ್ಯೆಗಳಿಗೆ ಪರಿಹಾರ ವೇದಗಳಲ್ಲಿದೆ ಎಂದರು * 'ವೇದಗಳಿಗೆ ಹಿಂದಿರುಗಿ' ಎಂದು ಕರೆಕೊಟ್ಟರು
* ವೇದಗಳೇ ಶ್ರೇಷ್ಠ ಎಂದರು * ಶುದ್ಧಿ ಚಳವಳಿ ಆರಂಭಿಸಿದರು
* ಜಾತಿ ಪದ್ಧತಿ, ಬಹು ಪತ್ನಿತ್ವ, ಬಾಲ್ಯ ವಿವಾಹಕ್ಕೆ ವಿರೋಧ. * ಸ್ತೀ ಸಮಾನತೆ

4 ಪ್ರಾರ್ಥನಾ ಸಮಾಜದ (ಆತ್ಮರಾಮ್ ಪಾಂಡುರಂಗರವರ) **ಅಥವಾ** ಮಹದೇವ ಗೋವಿಂದ ರಾನಡೆರವರ ಸುಧಾರಣೆಗಳೇನು?
* ಜಾತಿ ಪದ್ಧತಿಗೆ ವಿರೋಧ * ಸ್ತ್ರೀ ಸಮಾನತೆ ಮತ್ತು ಶಿಕ್ಷಣಕ್ಕೆ ಒತ್ತು
* ಬಾಲ್ಯ ವಿವಾಹಕ್ಕೆ ವಿರೋಧ * ವಿದವಾ ವಿವಾಹಕ್ಕೆ ಪ್ರೋತ್ಸಾಹ.

5 ಸತ್ಯ ಶೋಧಕ ಸಮಾಜವು (ಜ್ಯೋತಿಬಾ ಫುಲೆರವರು) ಪ್ರತಿಪಾದಿಸಿದ ಸುಧಾರಣೆಗಳಾವುವು?
* ಜಾತಿ ಪದ್ಧತಿಗೆ, ಬಾಲ್ಯ ವಿವಾಹಕ್ಕೆ ವಿರೋಧ. * ಸ್ತ್ರೀ ಸಮಾನತೆ
* ಸ್ತ್ರೀ ಮತ್ತು ಶೂದ್ರರ ಶಿಕ್ಷಣಕ್ಕೆ ಒತ್ತು * ಹೆಣ್ಣು ಮಕ್ಕಳಿಗೆ ವಸತಿ ನಿಲಯ ಸ್ಥಾಪನೆ.

6 ಅಲಿಘರ್ ಚಳವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ. **ಅಥವಾ** ಸರ್ ಸಯ್ಯದ್ ಅಹಮದ್ ಖಾನ್ ರವರ ಸುಧಾರಣೆಗಳೇನು?
* ಮುಸ್ಲಿಮರಿಗೆ ಆಧುನಿಕ ಶಿಕ್ಷಣ ನೀಡುವುದು * ಸಂಪ್ರದಾಯ, ಮೌಢ್ಯತೆಗೆ ವಿರೋಧ
* ಪರದಾ ಪದ್ಧತಿ ಮತ್ತು ಬಹು ಪತ್ನಿತ್ವಕ್ಕೆ ವಿರೋಧ * ಹಿಂದೂ ಮುಸ್ಲಿಮರ ಐಕ್ಯತೆ
* ಆಂಗ್ಲೋ ಓರಿಯಂಟಲ್ ಕಾಲೇಜು ಆರಂಭ.

7 'ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು.' ಸಮರ್ಥಿಸಿ.
* ಜೀವನ ಪ್ರೀತಿಯ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಿಸಿದರು
* 'ಯುವಕರೇ ಏಳಿ, ಎದ್ದೇಳಿ. ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂದರು.
* ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು
* ಯುವಕರೇ ದೇಶದ ನಿಜವಾದ ಶಕ್ತಿ ಎಂದು ಹೇಳಿ ಯುವ ಶಕ್ತಿ ಪ್ರೇರಕರಾಗಿದ್ದರು.

8 ನಾರಾಯಣ ಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.
* 'ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು' ಎಂಬ ತತ್ವದ ಪ್ರತಿಪಾದನೆ * ಶಿಕ್ಷಣಕ್ಕೆ ಹೆಚ್ಚು ಒತ್ತು
* ಪರ್ಯಾಯ ದೇವಾಲಯಗಳ ಸ್ಥಾಪನೆ * ದೇವಾಲಯ ಪ್ರವೇಶ ಚಳವಳಿ.

**II ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 'ಆಧುನಿಕ ಭಾರತದ ಹರಿಕಾರ', ಭಾರತದ ಪುನರುಜ್ಜೀವನದ ಜನಕ', 'ಭಾರತೀಯ ರಾಷ್ಟ್ರೀಯತೆಯ ಪ್ರವಾದಿ' ಎನಿಸಿಕೊಂಡವರು ಮತ್ತು 'ಸಂವಾದ ಕೌಮುದಿ' ಎಂಬ ಪತ್ರಿಕೆಯನ್ನು ಆರಂಭಿಸಿದವರು **ರಾಜಾ ರಾಮ್ ಮೋಹನ್ ರಾಯ್**

2 'ವೇದಗಳಿಗೆ ಮರಳಿ' ಎಂದು ಕರೆಕೊಟ್ಟವರು ಮತ್ತು 'ಸತ್ಯಾರ್ಥ ಪ್ರಕಾಶ' ಗ್ರಂಥ ರಚಿಸಿದವರು ಮತ್ತು 'ಗೋ ರಕ್ಷಣಾ ಸಂಘ' ಆರಂಭಿಸಿದವರು **ದಯಾನಂದ ಸರಸ್ವತಿ.**

3 'ಗುಲಾಮ ಗಿರಿ' ಗ್ರಂಥವನ್ನು ರಚಿಸಿದವರು **ಜ್ಯೋತಿಭಾ ಫುಲೆ.**

4 ಅಲಿಘರದಲ್ಲಿ ಮಹಮದನ್ ಆಂಗ್ಲೋ ಓರಿಯಂಟಲ್ ಕಾಲೇಜು ಸ್ಥಾಪಿಸಿದವರು **ಸರ್ ಸೈಯದ್ ಅಹಮದ್ ಖಾನ್.**

5 ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಅನ್ನು ಸ್ಥಾಪಿಸಲು ಕಾರಣ **ರಾಮಕೃಷ್ಣ ಪರಮಹಂಸರ ಚಿಂತನೆಗಳನ್ನು ಹಾಗೂ ತಮ್ಮ ಆಶಯಗಳನ್ನು ಜನರಿಗೆ ತಲುಪಿಸಲು.**

6 ಸೆಂಟ್ರಲ್ ಹಿಂದೂ ಕಾಲೇಜುನ್ನು ಸ್ಥಾಪಿಸಿದವರು, 'ನ್ಯೂ ಇಂಡಿಯಾ' ಮತ್ತು 'ಕಾಮನ್ ವ್ಹೀಲ್' ಪತ್ರಿಕೆ ಆರಂಭಿಸಿದ 'ಶ್ವೇತ ಸರಸ್ವತಿ' **ಅನಿಬೆಸಂಟ್.**

7 ವೈಕಂ ಸತ್ಯಾಗ್ರಹ ನಡೆಸಿದವರು **ನಾರಾಯಣ ಗುರು.**

8 'ಆತ್ಮ ಗೌರವ ಚಳವಳಿ' ಆರಂಭಿಸಿದವರು **ಪೆರಿಯಾರ್ ರಾಮಸ್ವಾಮಿ ನಾಯ್ಕರ್**.

9 ಸ್ವಾಮಿ ವಿವೇಕಾನಂದರು 1893ರಲ್ಲಿ ನಡೆದ ಅಮೇರಿಕಾದ **ಚಿಕಾಗೊ** ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

| ಸಮಾಜಗಳು/ಚಳವಳಿಗಳು | ಸ್ಥಾಪಕರು | ಸ್ಥಾಪನೆ/ವರ್ಷ |
|---|---|---|
| ಬ್ರಹ್ಮ ಸಮಾಜ | ರಾಜಾ ರಾಮ್ ಮೋಹನ್ ರಾಯ್ | 1828 |
| ಯುವ ಬಂಗಾಳಿ ಚಳವಳಿ | ಎಚ್.ಎನ್. ಡಿರೇಜಿಯೋ | - |
| ಆರ್ಯ ಸಮಾಜ | ದಯಾನಂದ ಸರಸ್ವತಿ | 1875 |
| ಪ್ರಾರ್ಥನಾ ಸಮಾಜ | ಆತ್ಮರಾಮ್ ಪಾಂಡುರಂಗ | 1867 |
| ಸತ್ಯಶೋಧಕ ಸಮಾಜ | ಜ್ಯೋತಿಭಾ ಫುಲೆ | 1873 |
| ಅಲಿಘರ್ ಸುಧಾರಣಾ ಚಳವಳಿ | ಸರ್ ಸಯ್ಯದ್ ಅಹಮದ್ ಖಾನ್ | - |
| ರಾಮಕೃಷ್ಣ ಮಿಷನ್ | ಸ್ವಾಮಿ ವಿವೇಕಾನಂದ | 1897 |
| ಥಿಯೋಸಾಫಿಕಲ್ ಸೊಸೈಟಿ | ಬ್ಲವಾಟ್ ಸ್ಕೆ ಮತ್ತು ಅಲ್ಕಾಟ್ | - |
| ಧರ್ಮ ಪರಿಪಾಲನಾ ಯೋಗಂ ಸಂಘಟನೆ | ನಾರಾಯಣ ಗುರು | 1903 |
| ಆತ್ಮ ಗೌರವ ಚಳವಳಿ | ರಾಮಸ್ವಾಮಿ ನಾಯ್ಕರ್ ಪೆರಿಯಾರ್ | - |

(ಕೆಲವು ಸಮಾಜ ಸುಧಾರಕರ ಹೆಸರು ಮತ್ತು ಅವರ ಸಂಸ್ಥೆಗಳನ್ನು ನೆನಪಿಡಲು ಸರಳ ವಾಕ್ಯ- "**ರಾಜ ಬ್ರಹ್ಮ**ರೇ, **ಆರ್ಯನಂದ**ರೇ, **ರಾಮ ವಿವೇಕ**ರೇ, **ಅಲಿಘರ್** ನ **ಸಯ್ಯದ್** ರವರೇ ಬನ್ನಿ **ಆತ್ಮಕ್ಕೆ ಪ್ರಾರ್ಥನೆ** ಸಲ್ಲಿಸಿ **ಸತ್ಯ**ದ **ಜ್ಯೋತಿ**ಯ ಕಾಣೋಣ.")

# ಅಧ್ಯಾಯ-6

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 1857ರ ದಂಗೆಯನ್ನು ಭಾರತೀಯ ಇತಿಹಾಸಕಾರರು **ಪ್ರಥಮ ಸ್ವಾತಂತ್ರ್ಯ ಸಂಗ್ರಾಮ** ಎಂದು ಕರೆದರೆ, ಇಂಗ್ಲೀಷ್ ಇತಿಹಾಸರಾರರು **ಸಿಪಾಯಿ ದಂಗೆ** ಎಂದು ಕರೆದಿದ್ದಾರೆ.

2 ಬ್ಯಾರಾಕಪುರದಲ್ಲಿ ಬಂಡಾಯವೆದ್ದು ಬ್ರಿಟಿಷ್ ಸೈನ್ಯದ ಅಧಿಕಾರಿಯನ್ನು ಕೊಂದವನು **ಮಂಗಳಪಾಂಡೆ.**

3 1857ರ ದಂಗೆಯ ಸಮಯದಲ್ಲಿ ಝಾನ್ಸಿಯಲ್ಲಿ ದಂಗೆ ಎದ್ದು ಶೌರ್ಯದಿಂದ ಹೋರಾಡಿದವರು **ರಾಣಿ ಲಕ್ಷ್ಮಿಬಾಯಿ.**

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ರಾಜಕೀಯ ಅಂಶಗಳನ್ನು ತಿಳಿಸಿ. **ಅಥವಾ** ರಾಜಕೀಯ ಅಂಶಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೇಗೆ ದಾರಿಯಾದವು?

* 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದ ಅನೇಕ ರಾಜ್ಯಗಳು ಬ್ರಿಟಿಷರ ವಶವಾದವು
* ಮೊಘಲ್ ಚಕ್ರವರ್ತಿ ಮತ್ತು ಔದ್ ನವಾಬನ್ನು ಅಧಿಕಾರದಿಂದ ಕೆಳಗಿಳಿಸಲಾಯಿತು.
* ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿ ರದ್ದು
* ಇದರಿಂದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

2 1857ರ ದಂಗೆಗೆ (ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ) ಆರ್ಥಿಕ ಕಾರಣಗಳು ಹೇಗೆ ಕಾರಣವಾದವು?

* ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ
* ಗುಡಿ ಕೈಗಾರಿಕೆಗಳು ನಾಶವಾದವು
* ಅನೇಕ ನೇಕಾರರು ನಿರುದ್ಯೋಗಿಗಳಾದರು
* ರೈತರು ಶೋಷಣೆಗೆ ಒಳಗಾದರು.

3 ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು. ವಿಶ್ಲೇಷಿಸಿ. **ಅಥವಾ** ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೈನಿಕ ಕಾರಣಗಳೇನು? **ಅಥವಾ** 1857ರ ದಂಗೆಯಲ್ಲಿ ಸೈನಿಕರ ಮನೋಭಾವನೆಯನ್ನು ಪ್ರಚೋದಿಸಿದ ಅಂಶಗಳಾವುವು?

* ರಾಯಲ್ ಎನ್ ಫೀಲ್ಡ್ ಬಂದೂಕಿಗೆ ಬಳಸುವ ತುಪಾಕಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದು
* ಭಾರತೀಯ ಸೈನಿಕರಿಗೆ ಕಡಿಮೆ ವೇತನವಿತ್ತು
* ಉನ್ನತ ಹುದ್ಧೆ, ಬಡ್ತಿ ಆಂಗ್ಲ ಸೈನಿಕರಿಗೆ ಸೀಮಿತವಾಗಿದ್ದವು
* ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು.

4 ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣವೇನು?

ರಾಯಲ್ ಎನ್ ಫೀಲ್ಡ್ ಬಂದೂಕಿಗೆ ಬಳಸುವ ತುಪಾಕಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದು.

5 ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯರಿಗೆ ಸೋಲಾಗಲು ಕಾರಣಗಳೇನು? **ಅಥವಾ** 1857ರ ದಂಗೆಯ ವಿಫಲತೆಗೆ ಕಾರಣಗಳೇನು? **ಅಥವಾ** ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ವಿಫಲವಾಗಲು ಕಾರಣಗಳೇನು?

* ದೇಶವ್ಯಾಪಿ ನಡೆಯಲಿಲ್ಲ
* ಸಂಘಟನೆಯ ಕೊರತೆ
* ಸೂಕ್ತ ನಾಯಕತ್ವದ ಕೊರತೆ
* ನಿಶ್ಚಿತ ಗುರಿ ಇರಲಿಲ್ಲ
* ಅನೇಕ ರಾಜರು ಬೆಂಬಲಿಸಲಿಲ್ಲ
* ಒಗ್ಗಟ್ಟು ಇರಲಿಲ್ಲ.

6 ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ (1857ರ ದಂಗೆಯ) ಪರಿಣಾಮಗಳಾವುವು? **ಅಥವಾ** 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

* ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಅಂತ್ಯ
* ಪ್ರಾದೇಶೀಕ ವಿಸ್ತರಣೆ ಕೈಬಿಡುವುದು
* ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು
* ಧಾರ್ಮಿಕ ವಿಷಯದಲ್ಲಿ ಹಸ್ತಕ್ಷೇಪವಿಲ್ಲ

* ಕಾನೂನಿನ ಮುಂದೆ ಸಮಾನತೆ.

7 1857ರ ದಂಗೆಗೆ (ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ) ಕಾರಣವಾದ ಆಡಳಿತಾತ್ಮಕ ಅಂಶಗಳಾವುವು?

* ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳ ಜಾರಿ * ಹೊಸ ಕಾನೂನುಗಳು ಜನರಿಗೆ ಅರ್ಥವಾಗಲಿಲ್ಲ.
* ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮ * ನ್ಯಾಯಾಲಯದಲ್ಲಿ ಇಂಗ್ಲೀಷ್ ಭಾಷೆ ಜಾರಿ

## ಅಧ್ಯಾಯ-7

# ಸ್ವಾತಂತ್ರ್ಯ ಹೋರಾಟ

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1 ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ್ನು 1885 ರಲ್ಲಿ ಸ್ಥಾಪಿಸಿದವರು.______

**ಅ) A.O.ಹ್ಯೂಂ** ಆ) ವೆಲ್ಲೆಸ್ಲಿ ಇ) ಬ್ಯಾನರ್ಜಿ ಈ) ತಿಲಕರು

2 ಭಾರತದ ಸಂಪತ್ತು ಇಂಗ್ಲೆಂಡಿಗೆ ಯಾವ ರೀತಿಯಲ್ಲಿ ಸೋರಿಕೆಯಾಗುತ್ತಿದೆ ಎಂಬುದನ್ನು ತಿಳಿಸಿದ 'ಸಂಪತ್ತಿನ ಸೋರಿಕೆ ಸಿದ್ಧಾಂತ'ವನ್ನು ಪ್ರತಿಪಾದಿಸಿದವರು.______

ಅ) ಗೋಪಾಲ ಕೃಷ್ಣ ಗೋಖಲೆ **ಆ) ದಾದಾಬಾಯಿ ನವರೋಜಿ** ಇ) ತಿಲಕರು ಈ) ಗಾಂಧೀಜಿ

3. 1905 ರಲ್ಲಿ ಲಾರ್ಡ್ ಕರ್ಜನನು ಬಂಗಾಳದ ವಿಭಜನೆ ಮಾಡಲು ಕಾರಣ.__________

ಅ) ಹಿಂದೂ ಮುಸಲ್ಮಾನರನ್ನು ಬೇರ್ಪಡಿಸಲು **ಆ) ಬ್ರಿಟಿಷರ ವಿರುದ್ಧದ ಹೋರಾಟಗಳನ್ನು ದಮನಗೊಳಿಸಲು**
ಇ) ಬಂಗಾಳದ ಅಭಿವೃದ್ಧಿಗೆ ಈ) ಜನರಿಗೆ ಮೂಲ ಸೌಕರ್ಯ ಒದಗಿಸಲು.

4 ಮುಸ್ಲಿಂ ಲೀಗ್ _____ ರಲ್ಲಿ ಹುಟ್ಟಿಕೊಂಡಿತು.

ಅ) 1904 ಆ) 1920 ಇ) 1909 **ಈ) 1906**

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಭಾರತೀಯ ವೃತ್ತ ಪತ್ರಿಕೆಗಳ ಅಭಿವೃದ್ಧಿಯಲ್ಲಿ ದೇಶೀಯ ಭಾಷಾ ಕಾಯ್ದೆ (ವರ್ಣಾಕ್ಯುಲರ್ ಪ್ರೆಸ್ ಆಕ್ಟ್) ಒಂದು ತೊಡಕಾಗಿತ್ತು. ಏಕೆ?

ಏಕೆಂದರೆ ಅದು ಪತ್ರಿಕೆಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿತು.

2 "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ." ಎಂದು ಹೇಳಿದವರು ಯಾರು?

ಬಾಲಗಂಗಾಧರ ತಿಲಕರು.

3 'ಮರಾಠ' ಮತ್ತು 'ಕೇಸರಿ' ಎಂಬ ಪತ್ರಿಕೆಗಳನ್ನು ಆರಂಭಿಸಿದವರು ಮತ್ತು 'ಗೀತಾ ರಹಸ್ಯ' ಗ್ರಂಥವನ್ನು ರಚಿಸಿದವರು ಯಾರು?

ಬಾಲಗಂಗಾಧರ ತಿಲಕರು.

4 ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಮೊದಲ ಅಧ್ಯಕ್ಷರು ಯಾರು?

W.C. ಬ್ಯಾನರ್ಜಿ.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಸ್ವಾತಂತ್ರ್ಯ ಚಳವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ತಿಳಿಸಿ.

* "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ.' ಎಂದರು. * ಸ್ವಾತಂತ್ರ್ಯ ಚಳವಳಿಗೆ ಜನರನ್ನುಸಂಘಟಿಸಿದರು.
* ಗಣೇಶ ಮತ್ತು ಶಿವಾಜಿ ಉತ್ಸವ ಆರಂಭಿಸಿದರು * 'ಮರಾಠ' ಮತ್ತು 'ಕೇಸರಿ' ಎಂಬ ಪತ್ರಿಕೆಗಳನ್ನು ಆರಂಭಿಸಿದರು.

2 ಮಂದಗಾಮಿಗಳ ಬೇಡಿಕೆಗಳೇನು?

* ದೇಶದ ಕೈಗಾರಿಕೆ ಅಭಿವೃದ್ಧಿ * ಸೈನಿಕ ವೆಚ್ಚ ಕಡಿಮೆಮಾಡುವುದು * ಉತ್ತಮ ಶಿಕ್ಷಣ ನೀಡುವುದು * ಬಡತನ ನಿವಾರಣೆ.

## ಅಧ್ಯಾಯ-8

# ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

**I ಬಿಟ್ಟ ಸ್ಥಳ ತುಂಬಿರಿ.**

1 ಸ್ವರಾಜ್ ಪಕ್ಷವನ್ನು 1922ರಲ್ಲಿ ಸ್ಥಾಪಿಸಿದವರು **ಮೋತಿಲಾಲ್ ನೆಹರು ಮತ್ತು ಸಿ.ಆರ್.ದಾಸ್.**

2 'ಮಾಡು ಇಲ್ಲವೆ ಮಡಿ' ಎಂದು ಕರೆ ನೀಡಿದವರು **ಮಹಾತ್ಮ ಗಾಂಧೀಜಿ.**

3 'ನೇತಾಜಿ' ಎಂದು ಜನಪ್ರಿಯರಾದವರು **ಸುಭಾಷ್ ಚಂದ್ರ ಬೋಸ್.**

4 ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿ **ದಂಡಿ** ಎಂಬಲ್ಲಿ ನಡೆಸಿದರು.

**II ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1 ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ರವರ ಸಾಧನೆಗಳನ್ನು (ಪಾತ್ರವನ್ನು) ವಿವರಿಸಿ.

* ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ರವರು ಪ್ರಮುಖ ಪಾತ್ರ ವಹಿಸಿದರು.
* 'ನೇತಾಜಿ' ಎಂದು ಪ್ರಸಿದ್ಧರಾಗಿದ್ದರು. * ಬ್ರಿಟಷರನ್ನು ಓಡಿಸಲು ಕ್ರಾಂತಿ ಮಾರ್ಗವೇ ಸೂಕ್ತ ಎಂದು ತಿಳಿಸಿದರು
* ಫಾರ್ವರ್ಡ್ ಬ್ಲಾಕ್ ಪಕ್ಷವನ್ನು ಕಟ್ಟಿದರು * ನೇತಾಜಿರವರನ್ನು ಬ್ರಿಟಿಷರು ಬಂಧಿಸಿದರು.
* ನೇತಾಜಿರವರು ಬಂಧನದಿಂದ ತಪ್ಪಿಸಿಕೊಂಡು ಜರ್ಮನಿ ಮತ್ತು ಇಟಲಿಯ ನೆರವನ್ನು ಕೋರಿದರು.
* ಜಪಾನಿಗೆ ತೆರಳಿ ಅಲ್ಲಿದ್ದ ಭಾರತೀಯರನ್ನು ಸಂಘಟಿಸಿ 'ಭಾರತೀಯ ರಾಷ್ಟ್ರೀಯ ಸೇನೆ ( INA ) ಕಟ್ಟಿದರು.
* 'ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ.' ಎಂದರು.
* ಅಂಡಮಾನ್ ನಿಕೋಬಾರ್ ನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದರು. * ದೆಹಲಿ ಚಲೋಗೆ ಕರೆ ಕೊಟ್ಟರು.
* ವಿಮಾನ ಅಪಘಾತದಲ್ಲಿ ಹುತಾತ್ಮರಾದರು.

2 ನೆಹರುರವರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.

* ದೇಶೀಯ ಸಂಸ್ಥಾನಗಳ ವಿಲೀನೀಕರಣ * ಭಾಷಾವಾರು ಪ್ರಾಂತ್ಯಗಳ ರಚನೆ
* ಮಿಶ್ರ ಆರ್ಥಿಕ ವ್ಯವಸ್ಥೆ * ಬೃಹತ್ ಕೈಗಾರಿಕೀಕರಣ
* ಪಂಚವಾರ್ಷಿಕ ಯೋಜನೆಗಳ ಜಾರಿ * ವಿದೇಶಾಂಗ ನೀತಿ ರೂಪಿಸಿದರು
* ಪಂಚಶೀಲ ತತ್ವಗಳು.

3 ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಪ್ರತಿಭಟನೆಯನ್ನು ವಿವರಿಸಿ.

**ರೈತರ ಪ್ರತಿಭಟನೆ:** * ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪ್ರತಿಭಟನೆ ಕೂಡ ಪ್ರಮುಖವಾಗಿವೆ. * ಜಮೀನ್ದಾರರು ಮತ್ತು ಪ್ಲಾಂಟರಗಳ ವಿರುದ್ಧ ದಂಗೆ ನಡೆಸಿದರು. * ಚಂಪಾರಣ್ಯದಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು. * ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು. * ಖೇಡಾ, ಮಲಬಾರ್, ಬಂಗಾಳ ಮುಂತಾದ ಕಡೆ ದಂಗೆ ನಡೆದವು.

**ಕಾರ್ಮಿಕರ ಬಂಡಾಯ:** * ಕಾರ್ಮಿಕರ ಹೋರಾಟವು 1827ರಲ್ಲಿ ಕಲ್ಕತ್ತದಲ್ಲಿ ಆರಂಭವಾಯಿತು. * ಕಲ್ಕತ್ತ ಮತ್ತು ಮುಂಬಯಿಯಲ್ಲಿ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಮೂಡಿಸಿದರು * ಹತ್ತಿ, ಸೆಣಬು ಕಾರ್ಮಿಕರು, ರೈಲ್ವೆ ಕೂಲಿಗಳು ಸಂಘಟಿತರಾದರು * ಕಾರ್ಮಿಕರ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲ ನೀಡಿತು.

4 ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯವನ್ನು ವಿವರಿಸಿ.

* ಕಂಪನಿಯು ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ಕಾರಣವಾದವು
* ಬುಡಕಟ್ಟು ದಂಗೆಗಳಲ್ಲಿ ಸಂತಾಲರು, ಕೋಲರು, ಹಲಗಲಿಯ ಬೇಡರು ನಡೆಸಿದ ದಂಗೆಗಳು ಪ್ರಮುಖವು.
* ಬಂಗಾಳ ಮತ್ತು ಒರಿಸ್ಸಾದಲ್ಲಿ ಸಂತಾಲರು ದಂಗೆ ಎದ್ದರು.
* ಜಮೀನ್ದಾರರು ಮತ್ತು ಲೇವಾದೇವಿಗಾರರನ್ನು ಕೊಂದು ಲೂಟಿ ಮಾಡಿದರು.
* ಬ್ರಿಟಷರು ದಂಗೆಯನ್ನು ಹಡಗಿಸಿದರು

* ಸಂತಾಲರ ದಂಗೆಯು ಮುಂದೆ ಕೋಲರು, ಮುಂಡರು ಮುಂತಾದವರ ಹೋರಾಟಕ್ಕೆ ಸ್ಫೂರ್ತಿಯಾಯಿತು.

5 ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿರವರ ಕೊಡುಗೆಗಳನ್ನು ವಿವರಿಸಿ.

* ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿರವರ ಪಾತ್ರ ಅಪಾರವಾದುದು.
* ಬ್ರಿಟಿಷರನ್ನು ಓಡಿಸಲು ಸತ್ಯಾಗ್ರಹ ಮತ್ತು ಅಹಿಂಸೆ ಎಂಬ ಅಸ್ತ್ರಗಳನ್ನು ಬಳಸಿದರು.
* 1920ರಲ್ಲಿ ಅಸಹಕಾರ ಚಳುವಳಿಗೆ ಕರೆ ನೀಡಿದರು.
* 1930ರಲ್ಲಿ ಕಾನೂನು ಭಂಗ ಚಳುವಳಿ ನಡೆಸಿದರು.
* ದಂಡಿಯಲ್ಲಿ ಉಪ್ಪನ್ನು ತಯಾರಿಸಿ ಉಪ್ಪಿನ ಕಾನೂನನ್ನು ಮುರಿದರು.
* 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಗೆ ಕರೆನೀಡಿದರು.
* 'ಮಾಡು ಇಲ್ಲವೇ ಮಡಿ' ಎಂದು ಹೇಳಿದರು.
* ಇವರ ಹೋರಾಟದ ಫಲವಾಗಿ ಭಾರತವು ಸ್ವಾತಂತ್ರ್ಯವನ್ನು ಪಡೆಯಿತು.

6 ಡಾ.ಬಿ.ಆರ್.ಅಂಬೇಡ್ಕರ್ ರವರ ಕೊಡುಗೆಗಳನ್ನು ತಿಳಿಸಿ.

* ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ತಿಳಿಸಿದರು.
* ಜಾತಿ ಪದ್ಧತಿಯ ವಿರುದ್ಧ ಹೋರಾಡಿದರು. * 'ಮಹದ್' ಕೆರೆ ಮತ್ತು 'ಕಾಲಾರಾಂ' ದೇವಾಲಯ ಚಳವಳಿ ರೂಪಿಸಿದರು
* 'ಮೂಕ ನಾಯಕ' ಪತ್ರಿಕೆ ಆರಂಭಿಸಿದರು * ಕೃಷಿ ಕಾರ್ಮಿಕರ ಏಳಿಗೆಗೆ ದುಡಿದರು
* ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು.
* ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಗಳಾದರು
* ಭಾರತ ಸರ್ಕಾರವು ಇವರಿಗೆ 'ಭಾರತ ರತ್ನ' ವನ್ನು ನೀಡಿ ಗೌರವಿಸಿದೆ.

7 ಅಸಹಕಾರ ಚಳುವಳಿಯನ್ನು ಕುರಿತು ಬರೆಯಿರಿ.(ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳು/ಬೆಳವಣಿಗೆಗಳು)

* ಗಾಂಧೀಜಿಯವರು 1920ರಲ್ಲಿ ಅಸಹಕಾರ ಚಳವಳಿಗೆ ಕರೆಕೊಟ್ಟರು.
* ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿರೋಧಿಸಿದರು.
* ಗಾಂಧೀಜಿರವರ ಕರೆಯನ್ನು ಬೆಂಬಲಿಸಿ ವಿದ್ಯಾರ್ಥಿಗಳು ಶಾಲಾ ಕಾಲೇಜನ್ನು ಬಹಿಷ್ಕರಿಸಿದರು.
* ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು.
* ಭಾರತೀಯ ಗಣ್ಯರು ಬ್ರಿಟಿಷರು ನೀಡಿದ್ದ ಪುರಸ್ಕಾರವನ್ನು ಹಿಂದಿರುಗಿಸಿದರು. * ಚಳುವಳಿಯು ತೀವ್ರ ರೂಪ ಪಡೆಯಿತು.
* ಚೌರಿಚೌರ ಎಂಬಲ್ಲಿ ಚಳವಳಿಗಾರರು 22 ಜನ ಪೊಲೀಸರನ್ನು ಸುಟ್ಟರು.
* ಇದರಿಂದ ನೊಂದ ಗಾಂಧೀಜಿರವರು ಹೋರಾಟವನ್ನು ಹಿಂತೆಗೆದುಕೊಂಡರು.

8 ಸವಿನಯ ಕಾನೂನು ಭಂಗ ಚಳವಳಿ/ ದಂಡಿ ಉಪ್ಪಿನ ಸತ್ಯಾಗ್ರಹ ಕುರಿತು ಬರೆಯಿರಿ.

1930ರಲ್ಲಿ ಕಾನೂನು ಭಂಗ ಚಳವಳಿ ನಡೆಯಿತು. ಗಾಂಧೀಜಿರವರು ಸಬರಮತಿ ಆಶ್ರಮದಿಂದ ದಂಡಿವರೆಗೆ ತಮ್ಮ ಅನುಯಾಯಿಗಳೊಂದಿಗೆ ದಂಡಿ ಯಾತ್ರೆ ಕೈಗೊಂಡು ಉಪ್ಪಿನ ಕಾನೂನನ್ನು ಮುರಿದರು. ಸಾವಿರಾರು ಜನರು ಚಳವಳಿಯಲ್ಲಿ ಭಾಗವಹಿಸಿದರು. ಬ್ರಿಟಿಷ್ ಸರ್ಕಾರ ಕಾನೂನು ಭಂಗ ಚಳವಳಿಯಲ್ಲಿ ಭಾಗವಹಿಸಿದ ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರು, ವಲ್ಲಭಭಾಯಿ ಪಟೇಲ್ ಮೊದಲಾದವರನ್ನು ಬಂಧಿಸಿತು. ಈ ಚಳವಳಿಯು ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.

9 ಕ್ವಿಟ್ ಇಂಡಿಯಾ ಚಳವಳಿ/ಚಲೇಜಾವ್ ಚಳವಳಿ/'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ಕುರಿತು ಬರೆಯಿರಿ.

* 1942ರಲ್ಲಿ ಕ್ರಿಪ್ಸ್ ಆಯೋಗದ ಸಲಹೆಯನ್ನು ವಿರೋಧಿಸಿ ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳವಳಿಗೆ ಕರೆ ನೀಡಿತು.
* 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬುದು ಇದರ ಆಶಯವಾಗಿತ್ತು.
* ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ಎಂಬ ಕರೆ ನೀಡಿದರು.
* ಬ್ರಿಟಿಷ್ ಸರ್ಕಾರ ಗಾಂಧೀಜಿ, ನೆಹರು, ವಲ್ಲಭಭಾಯಿ ಪಟೇಲ್ ಮೊದಲಾದವರನ್ನು ಬಂಧಿಸಿತು.
* ಈ ಸಂಧರ್ಭದಲ್ಲಿ ಚಳವಳಿಯ ನೇತೃತ್ವವನ್ನು ಜಯಪ್ರಕಾಶ್ ನಾರಾಯಣರವರು ವಹಿಸಿದರು.

* ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆ ನೀಡಿದರು.

## ಅಧ್ಯಾಯ-9

## ಸ್ವಾತಂತ್ರ್ಯೋತ್ತರ ಭಾರತ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದ ಕೊನೆಯ ಮತ್ತು ಸ್ವತಂತ್ರ ಭಾರತದ ಮೊದಲ ಬ್ರಿಟಿಷ್ ಗವರ್ನರ್ ಜನರಲ್ **ಲಾರ್ಡ್ ಮೌಂಟ್ ಬ್ಯಾಟನ್**

2 ಭಾರತದ ಮೊದಲ (ಪ್ರಥಮ) ಪ್ರಧಾನ ಮಂತ್ರಿಗಳು **ಜವಾಹರ್ ಲಾಲ್ ನೆಹರು**.

3 ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು **ಡಾ.ಬಾಬು ರಾಜೇಂದ್ರ ಪ್ರಸಾದ್**

4 ಭಾತರ ಸಂವಿಧಾನಕ್ಕೆ **42ನೇ** ತಿದ್ದುಪಡಿ ತಂದು 'ಜಾತ್ಯಾತೀತ' ಮತ್ತು 'ಸಮಾಜವಾದಿ' ಎಂಬ ಎರಡು ಅಂಶಗಳನ್ನು ಸೇರಿಸಲಾಯಿತು.

5 'ಭಾರತದ ಉಕ್ಕಿನ ಮನುಷ್ಯ' ಮತ್ತು ಭಾರತದ ಪ್ರಥಮ ಗೃಹ ಮಂತ್ರಿಗಳು **ಸರ್ದಾರ್ ವಲ್ಲಭಭಾಯ್ ಪಟೇಲ್.**

6 ಜುನಾಘಢ್ ಸಂಸ್ಥಾನವು ಭಾರತ ಒಕ್ಕೂಟಕ್ಕೆ **1949** ರಲ್ಲಿ ಸೇರ್ಪಡೆಯಾಯಿತು.

7 ರಾಜ್ಯ ಪುನರ್ ವಿಂಗಡನಾ ಕಾನೂನು **1956** ರಲ್ಲಿ ಜಾರಿಗೆ ಬಂದಿತು.

8 ರಾಜ್ಯ ಪುನರ್ವಿಂಗಡಣಾ ಆಯೋಗದ ಸದಸ್ಯರು **ಫಜಲ್ ಅಲಿ, ಕೆ.ಎಂ.ಫಣಿಕ್ಕರ್ ಮತ್ತು ಎಚ್.ಎನ್.ಕುಂಜ್ರು.**

9 ವಿಶಾಲ ಮೈಸೂರು ರಾಜ್ಯ **ನವೆಂಬರ್ 1, 1956** ರಂದು ಅಸ್ತಿತ್ವಕ್ಕೆ ಬಂದಿತು.

10 ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಮರು ನಾಮಕರಣ ಮಾಡಿದ ವರ್ಷ **1973.**

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಭಾರತವು ಸ್ವಾತಂತ್ರ್ಯಗಳಿಸಿದ ನಂತರ ಎದುರಿಸಿದ ಸಮಸ್ಯೆಗಳಾವುವು?

* ನಿರಾಶ್ರಿತರ ಸಮಸ್ಯೆ
* ದೇಶೀಯ ಸಂಸ್ಥಾನಗಳ ವಿಲೀನೀಕರಣ
* ಸಂವಿಧಾನ ರಚನೆ
* ದೇಶ ರಕ್ಷಣೆ

2 ನಿರಾಶ್ರಿತರ ಸಮಸ್ಯೆಯನ್ನು ಭಾರತ ದೇಶವು ಹೇಗೆ ಎದುರಿಸಿತು?

* ಭಾರತಕ್ಕೆ ಬಂದ ನಿರಾಶ್ರಿತರಿಗೆ ಆಶ್ರಯ ನೀಡಲಾಯಿತು
* ನಿರಾಶ್ರಿತರಿಗೆ ಉದ್ಯೋಗ, ವಸತಿ, ಭೂಮಿ, ಶಿಕ್ಷಣ ಸೌಲಭ್ಯವನ್ನು ನೀಡಲಾಯಿತು.
* ಅಸ್ಸಾಂ, ಮೈಸೂರು ಮುಂತಾದ ಕಡೆ ಪುನರ್ವಸತಿ ಕಲ್ಪಿಸಲಾಯಿತು.

3 ಸರ್ದಾರ್ ವಲ್ಲಭಭಾಯ್ ಪಟೇಲರನ್ನು "ಭಾರತದ ಉಕ್ಕಿನ ಮನುಷ್ಯ" ಎಂದು ಕರೆಯಲು ಕಾರಣವೇನು?

ಸರ್ದಾರ್ ವಲ್ಲಭಭಾಯ್ ಪಟೇಲರು ತಮ್ಮ ದೃಢ ನಿಲುವುಗಳಿಂದ ಸಮರ್ಥವಾಗಿ ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸಿದ್ದರಿಂದ "ಭಾರತದ ಉಕ್ಕಿನ ಮನುಷ್ಯ" ಎಂದು ಕರೆಯುವರು.

4 ಭಾರತದ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಿಕೊಳ್ಳಲ್ಪಟ್ಟ ದೇಶೀಯ ಸಂಸ್ಥಾನಗಳನ್ನು ಹೆಸರಿಸಿ.

ಹೈದರಾಬಾದ್, ಜುನಾಘಢ, ಜಮ್ಮು ಮತ್ತು ಕಾಶ್ಮೀರ.

5 ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?

ಗೋವಾವನ್ನು ಬಿಡಲು ಆದೇಶಿಸಿದ್ದರೂ ಪೋರ್ಚುಗೀಸರು ಹೆಚ್ಚಿನ ಸೇನೆಯನ್ನು ತರಿಸಿಕೊಂಡು ಚಳವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದಾಗ ಭಾರತದ ಸೇನೆ ಮಧ್ಯೆ ಪ್ರವೇಶಿಸಿ ಗೋವಾವನ್ನು 1961ರಲ್ಲಿ ವಿಮೋಚನೆಗೊಳಿಸಲಾಯಿತು.

6 ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚರ ವಸಾಹತುಗಳಾಗಿದ್ದ ಭಾರತದ ಪ್ರದೇಶಗಳಾವುವು?

ಪಾಂಡಿಚೇರಿ, ಮಾಹೆ, ಚಂದ್ರನಗರ ಮತ್ತು ಕಾರೈಕಲ್.

7 ಸ್ವಾತಂತ್ರ್ಯ ನಂತರ ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ರಚನೆಯ ಪ್ರಮುಖಾಂಶಗಳನ್ನು ಪಟ್ಟಿಮಾಡಿ.

* ವಿಶಾಲಾಂಧ್ರ ರಾಜ್ಯ ರಚನೆಗಾಗಿ 1952ರಲ್ಲಿ ಪೊಟ್ಟಿ ಶ್ರೀರಾಮುಲು ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದರು.
* 1953ರಲ್ಲಿ ಆಂಧ್ರಪ್ರದೇಶವು ಮೊದಲ ಭಾಷಾವಾರು ರಾಜ್ಯವಾಗಿ ರಚನೆಯಾಯಿತು.
* 1953ರಲ್ಲಿ ರಾಜ್ಯ ಪುನರ್ವಿಂಗಡಣಾ ಆಯೋಗ ರಚನೆ
* ರಾಜ್ಯ ಪುನರ್ವಿಂಗಡಣಾ ಆಯೋಗದ ಸದಸ್ಯರು **ಫಜಲ್ ಅಲಿ, ಕೆ.ಎಂ.ಫಣಿಕ್ಕರ್ ಮತ್ತು ಎಚ್.ಎನ್.ಕುಂಜ್ರು.**
* 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ.

## ಅಧ್ಯಾಯ-10

## 20ನೇ ಶತಮಾನದ ರಾಜಕೀಯ ಆಯಾಮಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಕದನ ಬಾಂಧವ್ಯತ್ರಯ ದೇಶಗಳು **ಬ್ರಿಟನ್, ಫ್ರಾನ್ಸ್ ಮತ್ತು ರಷ್ಯ.**

2 ಕದನ ಸೌಹಾರ್ದತ್ರಯ ದೇಶಗಳು **ಜರ್ಮನಿ, ಇಟಲಿ ಮತ್ತು ಆಸ್ಟ್ರಿಯಾ-ಹಂಗೇರಿ.**

3 ಮೊದಲ ಮಹಾಯುದ್ಧಕ್ಕೆ ತಕ್ಷಣದ ಕಾರಣವೆಂದರೆ **ಆಸ್ಟ್ರಿಯಾ ರಾಜಕುಮಾರನ ಹತ್ಯೆ**.

4 19ನೇ ಶತಮಾನದಲ್ಲಿ ರಷ್ಯಾವನ್ನು ಆಳುತ್ತಿದ್ದ ದೊರೆಗಳು **ಝಾರ್.**

5 ರಷ್ಯಾದಲ್ಲಿ ಇವರ ಆಳ್ವಿಕೆಯನ್ನು 'ರಾಷ್ಟ್ರೀಯತೆಯ ಜೈಲು' ಎಂದು ಕರೆಯಲಾಗುತ್ತಿತ್ತು. **ಝಾರ್ ದೊರೆಗಳ ಆಳ್ವಿಕೆ**.

6 'ಶಾಂತಿ, ಆಹಾರ, ಭೂಮಿ' ಎಂಬ ಘೋಷಣೆ ನೀಡಿ ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವನು **ಲೆನಿನ್.**

7 ಗೋರ್ಬಚೆವ್ ಜಾರಿಗೆ ತಂದ ಈ ಸುಧಾರಣೆಗಳ ನಂತರ ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು. **ಗ್ಲಾಸನೋಸ್ತ್ ಮತ್ತು ಪೆರೆಸ್ಟ್ರೊಯಿಕ.**

8 ಜರ್ಮನಿಯಲ್ಲಿ ನಾಜಿ ಪಕ್ಷ ಮತ್ತು ಬೂದು ಅಂಗಿ ದಳ ಎಂಬ ಕೌರ್ಯ ಪಡೆಯನ್ನು ಸ್ಥಾಪಿಸಿದವನು. **ಹಿಟ್ಲರ್.**

9 ಇಟಲಿಯಲ್ಲಿ ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದವನು **ಮುಸೋಲಿನಿ**.

10 ಜರ್ಮನಿಯು **ಪೋಲೆಂಡ್** ಮೇಲೆ ದಾಳಿ ಮಾಡುವುದರೊಂದಿಗೆ ಎರಡನೇ ಮಹಾಯುದ್ಧವು **1939**ರಲ್ಲಿ ಪ್ರಾರಂಭವಾಯಿತು.

11 ಅಮೇರಿಕವು ಅಣು ಬಾಂಬ್ ಹಾಕಿದ ಜಪಾನಿನ ಸ್ಥಳಗಳು **ಹಿರೋಷಿಮಾ ಮತ್ತು ನಾಗಸಾಕಿ**.

12 ಈ ದೇಶದ ಶರಣಾಗತಿಯೊಂದಿಗೆ 2ನೇ ಮಹಾಯುದ್ಧವು ಅಂತ್ಯವಾಯಿತು. **ಜಪಾನ್**.

13 ಚೀನಾದಲ್ಲಿ ದೀರ್ಘ ಪಯಣವನ್ನು ನಡೆಸಿದವರು **ಮಾವೋತ್ಸೆ ತುಂಗ್.**

14 ಅಮೇರಿಕಾದ ನೌಕಾ ಕೇಂದ್ರ **ಪರ್ಲ್ ಹಾರ್ಬರ್** ಮೇಲೆ ಜಪಾನ್ ದಾಳಿ ಮಾಡಿತು.

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಗೋಬೆಲ್ಸ್ ಎಂದರೆ ಯಾರು?

ಜರ್ಮನಿಯಲ್ಲಿ ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಹಿಟ್ಲರ್ ನೇಮಿಸಿದ್ದ ಮಂತ್ರಿಯೇ ಗೋಬೆಲ್ಸ್.

2 ಹೋಲೋಕಾಸ್ಟ್ ಎಂದರೇನು?

ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳನ್ನು ಹೋಲೋಕಾಸ್ಟ್ ಎನ್ನುವರು.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಪ್ರಥಮ ಮಹಾಯುದ್ಧದ ಪರಿಣಾಮಗಳೇನು?

* ಅಪಾರ ಸಾವು-ನೋವು ಸಂಭವಿಸಿತು
* ಯುರೋಪಿನ ಭೂಪಟವೇ ಬದಲಾಯಿತು
* ರಾಷ್ಟ್ರ ಸಂಘ ಸ್ಥಾಪನೆ
* ಆಸ್ತಿ ನಾಶ

2 ರಷ್ಯಾ ಕ್ರಾಂತಿಯಲ್ಲಿ ಲೆನಿನ್ ನ ಪಾತ್ರವನ್ನು ವಿವರಿಸಿ.

* ಶಾಂತಿ, ಆಹಾರ, ಭೂಮಿ' ಎಂಬ ಘೋಷಣೆ ನೀಡಿದನು * ರೈತರು ಮತ್ತು ಕಾರ್ಮಿಕರನ್ನು ಸಂಘಟಿಸಿದನು
* ಸಮಾಜವಾದಿ ಗಣರಾಜ್ಯ ಸ್ಥಾಪಿಸಿದನು * ಉಚಿತ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ಕಲ್ಪಿಸಿದನು.

3 ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳಾವುವು?

* ಪಂಚವಾರ್ಷಿಕ ಯೋಜನೆ ಜಾರಿ * ಬಾಹ್ಯಾಕಾಶ ವಿಜ್ಞಾನದಲ್ಲಿ ಮೊದಲ ಮಾನವರಹಿತ ಉಪಗ್ರಹ ಉಡಾವಣೆ
* ಕೃಷಿಯ ಸಾಮೂಹೀಕರಣ

4 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು.'ಈ ಹೇಳಿಕೆಯನ್ನು ಸಮರ್ಥಿಸಿ.

ಜಗತ್ತಿನಲ್ಲಿ ಆರ್ಯ ಜರ್ಮನರು ಶ್ರೇಷ್ಠ ಜನಾಂಗವಾಗಿದ್ದು, ಇಡಿ ಜಗತ್ತನು ಆಳಲು ಯೋಗ್ಯರೆಂಬ ವಾದವನ್ನು ಹೊಂದಿದ್ದ ಹಿಟ್ಲರ್ ಜಗತ್ತನ್ನು ಗೆಲ್ಲಲು ಆಕ್ರಮಣ ಮಾಡಿದನು. ಇದು ಜರ್ಮನಿಯನ್ನು ಹಾಳು ಮಾಡಿತು.

5 ಎರಡನೇ ಮಹಾಯುದ್ಧದಿಂದಾದ ಪರಿಣಾಮಗಳೇನು?

* ಅಪಾರ ಸಾವು-ನೋವು ಸಂಭವಿಸಿತು * ವಿಶ್ವಸಂಸ್ಥೆ ಸ್ಥಾಪನೆ
* ಅಮೇರಿಕಾ ಮತ್ತು ರಷ್ಯಾ ಬಲಿಷ್ಠ ದೇಶಗಳಾದವು * ಏಷ್ಯಾ ಮತ್ತು ಆಫ್ರಕಾ ದೇಶಗಳು ಸ್ವತಂತ್ರವಾದವು.

6 ಶೀತಲ ಸಮರ ಎಂದರೇನು?

ಅಮೇರಿಕಾ ಮತ್ತು ರಷ್ಯಾಗಳ ನಡುವಿನ ರಾಜಕೀಯ, ಆರ್ಥಿಕ, ಮಿಲಿಟರಿ ಮುಂತಾದ ವಿಷಯಗಳ ಸೈದ್ಧಾಂತಿಕ ಹೋರಾಟವೇ ಶೀತಲ ಸಮರ.

7 ಚೀನಾ ಕ್ರಾಂತಿಯ ಪರಿಣಾಮಗಳೇನು?

* ಸಾಮೂಹಿಕ ಕೃಷಿ ಪದ್ಧತಿ ಜಾರಿ * ಉಚಿತ ಶಿಕ್ಷಣ, ಆರೋಗ್ಯ ಸೌಲಭ್ಯ
* ಕೈಗಾರಿಕೆ, ವಿಜ್ಞಾನ, ತಂತ್ರಜ್ಞಾನದಲ್ಲಿ ಪ್ರಗತಿ * ಮುನ್ನಡೆಯ ಮಹಾಜಿಗಿತ ಯೋಜನೆ ಜಾರಿ.

8 ಶಸ್ತ್ರಾಸ್ತ್ರ ಸಂಗ್ರಹ ಪೈಪೋಟಿಯಲ್ಲಿ ಅಮೇರಿಕಾ ಹೇಗೆ ಮೇಲುಗೈ ಸಾಧಿಸಿತು?

ಶೀತಲ ಸಮರದಿಂದ ಎರಡು ಬಣಗಳ ನಡುವೆ ಪೈಪೋಟಿ ಹೆಚ್ಚಾಗಿ ಅದರಲ್ಲಿ ಅಮೇರಿಕಾ ಮೇಲುಗೈ ಸಾಧಿಸಿತು. ಶಸ್ತ್ರಾಸ್ತ್ರ ಮಾರಾಟ ಮಿಲಿಟರಿ ಕೂಟ ರಚನೆ ಮಾಡಿಕೊಂಡಿತು. ಬೃಹತ್ ಯುದ್ಧಾಸ್ತ್ರಗಳ ಕೈಗಾರಿಕೆ ಸ್ಥಾಪಿಸಿತು.

9 ಅಮೇರಿಕಾವು ಆರ್ಥಿಕ ಮಹಾ ಕುಸಿತದಿಂದ ಹೇಗೆ ಹೊರ ಬಂದಿತು? **ಅಥವಾ** 2ನೇ ಮಾಹಾಯುದ್ಧದ ನಂತರ ಅಮೇರಿಕಾವು ಹೇಗೆ ಬಲಿಷ್ಠ ರಾಷ್ಟ್ರವಾಯಿತು?

* ಅಮೇರಿಕಾ ಮಿತ್ರ ಪಕ್ಷಗಳ ಪರವಾಗಿ ಯುದ್ಧ ಪ್ರವೇಶಿಸಿ ಜಯಗಳಿಸಿತು. * ರೂಸವೆಲ್ಟ್ 'ನೂತನ ಯೋಜನೆ' ಜಾರಿಗೆ ತಂದನು.
* ಮಹಿಳೆರನ್ನು ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ಪ್ರೋತ್ಸಾಹಿಸಲಾಯಿತು. * ವಿಶ್ವಸಂಸ್ಥೆ ಸ್ಥಾಪನೆಗೆ ಕಾರಣವಾಗಿ ಬಲಿಷ್ಠ ರಾಷ್ಟ್ರವಾಗಿ ಬೆಳೆಯಿತು.

10 ಫ್ಯಾಸಿಸ್ಟ್ ವಾದದ ಲಕ್ಷಣಗಳಾವುವು?

* ಉಗ್ರ ರಾಷ್ಟ್ರೀಯವಾದ * ಪರಕೀಯ ಶಕ್ತಿಗಳ ನಾಶ * ಹಿಂಸೆಯ ವೈಭವೀಕರಣ
* ಜನಾಂಗೀಯ ಶ್ರೇಷ್ಠತೆ * ಸಾಮ್ರಾಜ್ಯ ವಿಸ್ತರಣೆ.

11 ಮೊದಲನೇ (ಪ್ರಥಮ) ಮಹಾಯುದ್ಧಕ್ಕೆ ಕಾರಣಗಳೇನು?

* ಅತಿಯಾದ ರಾಷ್ಟ್ರೀಯತೆ * ಅತಿಯಾದ ಮಿಲಿಟರೀಕರಣ
* ಪರಸ್ಪರ ಮೈತ್ರಿಕೂಟಗಳ ರಚನೆ * ಆಸ್ಟ್ರೀಯಾ ರಾಜಕುಮಾರನ ಕೊಲೆ

12 ಎರಡನೇ ಮಹಾಯುದ್ಧಕ್ಕೆ ಕಾರಣಗಳೇನು?

* ಜರ್ಮನಿ ಮತ್ತು ಇಟಲಿಗಳ ಸರ್ವಾಧಿಕಾರ ದೋರಣೆ * ಸಾಮ್ರಾಜ್ಯ ವಿಸ್ತರಣಾವಾದ
* ಉಗ್ರ ರಾಷ್ಟ್ರೀಯವಾದ * ಜರ್ಮನಿಯು ಪೋಲೆಂಡ್ ಮೇಲೆ ದಾಳಿ ಮಾಡಿದ್ದು.

# ರಾಜ್ಯಶಾಸ್ತ್ರ

## ಅಧ್ಯಾಯ-1

## ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ನಿರುದ್ಯೋಗ ಎಂದರೇನು?

ಕೆಲಸ ಮಾಡುವ ಸಾಮರ್ಥ್ಯವಿದ್ದು ಕೆಲಸ ಸಿಗದಿರುವ ಸ್ಥಿತಿಯೇ ನಿರುದ್ಯೋಗ.

2 ಭ್ರಷ್ಟಾಚಾರ ಎಂದರೇನು?

ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವುದನ್ನು ಭ್ರಷ್ಟಾಚಾರ ಎನ್ನುವರು.

3 2001ರಲ್ಲಿ ಡಿ.ಎಂ.ನಂಜುಂಡಪ್ಪ ಸಮಿತಿ ರಚಿಸಲು ಕಾರಣವೇನು?

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು.

4 ಪ್ರಾದೇಶಿಕವಾದ ಎಂದರೇನು?

ತಾವು ವಾಸಿಸುವ ಪ್ರದೇಶದ ಬಗ್ಗೆ ಇರುವ ಗಾಢವಾದ ಅಭಿಮಾನವೇ ಪ್ರಾದೇಶಿಕವಾದ.

5 ಕರ್ನಾಟಕ ಸರ್ಕಾರವು ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ರೂಪಿಸಿರುವ ಕಾರ್ಯಕ್ರಮ ಯಾವುದು?

ಸ್ತ್ರೀ ಶಕ್ತಿ.

6 ಕೋಮುವಾದ ಅಥವಾ ಮತೀಯವಾದ ಎಂದರೇನು?

ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿ ಬೆಳೆಸಿಕೊಳ್ಳುವುದೇ ಕೋಮುವಾದ.

**II ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ನಿರುದ್ಯೋಗ ಸಮಸ್ಯೆಗೆ ಕಾರಣವಾದ ಅಂಶಗಳಾವುವು?

* ಮಿತಿಮೀರಿದ ಜನಸಂಖ್ಯೆ * ತಂತ್ರಜ್ಞಾನದ ಹೆಚ್ಚು ಬಳಕೆ
* ಗುಡಿ ಕೈಗಾರಿಕೆ ನಾಶ * ಕೌಶಲ್ಯ ರಹಿತ ಶಿಕ್ಷಣ
* ಸಂಪನ್ಮೂಲಗಳ ಕೊರತೆ * ಕೃಷಿ ಮೇಲಿನ ಅಧಿಕ ಅವಲಂಬನೆ

2 ನಿರುದ್ಯೋಗ ನಿವಾರಣೆ ಕೈಗೊಂಡಿರುವ ಕ್ರಮಗಳಾವುವು?

* ಜನಸಂಖ್ಯೆ ನಿಯಂತ್ರಣ * ಗುಡಿ ಕೈಗಾರಿಕೆಗೆ ಪ್ರೋತ್ಸಾಹ
* ಕೌಶಲ್ಯ ಸಹಿತ ಶಿಕ್ಷಣ * ಕೃಷಿ ಅಭಿವೃದ್ಧಿ
* ಸ್ವ ಉದ್ಯೋಗಕ್ಕೆ ಪ್ರೋತ್ಸಾಹ * ಶಿಕ್ಷಣ ಕ್ಷೇತ್ರದ ಸುಧಾರಣೆ

3 ಭ್ರಷ್ಟಾಚಾರ ನಿಯಂತ್ರಣ ಕ್ರಮಗಳನ್ನು ತಿಳಿಸಿ.

* ಪ್ರಬಲ ರಾಜಕೀಯ ಇಚ್ಛಾಶಕ್ತಿ * ಸಾರ್ವಜನಿಕ ಸಹಕಾರ
* ಒಳ್ಳೆಯ ರಾಜಕೀಯ ನಾಯಕತ್ವ * ಉತ್ತಮ ಅಧಿಕಾರಿ ವರ್ಗ
* ಸರ್ಕಾರಿ ಕಚೇರಿಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ * ಕಠಿಣ ಶಿಕ್ಷೆ ವಿಧಿಸುವುದು.

4 ಕೋಮುವಾದವು ದೇಶದ ಐಕ್ಯತೆಗೆ ಮಾರಕ. ಹೇಗೆ? **ಅಥವಾ** ಕೋಮುವಾದವು (ಮತೀಯವಾದವು) ನಮ್ಮ ಭಾರತೀಯ ಸಮಾಜದ ಪ್ರಮುಖ ಸಮಸ್ಯೆಯಾಗಿದೆ. ಹೇಗೆ?

* ಧರ್ಮದ ಆಧಾರದ ಮೇಲೆ ಸಮಾಜವನ್ನು ವಿಭಜಿಸುತ್ತದೆ * ಭಯದ ವಾತಾವರಣ ಉಂಟುಮಾಡುತ್ತದೆ

ಶ್ರೀ ಶಿವಕುಮಾರ ಶಾ. ಮೈಸೂರು ಜಿಲ್ಲೆ

* ಸಾಮಾಜಿಕ ಭಿನ್ನತೆಗೆ ಕಾರಣ
* ಗುಂಪುಗಾರಿಕೆ
* ಪ್ರಾಣ ಮತ್ತು ಆಸ್ತಿ ಹಾನಿ
* ಆರ್ಥಿಕ ವೈಷಮ್ಯಕ್ಕೆ ಕಾರಣ
* ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಮಾರಕ.

5 ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳೇನು?

* ಏಕರೂಪದ ನಾಗರಿಕ ಸಂಹಿತೆ
* ಜಾತ್ಯಾತೀತ ಮನೋಭಾವ
* ರಾಷ್ಟ್ರೀಯ ಚಿಂತನೆಗೆ ಒತ್ತು
* ಎಲ್ಲಾ ನಾಗರಿಕರನ್ನು ಸಮಾನವಾಗಿ ಕಾಣುವುದು
* ರಾಜಕೀಯ ಅಚಲ ನಿರ್ಧಾರ
* ಸಾರ್ವಜನಿಕ ಎಚ್ಚರ ಮತ್ತು ಕಠಿಣ ಶಿಕ್ಷೆ

6 ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳೇನು? (ಸಲಹೆಗಳೇನು?)

* ಮಹಿಳೆಯರ ಶಿಕ್ಷಣಕ್ಕೆ ಒತ್ತು
* ಮಹಿಳಾ ಸಬಲೀಕರಣ
* ಚುನಾವಣೆಯಲ್ಲಿ ಮೀಸಲಾತಿ
* ಬಾಲ್ಯ ವಿವಾಹ ನಿಷೇಧ
* ವರದಕ್ಷಿಣೆ ನಿಷೇಧ ಕಾಯ್ದೆ ಜಾರಿ
* ಸ್ವ ಉದ್ಯೋಗಕ್ಕೆ ಸಾಲ
* ಮಹಿಳಾ ಆಯೋಗ ಸ್ಥಾಪನೆ
* ಉದ್ಯೋಗದಲ್ಲಿ ಮೀಸಲಾತಿ.

7 ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳಾವುವು?

* ಪ್ರಾಣ ಹಾನಿ
* ಆಸ್ತಿಗಳಿಗೆ ಅಪಾರ ಹಾನಿ
* ಮಾನಸಿಕ ವೇದನೆ ನೀಡುತ್ತದೆ
* ಸರ್ಕಾರದ ಮೇಲೆ ನಕಾರಾತ್ಮಕ ಪ್ರಭಾವ
* ಭಯದ ವಾತಾವರಣ
* ರಾಜಕೀಯ ಅಸ್ಥಿರತೆ ಉಂಟುಮಾಡುತ್ತದೆ.

8 ಭಯೋತ್ಪಾದನೆ ನಿಗ್ರಹಕ್ಕೆ ಭಾರತವು ಕೈಗೊಂಡಿರವ ಕ್ರಮಗಳಾವುವು?

* ಭಾರತವು ಭಯೋತ್ಪಾದನೆಯನ್ನು ತೀವ್ರವಾಗಿ ವಿರೋಧಿಸುತ್ತದೆ.
* ವಿಶೇಷ ಪರಿಣತಿ ಪಡೆ ರಚನೆ
* ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭಯೋತ್ಪಾದನೆ ನಿಗ್ರಹಕ್ಕೆ ಪ್ರಯತ್ನಿಸುತ್ತಿವೆ.
* ರಕ್ಷಣಾ ಪಡೆ ಬಳಕೆ
* ಜನರ ಪ್ರಾಣ ಹಾಗೂ ಆಸ್ತಿ ರಕ್ಷಣೆಗೆ ಯತ್ನ.

9 ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು? ಅದರ ಪ್ರಸ್ತುತ ಬೆಳವಣಿಗೆಯನ್ನು ಕುರಿತು ಬರೆಯಿರಿ.

ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ಆಡಳಿತಾತ್ಮಕ ಪ್ರಯತ್ನಗಳೇ ಕಾರ್ಪೋರೇಟ್ ತಂತ್ರಗಾರಿಕೆ.

ಕಾರ್ಪೋರೇಟ್ ತಂತ್ರಗಾರಿಕೆಯು ಇಂದು ಆಧುನಿಕ ತಂತ್ರಜ್ಞಾನಗಳೊಂದಿಗೆ ಬೆಳೆಯುತ್ತಿದೆ. ಲಾಭದ ಉದ್ದೇಶವನ್ನು ಹೊಂದಿರುವ ಇದು ಪ್ರಭುತ್ವದ ಮೇಲೂ ಪ್ರಭಾವ ಬೀರುತ್ತದೆ. ನಾಗರಿಕ ಸಮಾಜವನ್ನು ಅಭಿವೃದ್ಧಿ ಪಡಿಸುತ್ತಿದೆ.

## ಅಧ್ಯಾಯ-2

## ಭಾರತದ ವಿದೇಶಾಂಗ ನೀತಿ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದ ವಿದೇಶಾಂಗ ನೀತಿಯು ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ. ಏಕೆಂದರೆ **ಭಾರತವು ಆಂಗ್ಲರ ಆಡಳಿತದಿಂದ ಅದನ್ನು ಅನುಭವಿಸಿತ್ತು.** ಅಥವಾ **ಭಾರತವು ಅದನ್ನು ವಿರೋಧಿಸಿ ಸ್ವತಂತ್ರಗೊಂಡಿದೆ.**

2 ಪಂಚಶೀಲ ಒಪ್ಪಂದವು ಚೀನಾದ **ಚೌ.ಎನ್.ಲಾಯ್** ಮತ್ತು ಭಾರತದ **ನೆಹರು**ರವರ ನಡುವೆ ಆಯಿತು.

3 ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿ 'ಆಫ್ರಿಕಾದ ಗಾಂಧೀ' ಎಂದು ಪ್ರಸಿದ್ಧರಾದವರು **ನೆಲ್ಸನ್ ಮಂಡೇಲಾ**.

4 ಭಾರತ ಸಂವಿಧಾನದ **<u>51</u>**ನೇ ವಿಧಿಯು ಅಂತರರಾಷ್ಟ್ರೀಯ ಸಹಬಾಳ್ವೆ ಮತ್ತು ಕಾನೂನಿಗೆ ಗೌರವ ತಂದುಕೊಡುವಂತ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ.

STF ಶಿವಮೊಗ್ಗ ಜಿಲ್ಲೆ

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ವಿದೇಶಾಂಗ ನೀತಿ ಎಂದರೇನು?

ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಂದಿಗೆ ವ್ಯವಹರಿಸುವಾಗ ಅನುಸರಿಸುವ ನೀತಿಯೇ ವಿದೇಶಾಂಗ ನೀತಿ.

2 ಭಾರತದ ವಿದೇಶಾಂಗ ನೀತಿಯನ್ನು ನೆಹರುರವರ ವಿದೇಶಾಂಗ ನೀತಿ ಎಂದು ವರ್ಣಿಸಲಾಗಿದೆ. ಏಕೆ?

ನೆಹರುರವರು ಪ್ರಧಾನಿ ಹುದ್ದೆಯ ಜೊತೆಗೆ ವಿದೇಶಾಂಗ ಖಾತೆಯನ್ನು ಹೊಂದಿ ಸಮರ್ಥವಾಗಿ ನಿಭಾಯಿಸಿದರು. ಆದ್ದರಿಂದ ನೆಹರುರವರ ವಿದೇಶಾಂಗ ನೀತಿ ಎಂದು ವರ್ಣಿಸಲಾಗಿದೆ.

3 ನಿಶ್ಯಸ್ತ್ರೀಕರಣ ಎಂದರೇನು?

ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತ ಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣ.

4 ವರ್ಣಭೇದ ನೀತಿ ಎಂದರೇನು?

ಒಂದು ವರ್ಣದ ಜನರು ಇನ್ನೊಂದು ವರ್ಣದ ಜನರನ್ನು ತಮಗಿಂತ ಕೀಳೆಂದು ಭಾವಿಸಿ ವಿರೋಧಿಸುವ ನೀತಿ.

5 ಅಲಿಪ್ತ ನೀತಿ ಎಂದರೇನು?

ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯೇ ಅಲಿಪ್ತ ನೀತಿ.

6 ವರ್ಣಭೇದ ನೀತಿಯನ್ನು ಜಗತ್ತಿನಲ್ಲಿ ಎಲ್ಲಿಯೂ, ಯಾವ ರಾಷ್ಟ್ರವೂ ಅನುಸರಿಸಬಾರದು ಎಂಬ ವಿದೇಶಾಂಗ ನೀತಿಯನ್ನು ಭಾರತವು ಹೊಂದಿದೆ. ಏಕೆ?

ಏಕೆಂದರೆ ಈ ನೀತಿಯು ಮಾನವ ಹಕ್ಕುಗಳನ್ನು ಉಲ್ಲಂಘಿಸಿ ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗಿದೆ.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳೇನು? ( ಧ್ಯೇಯಗಳು, ಗುರಿಗಳು)

* ರಾಷ್ಟ್ರದ ಭದ್ರತೆ
* ರಾಷ್ಟ್ರದ ಆರ್ಥಿಕ ಸಂವರ್ಧನೆ
* ವಿಶ್ವಶಾಂತಿ ಮತ್ತು ಸಹಬಾಳ್ವೆ
* ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ಶತ್ರು ರಾಷ್ಟ್ರಗಳನ್ನು ಹತ್ತಿಕ್ಕುವುದು.
* ನಮ್ಮ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.

2 ಪಂಚಶೀಲ ತತ್ವಗಳಾವುವು?

* ಪರಸ್ಪರ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ
* ಪರಸ್ಪರ ಆಕ್ರಮಣ ಮಾಡದಿರುವುದು.
* ಪರಸ್ಪರ ಸಹಕಾರ ಮತ್ತು ಸಮಾನತೆ
* ಶಾಂತಿಯುತ ಸಹಬಾಳ್ವೆ
* ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರುವುದು.

3 ಭಾರತದ ವಿದೇಶಾಂಗ ನೀತಿಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು? /ಅಡಕವಾಗಿರುವ ಅಂಶಗಳಾವುವು?

* ರಾಷ್ಟ್ರೀಯ ಹಿತಾಸಕ್ತಿ
* ಭೌಗೋಳಿಕ ಅಂಶಗಳು
* ರಾಜಕೀಯ ಪರಿಸ್ಥಿತಿ
* ಜನಾಭಿಪ್ರಾಯ
* ರಕ್ಷಣಾ ಸಾಮರ್ಥ್ಯ
* ಆರ್ಥಿಕ ಸ್ಥಿತಿ

4 ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು?

* ಪಂಚಶೀಲ ತತ್ವಗಳು
* ಅಲಿಪ್ತ ನೀತಿ
* ವಸಾಹತುಶಾಹಿತ್ವಕ್ಕೆ ವಿರೋಧ
* ವರ್ಣಭೇದ ನೀತಿಗೆ ವಿರೋಧ
* ನಿಶ್ಯಸ್ತ್ರೀಕರಣ

## ಅಧ್ಯಾಯ-3

## ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**I ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಅನ್ಯರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ. ಏಕೆ? **ಅಥವಾ**
ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ. ಏಕೆ?

ಗಡಿ ಭದ್ರತೆ, ವಿದೇಶ ವ್ಯಾಪಾರ, ಆರ್ಥಿಕ ಪ್ರಗತಿ, ವಿಶ್ವಶಾಂತಿಗಾಗಿ ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ.

2 ಭಾರತ ಮತ್ತು ಪಾಕಿಸ್ತಾನ ಮಧ್ಯ ಉದ್ವಿಗ್ನತೆಗೆ ಕಾರಣವಾದ ವಿಷಯಗಳಾವುವು?

ಕಾಶ್ಮೀರ ಸಮಸ್ಯೆ, ಭಯೋತ್ಪಾದನೆ, ನೀರಿನ ಹಂಚಿಕೆ, ಅಕ್ರಮ ನುಸುಳುವಿಕೆ.

3 ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?

* ಗಡಿ ಸಮಸ್ಯೆ
* ನಕ್ಸಲವಾದ
* ಸೇನೆಯ ಅತಿಕ್ರಮಣ
* ಅರುಣಾಚಲ ಪ್ರದೇಶವು ತನ್ನದೆಂದು ಪ್ರತಿಪಾದಿಸುತ್ತಿರುವುದು
* ಡೊಕ್ಲಾಮ್ ವಿವಾದ

4 ಭಾರತ ಮತ್ತು ಅಮೇರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು, ಇವುಗಳ ಸೌಹಾರ್ದತೆ ಹೇಗಿದೆ ಎಂಬುದನ್ನು ವಿವರಿಸಿ.

* ಭಾರತದ ಪಂಚವಾರ್ಷಿಕ ಯೋಜನೆಗೆ ನೆರವು
* ಚೀನಾ ದಾಳಿಯ ವೇಳೆ ಸಹಾಯ
* ವಿಶ್ವಶಾಂತಿ ಉಳಿಸುವಲ್ಲಿ ಸಮಾನ ಧೋರಣೆ
* ವ್ಯಾಪಾರ,ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ
* ಭದ್ರತಾ ಸಮಿತಿಯ ಖಾಯಂ ಸದಸ್ಯತ್ವಕ್ಕೆ ಬೆಂಬಲ.

5 ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

* ಚೀನಾ ದಾಳಿಯ ವೇಳೆ ಸಹಾಯ
* ಭಿಲಾಯಿ ಮತ್ತು ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ನೆರವು.
* ಗೋವಾ ವಿಮೋಚನೆಗೆ ಸಹಾಯ
* 20 ವರ್ಷಗಳ ಶಾಂತಿ, ಮೈತ್ರಿ ಮತ್ತು ಸಹಕಾರ ಒಪ್ಪಂದ
* ಭದ್ರತಾ ಸಮಿತಿಯ ಖಾಯಂ ಸದಸ್ಯತ್ವಕ್ಕೆ ಬೆಂಬಲ.

## ಅಧ್ಯಾಯ-4

## ಜಾಗತಿಕ ಸಮಸ್ಯೆಗಳು ಮತ್ತು ಭಾರತದ ಪಾತ್ರ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಜಾಗತಿಕ ಮಾನವ ಹಕ್ಕುಗಳ ಘೋಷಣೆ ಮಾಡಿದ್ದು **ಡಿಸೆಂಬರ್ 10, 1948** ರಲ್ಲಿ.

2 ಮಾನವ ಹಕ್ಕುಗಳ ದಿನವನ್ನು **ಡಿಸೆಂಬರ್ 10** ರಂದು ಆಚರಿಸುತ್ತಾರೆ.

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ.

* ಭಾರತವು ಸಾರ್ವತ್ರಿಕ ಮಾನವ ಹಕ್ಕುಗಳನ್ನು ಪ್ರತಿಪಾದಿಸುತ್ತದೆ.
* ಮೂಲಭೂತ ಹಕ್ಕುಗಳನ್ನು ನೀಡಿದೆ.
* ಗುಲಾಮಗಿರಿ, ಮಾನವ ಮಾರಾಟ ನಿಷೇಧಿಸಿದೆ.
* ಮಾನವ ಹಕ್ಕುಗಳ ರಕ್ಷಣೆಗೆ ಯತ್ನಿಸುತ್ತಿದೆ.
* ಮಾನವ ಹಕ್ಕುಗಳ ಆಯೋಗ, ಮಹಿಳಾ ಆಯೋಗ ರಚಿಸಿದೆ.

2 'ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ.' ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?

* ಭಯ, ಅಸ್ಥಿರತೆ ಉಂಟಾಗುತ್ತದೆ
* ಯುದ್ಧದ ಸಂಭವ ತಲೆದೋರುತ್ತದೆ.

* ಆರ್ಥಿಕ ನಷ್ಟ * ಅಶಾಂತಿ ಉಂಟಾಗುತ್ತದೆ

3 ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು? ಅಥವಾ ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಕುಂದುಕೊರತೆಗಳೇನು?

ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗದ ಅವಕಾಶಗಳು ಮುಂತಾದ ಕುಂದುಕೊರತೆಗಳನ್ನು ಹೊಂದಿರುತ್ತವೆ.

4 ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?

* ಆರ್ಥಿಕ ನ್ಯಾಯ ಮತ್ತು ಸಮಾನತೆಯನ್ನು ಪ್ರತಿಪಾದಿಸುತ್ತಿದೆ * ಆರ್ಥಿಕ ಸಹಕಾರ
* ಶ್ರೀಮಂತ ರಾಷ್ಟ್ರಗಳ ಬಂಡವಾಳ ಬಡರಾಷ್ಟ್ರಗಳಿಗೆ ಹರಿದು ಬರಲು ಸಹಕರಿಸಿತು.

5 ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳಾವುವು?

ಮಾನವ ಹಕ್ಕುಗಳ ನಿರಾಕರಣೆ, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇದ ನೀತಿ.

## ಅಧ್ಯಾಯ-5

## ಜಾಗತಿಕ ಸಂಸ್ಥೆಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ವಿಶ್ವಸಂಸ್ಥೆ **1945ರ ಅಕ್ಟೋಬರ್ 24**ರಂದು ಸ್ಥಾಪನೆಯಾಯಿತು.

2 ವಿಶ್ವಸಂಸ್ಥೆಯ ಈಗಿನ ಸದಸ್ಯ ರಾಷ್ಟ್ರಗಳು **193**

3 ವಿಶ್ವಸಂಸ್ಥೆಯ ಮುಖ್ಯ ಕಛೇರಿ ಅಮೇರಿಕಾದ **ನ್ಯೂಯಾರ್ಕ್** ನಗರದಲ್ಲಿದೆ.

4 ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರು **ಚರ್ಚಿಲ್, ಸ್ಟಾಲಿನ್ ಮತ್ತು ಎಫ್.ಡಿ.ರೂಸವೆಲ್ಟ್.**

5 ವಿಶ್ವಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ 'ವಿಶ್ವಸಂಸ್ಥೆಯ ಸಂಸತ್ತು' ಎಂದು ಕರೆಯಲ್ಪಡುವ ಅಂಗಸಂಸ್ಥೆ **ಸಾಮಾನ್ಯ ಸಭೆ.**

6 ವಿಶ್ವಸಂಸ್ಥೆಯ 'ಸಚಿವ ಸಂಪುಟ' ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ **ಭದ್ರತಾ ಸಮಿತಿ**

7 ಭದ್ರತಾ ಸಮಿತಿಯಲ್ಲಿರುವ 5 ಖಾಯಂ ಸದಸ್ಯ ರಾಷ್ಟ್ರಗಳು **ಅಮೇರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ ಮತ್ತು ಚೈನಾ**.

8 'ವಿಟೋ' ಎಂದರೆ **ನಿಷೇಧಾತ್ಮಕ ಮತ ಚಲಾವಣೆಯ ಅಧಿಕಾರ**.

9 ದತ್ತಿ ಸಮಿತಿಯು ಇಂದು ನಿಷ್ಕ್ರಿಯವಾಗಿದೆ. ಏಕೆಂದರೆ **ಯಾವುದೇ ದತ್ತಿ ಉಳಿದಿಲ್ಲ.**

10 ಅಂತರರಾಷ್ಟ್ರೀಯ ನ್ಯಾಯಾಲಯ ನೆದರಲ್ಯಾಂಡಿನ **ಹೇಗ್** ನಲ್ಲಿದೆ.

11 ವಿಶ್ವಸಂಸ್ಥೆಯ ಈಗಿನ ಮಹಾ ಕಾರ್ಯದರ್ಶಿಗಳು **ಆಂಟೋನಿಯೊ ಗಟೆರಸ್.**

12 ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲಿರುವ ವಿಷಯಗಳು **ಜನಸಂಖ್ಯಾ ಸ್ಫೋಟ, ಪರಿಸರ ರಕ್ಷಣೆ, ಹಸಿವು, ಪೌಷ್ಠಿಕತೆಯ ಕೊರತೆ.**

13 1965 ರಲ್ಲಿ ನೋಬೆಲ್ ಬಹುಮಾನ ಪಡೆದ ವಿಶ್ವಸಂಸ್ಥೆಯ ಆಶ್ರಯದ ಸಂಸ್ಥೆ **ಯುನಿಸೆಫ್**

14 ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ಇದಾಗಿದೆ. **ಐ.ಎಂ.ಎಫ್.**

15 ಐ.ಬಿ.ಆರ್.ಡಿ. ಬ್ಯಾಂಕನ್ನು **ವಿಶ್ವ ಬ್ಯಾಂಕು** ಎಂದೂ ಕರೆಯುತ್ತಾರೆ.

16 'ಸಾರ್ಕ್'ನ (SAARC) ಸದಸ್ಯ ರಾಷ್ಟ್ರಗಳು **ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಭೂತಾನ್, ಮಾಲ್ಡೀವ್ಸ್, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ.**

17 ‘ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೆ ಇರಬೇಕು.’ ಎಂಬ ಸೂತ್ರವು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿದೆ. **ಸಾರ್ಕ್**

18 ಸಾರ್ಕ್ (SAARC) ಅನ್ನು ವಿಸ್ತರಿಸಿ. ದಕ್ಷಿಣ **ಏಷ್ಯಾ ಪ್ರಾದೇಶಿಕ ಸಹಕಾರ ಸಂಘ.**

19 ಶುಭಾಶಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತ್ತಿರುವ ಸಂಸ್ಥೆ **ಯುನಿಸೆಫ್.**

**II ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ**.

1 ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳೇನು? (ಗುರಿಗಳು, ಉದ್ದೇಶಗಳು)

* ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆ ಕಾಪಾಡುವುದು.
* ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿ ಸಾಧಿಸುವುದು
* ಮೂಲಭೂತ ಹಕ್ಕುಗಳ ಬಗ್ಗೆ ನಂಬಿಕೆ ಹೆಚ್ಚಿಸುವುದು
* ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಅಂತರರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡುಕೊಳ್ಳುವುದು
* ಅಂತರರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳಿಗೆ ಮನ್ನಣೆ
* ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

2 ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಾವುವು?

| | |
|---|---|
| 1 ಸಾಮಾನ್ಯ ಸಭೆ | 2 ಭದ್ರತಾ ಸಮಿತಿ |
| 3 ಆರ್ಥಿಕ ಮತ್ತು ಸಾಮಾಜಿಕ ಸಮಿತಿ | 4 ದತ್ತಿ ಸಮಿತಿ |
| 5 ಅಂತರರಾಷ್ಟ್ರೀಯ ನ್ಯಾಯಾಲಯ | 6 ಸಚಿವಾಲಯ |

3 ‘ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ.’ ಈ ಹೇಳಿಕೆ ಸಮರ್ಥಿಸಿ. **ಅಥವಾ** ವಿಶ್ವಸಂಸ್ಥೆಯ ಸಾಧನೆಗಳನ್ನು ತಿಳಿಸಿ.

* ವಿಶ್ವಸಂಸ್ಥೆಯು ಅನೇಕ ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
* ಇರಾನ್ ಸಂಘರ್ಷ ನಿವಾರಣೆಗೆ ಪ್ರಯತ್ನ
* ನಿಶ್ಯಸ್ತ್ರೀಕರಣ
* ಕಾಶ್ಮೀರ ವಿವಾದ ಬಗೆಹರಿಸಲು ಪ್ರಯತ್ನ
* ಮಾನವ ಹಕ್ಕುಗಳ ಘೋಷಣೆ
* ಸುಯೇಜ್ ಕಾಲುವೆ ಬಿಕ್ಕಟ್ಟು ನಿವಾರಣೆ
* ಕಾಂಗೋ ಬಿಕ್ಕಟ್ಟು ನಿವಾರಣೆ
* ಕೋರಿಯಾ ವಿವಾದಕ್ಕೆ ಪರಿಹಾರ
* ಇಂಡೋನೇಷ್ಯಾ ಬಿಕ್ಕಟ್ಟು ನಿವಾರಣೆ
* ವರ್ಣಭೇದ ನೀತಿಯ ಅಂತ್ಯ

4 ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಕಾರ್ಯಗಳನ್ನು ತಿಳಿಸಿ.

* ಅಂತರರಾಷ್ಟ್ರೀಯ ವಲಯದ ಆರ್ಥಿಕ, ಸಾಮಾಜಿಕ ಮುಂತಾದ ವಿಷಯಗಳ ಅಧ್ಯಯನ ಮತ್ತು ವರದಿ ಮಾಡುವುದು
* ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಬಗ್ಗೆ ಶಿಫಾರಸ್ಸು ಮಾಡುವುದು.
* ಅಂತರರಾಷ್ಟ್ರೀಯ ಸಮ್ಮೇಳನ ಸಂಘಟಿಸುವುದು.
* WHO,FAO ಮುಂತಾದವುಗಳ ಕಾರ್ಯಗಳನ್ನು ಸಮನ್ವಯಗೊಳಿಸುವುದು
* ನಿರಾಶ್ರಿತರು ಮತ್ತು ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ಇದರ ವ್ಯಾಪ್ತಿಗೆ ಬರುತ್ತವೆ.

5 ಭದ್ರತಾ ಸಮಿತಿಯ ರಚನೆ ಮತ್ತು ಕಾರ್ಯಗಳನ್ನು ತಿಳಿಸಿ.

**ರಚನೆ:** ಇದು ವಿಶ್ವಸಂಸ್ಥೆಯ ‘ಸಚಿವ ಸಂಪುಟ’ವಾಗಿದೆ. ಇದರಲ್ಲಿ 15 ಮಂದಿ ಸದಸ್ಯ ರಾಷ್ಟ್ರಗಳಿದ್ದು, 5 ಖಾಯಂ ಮತ್ತು 10 ಹಂಗಾಮಿ ಸದಸ್ಯರಿದ್ದಾರೆ.

**ಕಾರ್ಯಗಳು:**
* ಜಾಗತಿಕ ಶಾಂತಿ ಕಾಪಾಡುವುದು.
* ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ
* ಮಹಾಕಾರ್ಯದರ್ಶಿಗಳ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

6 ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳನ್ನು ಹೆಸರಿಸಿ.

* ಆಹಾರ ಮತ್ತು ಕೃಷಿ ಸಂಸ್ಥೆ (FAO)
* ವಿಶ್ವ ಆರೋಗ್ಯ ಸಂಸ್ಥೆ (WHO)
* ಯುನೆಸ್ಕೋ
* ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ILO)
* ವಿಶ್ವಬ್ಯಾಂಕು
* ಯುನಿಸೆಫ್
* ಐ.ಎಮ್.ಎಫ್.
* ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ

******************************

| ಸಂಸ್ಥೆಗಳು | ಮುಖ್ಯ(ಪ್ರಧಾನ) ಕಛೇರಿ | ಸ್ಥಾಪನೆ |
|---|---|---|
| ಆಹಾರ ಮತ್ತು ಕೃಷಿ ಸಂಸ್ಥೆ (FAO) | ರೋಮ್ | 1945 |
| ವಿಶ್ವ ಆರೋಗ್ಯ ಸಂಸ್ಥೆ (WHO) | ಜಿನೇವಾ | 1948 |
| ಯುನೆಸ್ಕೋ (UNESCO) | ಪ್ಯಾರೀಸ್ | 1946 |
| ಯುನಿಸೆಫ್ (UNICEF) | ನ್ಯೂಯಾರ್ಕ್ | 1946 |
| ಐ.ಎಂ.ಎಫ್.(IMF) | ವಾಷಿಂಗಟನ್ | 1945 |
| ಐ.ಬಿ.ಆರ್.ಡಿ.(IBRD) ವಿಶ್ವಬ್ಯಾಂಕು | ವಾಷಿಂಗಟನ್ | 1947 |
| ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ILO) | ಜಿನೇವಾ | 1919 |
| ಕಾಮನ್ ವೆಲ್ತ್ ರಾಷ್ಟ್ರ ಸಂಘ | ಲಂಡನ್ | 1926 |
| ಸಾರ್ಕ್ (SAARC) | ನೇಪಾಳದ ಕಠ್ಮಂಡು | 1985 |

STF ತಿ.ನರಸೀಪುರ ತಾ. ಮೈಸೂರು ಜಿಲ್ಲೆ

# ಸಮಾಜಶಾಸ್ತ್ರ

## ಅಧ್ಯಾಯ-1

## ಸಾಮಾಜಿಕ ಸ್ತರ ವಿನ್ಯಾಸ

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

ಸಮಾಜದ ಜನರನ್ನು ವಿವಿಧ ಸ್ತರಗಳಾಗಿ ವರ್ಗೀಕರಿಸುವುದೇ ಸಾಮಾಜಿಕ ಸ್ತರ ವಿನ್ಯಾಸ.

2 'ಅಸ್ಪೃಶ್ಯತೆಯು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ.' ಎಂದವರು ಯಾರು?

ಮಹಾತ್ಮ ಗಾಂಧೀಜಿ.

3 ಸಂವಿಧಾನದ ಎಷ್ಟನೇ ವಿಧಿಯು ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಿದೆ?

17ನೇ ವಿಧಿ,

4 ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಎಷ್ಟರಲ್ಲಿ ಜಾರಿಗೆ ಬಂದಿತು?

1955.

5 ಸಂವಿಧಾನದ ಎಷ್ಟನೇ ವಿಧಿಯು ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ?

30ನೇ ವಿಧಿ.

6 ಸಂವಿಧಾನದ ಎಷ್ಟನೇ ವಿಧಿಯು ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಘೋಷಿಸಿದೆ?

21ಎ

7 'ಶಿಕ್ಷಣವು ಸಾರ್ವಜನಿಕ ಸ್ವತ್ತಾಗಬೇಕು.' ಎಂದವರು ಮತ್ತು 'ಭಾರತದ ಸಂವಿಧಾನ ಶಿಲ್ಪಿ' ಯಾರು?

ಡಾ.ಬಿ.ಆರ್.ಅಂಬೇಡ್ಕರ್.

**II ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಶೈಕ್ಷಣಿಕ ಸಮಾನತೆ ಸಾಧಿಸಲು **ಅಥವಾ** ಶೈಕ್ಷಣಿಕ ಅಸಮಾನತೆ ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

* 6-14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ
* 45ನೇ ವಿಧಿಯು 6 ವರ್ಷದ ಒಳಗಿನ ಎಲ್ಲಾ ಮಕ್ಕಳ ರಕ್ಷಣೆ ಮತ್ತು ಶಿಕ್ಷಣ ಅವಕಾಶ ನೀಡಿದೆ.
* 29ನೇ ವಿಧಿಯು ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡಿದೆ.
* ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ.
* ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ
* ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಘೋಷಿಸಿದೆ.

2 ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳನ್ನು ತಿಳಿಸಿ.

* ಸಾಮಾಜಿಕವಾದದ್ದು
* ಸರ್ವ ವ್ಯಾಪಕವಾದದ್ದು
* ಪುರಾತನವಾದದ್ದು
* ವಿವಿಧ ರೂಪದಲ್ಲಿದೆ.

3 ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು. ಚರ್ಚಿಸಿ. **ಅಥವಾ** ಅಸ್ಪೃಶ್ಯತೆಯ ಸಮಸ್ಯೆಗಳಾವುವು?

* ಅಸ್ಪೃಶ್ಯತೆಯು ಸಮಾಜದ ಅಮಾನುಷ ಆಚರಣೆ
* ಅಸ್ಪೃಶ್ಯರಿಗೆ ಸಮಾಜದಲ್ಲಿ ಅತ್ಯಂತ ಕೆಳ ಸ್ಥಾನವಿತ್ತು.
* ಕೆರೆ, ಬಾವಿ, ಸ್ಮಶಾನವನ್ನು ಬಳಸುವಂತಿರಲ್ಲಿಲ.
* ಸಾಮಾಜಿಕ ಚಲನೆಯ ನಿಯಂತ್ರಣ
* ಶಿಕ್ಷಣದಿಂದ ವಂಚಿತರಾಗಿದ್ದರು
* ಆಸ್ತಿನ ಹಕ್ಕಿನ ನಿರಾಕರಣೆ

ಶ್ರೀ ತಿರುನಗರಂಗ ಶಾ. ಮೈಸೂರು ಜಿಲ್ಲೆ

* ರಾಜಕೀಯ ಪ್ರವೇಶ ನಿಷೇಧ * ಈ ಮೇಲಿನ ಅಂಶಗಳಿಂದಾಗಿ ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗಾಗಿದೆ.

4 ಅಸ್ಪೃಶ್ಯತೆ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು?

* 17ನೇ ವಿಧಿಯು ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಿದೆ. * 1955ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೆ.
* ಸಾರ್ವತ್ರಿಕ ಮತದಾನ ಹಕ್ಕು ನೀಡಿದೆ. * ಸಮಾನತೆ ಹಕ್ಕು ನೀಡಿದೆ.
* ಶಿಕ್ಷಣದಲ್ಲಿ ಮೀಸಲಾತಿ ನೀಡಿದೆ. * ಉದ್ಯೋಗವಕಾಶದಲ್ಲಿ ಮೀಸಲಾತಿ.
* ಚುನಾವಣೆಯಲ್ಲಿ ಮೀಸಲಾತಿ. * ದೇವಾಲಯಗಳಿಗೆ ಮುಕ್ತ ಪ್ರವೇಶ.

## ಅಧ್ಯಾಯ-2

# ದುಡಿಮೆ

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಶ್ರಮ ವಿಭಜನೆ ಎಂದರೇನು?

ಒಂದು ಕೆಲಸವನ್ನು ಜನರು ಹಂಚಿಕೊಂಡು ಮಾಡುವುದೇ ಶ್ರಮ ವಿಭಜನೆ.

2 'ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ.' ಎಂದವರು ಯಾರು?

ಕಾರ್ಲ್ ಮಾರ್ಕ್ಸ್

3 ಸಂಭಾವನೆ ಸಹಿತ ದುಡಿಮೆ ಎಂದರೇನು?

ಒಬ್ಬರ ದುಡಿಮೆಗೆ ಯಾವುದೇ ಸಂಭಾವನೆ ಸಿಗುವ ದುಡಿಮೆಯೇ ಸಂಭಾವನೆ ಸಹಿತ ದುಡಿಮೆ.

4 ಸಂಭಾವನೆ ರಹಿತ ದುಡಿಮೆ ಎಂದರೇನು?

ಒಬ್ಬರ ದುಡಿಮೆಗೆ ಯಾವುದೇ ಸಂಭಾವನೆ ಸಿಗದಿರುವ ದುಡಿಮೆಯೇ ಸಂಭಾವನೆ ರಹಿತ ದುಡಿಮೆ.

**II ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ (ದುಡಿಮೆಗಾರರ) ನಡುವಿನ ವ್ಯತ್ಯಾಸಗಳೇನು?

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| * ಕಾನೂನು ನಿಯಂತ್ರಣಕ್ಕೆ ಒಳಪಟ್ಟಿರುತ್ತಾರೆ. | * ಕಾನೂನು ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ. |
| * ನಿಗದಿತ ವೇತನ ಇದೆ. | * ನಿಗದಿತ ವೇತನ ಇಲ್ಲ. |
| * ಏಣಿ ಶ್ರೇಣಿ ವ್ಯವಸ್ಥೆ ಇದೆ | * ಏಣಿ ಶ್ರೇಣಿ ವ್ಯವಸ್ಥೆ ಇಲ್ಲ. |
| * ವೈದ್ಯಕೀಯ ಸೌಲಭ್ಯ ಇದೆ. | * ವೈದ್ಯಕೀಯ ಸೌಲಭ್ಯ ಇಲ್ಲ. |
| * ನಿವೃತ್ತಿ ವೇತನ ಸೌಲಭ್ಯ ಇದೆ. | * ನಿವೃತ್ತಿ ವೇತನ ಸೌಲಭ್ಯ ಇಲ್ಲ. |

2 ಅಸಂಘಟಿತ ದುಡಿಮೆಗಾರರು (ಕೆಲಸಗಾರರು) ಎದುರಿಸುತ್ತಿರುವ ಸವಾಲುಗಳಾವುವು?

* ಕಾನೂನು ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ * ನಿಗದಿತ ವೇತನ ಇಲ್ಲ.
* ವೈದ್ಯಕೀಯ ಸೌಲಭ್ಯ ಇಲ್ಲ * ನಿವೃತ್ತಿ ವೇತನ ಸೌಲಭ್ಯ ಇಲ್ಲ.
* ಸಾಮಾಜಿಕ ಭದ್ರತೆ ಇರುವುದಿಲ್ಲ. * ದೈಹಿಕ ಮತ್ತು ಮಾನಸಿಕ ದೌರ್ಜನ್ಯ

3 ಭಾರತದ ದುಡಿಮೆಯೊಳಗಿರುವ ಅಸಮಾನತೆಯನ್ನು ವಿವರಿಸಿ.

* ದುಡಿಮೆಯು ಸಾಮಾಜಿಕ ಸಂರಚನೆಯೊಳಗಿನ ಅಸಮಾನತೆಯಿಂದ ಕೂಡಿದೆ.
* ಆದಾಯ, ಜಾತಿ, ಲಿಂಗಗಳು ದುಡಿಮೆಯಲ್ಲಿ ಅಮಾನತೆ ಸೃಷ್ಟಿಸಿವೆ.
* ಮಹಿಳೆ ಮತ್ತು ಪುರುಷರ ದುಡಿಮೆಗೆ ಸಿಗುವ ಸಂಭಾವನೆಯಲ್ಲಿ ಅಸಮಾನತೆ ಇದೆ.
* ಮಹಿಳೆಯರ ಸಂಬಳ ಕಡಿಮೆ ಇದೆ.

ಸಾ.ನಿ.ನಿ. ಮೈಸೂರು ಜಿಲ್ಲೆ

* ಓದಿದವರು ಮತ್ತು ಓದದವರ ದುಡಿಮೆಯಲ್ಲಿ ಅಸಮಾನತೆ ಇದೆ.

* ಸಮಾನ ಕೆಲಸಕ್ಕೆ ಸಮಾನ ವೇತನವಿಲ್ಲ.

## ಅಧ್ಯಾಯ-3

## ಸಾಮಾಜಿಕ ಚಳವಳಿಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಕೈಗಾ ಅಣು ಸ್ಥಾವರ ವಿರೋಧಿ ಚಳವಳಿಯು **ಶಿವರಾಮ ಕಾರಂತ**ರ ನಾಯಕತ್ವದಲ್ಲಿ ನಡೆಯಿತು.

2 ಕರ್ನಾಟಕದಲ್ಲಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿ ಜೀತ ಪದ್ಧತಿ ರದ್ದು ಮಾಡಿದವರು **ಡಿ. ದೇವರಾಜ ಅರಸು.**

3 ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆ ಮಾಡಿದವರು **ಪ್ರೊ. ಎಂ.ಡಿ.ನಂಜುಂಡಸ್ವಾಮಿ**.

4 'ಮೂಕ ನಾಯಕ' ಎಂಬ ಪತ್ರಿಕೆ ಆರಂಭಿಸಿದವರು **ಡಾ.ಬಿ.ಆರ್.ಅಂಬೇಡ್ಕರ್.**

5 ಆತ್ಮಗೌರವ ಚಳವಳಿಯನ್ನು ಆರಂಭಿಸಿದವರು **ಪೆರಿಯಾರ್ ರಾಮಸ್ವಾಮಿ**.

6 ನರ್ಮದಾ ಆಂದೋಲನದ ನೇತೃತ್ವ ವಹಿಸಿದವರು **ಮೇಧಾ ಪಾಟ್ಕರ್.**

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಜನಮಂದೆ ಎಂದರೇನು?

ಜನರು ಆಕಸ್ಮಿಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕವಾಗಿ ನಡೆಸುವ ವರ್ತನೆಯೇ ಜನಮಂದೆ.

2 ದೊಂಬಿ ಎಂದರೇನು?

ಹಿಂಸೆ ಮತ್ತು ವಿನಾಶಾತ್ಮಕ ಸ್ವರೂಪದ ಜನಮಂದೆಯೇ ದೊಂಬಿ.

3 ನರ್ಮದಾ ಬಚಾವೋ ಆಂದೋಲನವು ನಡೆಯಲು ಕಾರಣವೇನು?

ನರ್ಮಾದಾ ನದಿಗೆ ಕಟ್ಟಲಾದ ಅಣೆಕಟ್ಟಿಗೆ ವಿರೋಧ ಮತ್ತು ಪರಿಸರ ಸಂರಕ್ಷಣೆಗಾಗಿ ನಡೆಸಲಾಯಿತು.

4 ಕೈಗಾ  ಅಣು ಸ್ಥಾವರ ಸ್ಥಾಪನೆ ವಿರೋಧಿಸಲು ಕಾರಣವೇನು? **ಅಥವಾ** ಶಿವರಾಮ ಕಾರಂತರ ನೇತೃತ್ವದಲ್ಲಿ ಕರ್ನಾಟಕ ಕರಾವಳಿ ಜನ ಹೋರಾಟ ನಡೆಸಲು ಕಾರಣವೇನು?

ಅರಣ್ಯ ನಾಶ ಮತ್ತು ಅಣು ವಿಕಿರಣದಿಂದ ಪರಿಸರ ಹಾನಿಯಾಗುವುದರಿಂದ ವಿರೋಧಿಸಲಾಯಿತು.

5 ಮಹಿಳಾ ಚಳವಳಿ ಎಂದರೇನು?

ಮಹಿಳೆಯರ ದೌರ್ಜನ್ಯ ಮತ್ತು ಅಸಮಾನತೆ ವಿರುದ್ಧ ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸುವ ಚಳವಳಿ.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಸಮೂಹ ವರ್ತನೆಯ ಮಾದರಿಗಳಾವುವು?

ಜನಮಂದೆ, ದೊಂಬಿ, ಪರಿಸರ ಚಳವಳಿ, ಮಹಿಳಾ ಚಳವಳಿ, ರೈತ ಚಳವಳಿ.

2 ಪ್ರಮುಖ ಪರಿಸರ ಸಂರಕ್ಷಣಾ ಚಳವಳಿಗಳನ್ನು ಹೆಸರಿಸಿ.

* ಚಿಪ್ಕೋ ಚಳವಳಿ
* ಅಪ್ಪಿಕೋ ಚಳವಳಿ
* ಕೈಗಾ ವಿರೋಧಿ ಚಳವಳಿ
* ನರ್ಮದಾ ಬಚಾವೋ ಆಂದೋಲನ
* ಮೌನ ಕಣಿವೆ ಆಂದೋಲನ

3 ಡಿ. ದೇವರಾಜ ಅರಸುರವರು ಕರ್ನಾಟಕದಲ್ಲಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು. ಈ ಹೇಳಿಕೆಯನ್ನು ಸಮರ್ಥಿಸಿ.

* ಸಾಮಾಜಿಕ ದುರ್ಬಲರ ವಿಮೋಚನೆ
* ಭೂ ಸುಧಾರಣೆಗಳು
* ಜೀತ ಪದ್ಧತಿ ರದ್ಧತಿ
* ಬಡವರ ಋಣ ಪರಿಹಾರ

4 ಅಸ್ಪೃಶ್ಯತೆ ನಿವಾರಣೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ ಪಾತ್ರವೇನು?

* ಅಸ್ಪೃಶ್ಯತೆ ವಿರುದ್ಧ ನಿರಂತರ ಹೋರಾಟ
* ಅಸ್ಪೃಶ್ಯರು ಮತ್ತು ಮಹಿಳೆಯರ ಹಕ್ಕುಗಳ ಪ್ರತಿಪಾದನೆ
* ಮೂಕ ನಾಯಕ ಎಂಬ ಪತ್ರಿಕೆ ಆರಂಭ
* ಅಸ್ಪೃಶ್ಯತೆ ವಿರುದ್ಧ ದೊಡ್ಡ ಚಳವಳಿ ರೂಪಿಸಿದರು.

5 ಮಹಿಳೆಯರು ಮದ್ಯಪಾನ ನಿಷೇಧ ಚಳವಳಿ ನಡೆಸಲು ಕಾರಣಗಳೇನು?

* ಮದ್ಯಪಾನವು ಮಹಿಳೆಯರ ಬದುಕಿನಲ್ಲಿ ಗಂಡಾಂತರವನ್ನುಂಟುಮಾಡುತ್ತದೆ.
* ಅನೇಕ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆ ಉಂಟುಮಾಡುತ್ತದೆ.
* ಮಕ್ಕಳನ್ನು ಕೆಲಸಕ್ಕೆ ದೂಡುತ್ತದೆ.

## ಅಧ್ಯಾಯ-4

## ಸಾಮಾಜಿಕ ಸಮಸ್ಯೆಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಬಾಲ ಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಕ ಕಾಯ್ದೆ ಜಾರಿಗೆ ಬಂದ ವರ್ಷ **1986**

2 'ಲೈಂಗಿಕ ಅಪರಾಧಗಳಿಂದ ಮಕ್ಕಳಾ ರಕ್ಷಣಾ ಕಾಯ್ದೆ ( ಪೋಕ್ಸೊ) ಜಾರಿಗೆ ಬಂದ ವರ್ಷ **2012**

3 ಹೆಣ್ಣು ಭ್ರೂಣ ಹತ್ಯೆಯಿಂದ **ಲಿಂಗಾನುಪಾತ** ಕುಸಿಯುತ್ತದೆ.

4 ಬಾಲ್ಯ ವಿವಾಹ ನಿಷೇಧ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ವರ್ಷ **2006**

5 ಹೆಣ್ಣು ಭ್ರೂಣ ಹತ್ಯೆ ನಿಷೇಧಿಸಿದ ಕಾಯ್ದೆ ಜಾರಿಗೆ ಬಂದ ವರ್ಷ **1994**

6 ಮಕ್ಕಳನ್ನು ದುಡಿಮೆಗೆ ತೊಡಗಿಸುವುದನ್ನು ಕಾನೂನು ಬಾಹಿರ ಎಂದು ಘೋಷಿಸಿರುವ ಸಂವಿಧಾನದ ವಿಧಿ **24ನೇ ವಿಧಿ.**

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಬಾಲ ಕಾರ್ಮಿಕರು ಎಂದರೆ ಯಾರು?

14 ವರ್ಷದೊಳಗಿನ ಮಕ್ಕಳು ಹಣಕ್ಕಾಗಿ ದುಡಿಮೆ ಮಾಡುತ್ತಿದ್ದರೆ ಅವರನ್ನು ಬಾಲ ಕಾರ್ಮಿಕರು ಎನ್ನುವರು.

2 ಹೆಣ್ಣು ಭ್ರೂಣ ಹತ್ಯೆ ಎಂದರೇನು?

ತಾಯಿಯ ಗರ್ಭದಲ್ಲಿ ಬೆಳೆದ ಹೆಣ್ಣು ಭ್ರೂಣವನ್ನು ಹತ್ಯೆ ಮಾಡುವುದೇ ಹೆಣ್ಣು ಭ್ರೂಣ ಹತ್ಯೆ.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

1 ಬಾಲ ಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು?

* ಕಡುಬಡತನ
* ಕೌಟುಂಬಿಕ ಕಲಹ
* ಮಕ್ಕಳ ಅಪಹರಣ ಮತ್ತು ಜೀತ
* ಉದ್ಯಮಿಗಳ ಲಾಭಕೋರತನ
* ಅನಕ್ಷರತೆ

2 ಮಕ್ಕಳ ದುಡಿಮೆಯಿಂದಾಗುವ (ಬಾಲ ಕಾರ್ಮಿಕ ಪದ್ಧತಿಯಿಂದಾಗುವ) ದುಷ್ಪರಿಣಾಮಗಳೇನು? **ಅಥವಾ** ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳಾವುವು? **ಅಥವಾ** ಮಕ್ಕಳ ಸಾಗಾಣಿಕೆಯಿಂದಾಗುವ ದುಷ್ಪರಿಣಾಮಗಳಾವುವು?

* ಅನಾರೋಗ್ಯ
* ಪೌಷ್ಠಿಕ ಆಹಾರದ ಸಮಸ್ಯೆ
* ದೈಹಿಕ ಮತ್ತು ಮಾನಸಿಕ ಹಿಂಸೆ
* ಮಕ್ಕಳ ಬಾಲ್ಯ ಕಸಿದುಕೊಳ್ಳಲಾಗುತ್ತದೆ.
* ಶಿಕ್ಷಣ ವಂಚಿತರಾಗುತ್ತಾರೆ.

3 ಬಾಲ ಕಾರ್ಮಿಕ ಸಮಸ್ಯೆ ನಿರ್ಮೂಲನಾ ಕ್ರಮಗಳಾವುವು?

* ಕಡ್ಡಾಯ ಶಿಕ್ಷಣ
* ಲಿಂಗ ಸಮಾನತೆ
* ವಲಸೆ ನಿಯಂತ್ರಣ
* ಬಾಲ್ಯ ವಿವಾಹ ಮತ್ತು ಮಕ್ಕಳ ಮಾರಾಟ ತಡೆ.

4 'ಲೈಂಗಿಕ ಅಪರಾಧಗಳಿಂದ ಮಕ್ಕಳಾ ರಕ್ಷಣಾ ಕಾಯ್ದೆ-2012' (POCSO) ಜಾರಿಗೆ ತರಲು ಕಾರಣಗಳೇನು?

ಇತ್ತೀಚಿನ ದಿನಗಳಲ್ಲಿ ಮಕ್ಕಳ ಮೇಲೆ ಶಾಲೆ, ಕುಟುಂಬ, ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ತಡೆಯಲು ಜಾರಿಗೆ ತರಲಾಗಿದೆ.

5 ಹೆಣ್ಣು ಭ್ರೂಣ ಹತ್ಯೆಯ ದುಷ್ಪರಿಣಾಮಗಳಾವುವು?

* ಲಿಂಗ ಅಸಮಾನತೆ ಹೆಚ್ಚಳ
* ಲಿಂಗಾನುಪಾತ ಹೆಚ್ಚಳ
* ಸ್ತ್ರೀ ಶೋಷಣೆ
* ಲೈಂಗಿಕ ದೌರ್ಜನ್ಯ

6 ಹಸಿವಿನ ದುಷ್ಪರಿಣಾಮಗಳಾವುವು?

* ಅನಾರೋಗ್ಯ * ವಿಕಲಾಂಗತೆ * ಅಕಾಲಿಕ ಮರಣ * ಅಪೌಷ್ಠಿಕತೆ * ರಕ್ತ ಹೀನತೆ

7 ಮಕ್ಕಳ ಸಾಗಾಣಿಕೆಗೆ ಕಾರಣಗಳೇನು?

* ಬಾಲ ಕಾರ್ಮಿಕತೆ * ಬಾಲ್ಯ ವಿವಾಹ * ಬಡತನ * ಸಾಲದ ಹೊರೆ

8 'ಲೈಂಗಿಕ ಅಪರಾಧಗಳಿಂದ ಮಕ್ಕಳಾ ರಕ್ಷಣಾ ಕಾಯ್ದೆ-2012' (POCSO) ಇದರ ಪ್ರಮುಖಾಂಶಗಳಾವುವು?

* ಲೈಂಗಿಕ ದೌರ್ಜನ್ಯ * ಬಲತ್ಕಾರ/ದುರುಪಯೋಗ * ಲೈಂಗಿಕ ಹಲ್ಲೆ * ಅಶ್ಲೀಲ ಚಿತ್ರ ಸಂಗ್ರಹ

STF ತಿ.ನರಸೀಪುರ ತಾ. ಮೈಸೂರು ಜಿಲ್ಲೆ

# ಭೂಗೋಳ ಶಾಸ್ತ್ರ

## ಅಧ್ಯಾಯ-1

## ಭಾರತದ ಸ್ಥಾನ ಮತ್ತು ವಿಸ್ತೀರ್ಣ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತವು **ಉತ್ತರ ಗೋಳಾರ್ಧ**ದ ಪೂರ್ವ ಭಾಗದಲ್ಲಿದೆ.

2 ಭಾರತದ ಅತ್ಯಂತ ದಕ್ಷಿಣ ತುದಿ **ಇಂದಿರಾ ಪಾಯಿಂಟ್.**

3 ಭಾರತದ ಮಧ್ಯ ಭಾಗದಲ್ಲಿ **23 1/2$^0$ ಕರ್ಕಾಟಕ ಸಂಕ್ರಾಂತಿ ವೃತ್ತ**ವು ಹಾದು ಹೋಗಿದೆ.

4 ಭಾರತದ ಆದರ್ಶ ಕಾಲಮಾನವು (IST) ಈ ರೇಖಾಂಶವನ್ನಾಧರಿಸಿದೆ. **82 1/2$^0$ ಪೂರ್ವ ರೇಖಾಂಶ.**

## ಅಧ್ಯಾಯ-2

## ಭಾರತದ ಮೇಲ್ಮೈ ಲಕ್ಷಣಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಪ್ರಪಂಚದ ಅತಿ ಎತ್ತರವಾದ ಶಿಖರ **ಮೌಂಟ್ ಎವರೆಸ್ಟ್**

2 ಭಾರತದ ಅತಿ ಎತ್ತರವಾದ ಶಿಖರ **ಮೌಂಟ್ ಗಾಡ್ವಿನ್ ಆಸ್ಟಿನ್ (K2)**

3 ಅರಾವಳಿ ಪರ್ವತಗಳ ಅತಿ ಎತ್ತರವಾದ ಶಿಖರ **ಗುರು ಶಿಖರ.**

4 ದಕ್ಷಿಣ ಭಾರತದ ಹಾಗೂ ಪಶ್ಚಿಮ ಘಟ್ಟಗಳ ಅತಿ ಎತ್ತರವಾದ ಶಿಖರ **ಅನೈಮುಡಿ.**

5 ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳನ್ನು ಇಲ್ಲಿ ಸಂಧಿಸುತ್ತವೆ. **ನೀಲಗಿರಿ.**

6 ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರ **ಅರ್ಮಕೊಂಡ**.

7 ಅರಬ್ಬಿಸಮುದ್ರದಲ್ಲಿರುವ ಲಕ್ಷದ್ವೀಪಗಳು **ಹವಳಗಳಿಂದ** ರಚನೆಯಾಗಿವೆ.

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?

* ಉತ್ತರದ ಪರ್ವತಗಳು
* ಉತ್ತರದ ಮೈದಾನಗಳು
* ಪರ್ಯಾಯ ಪ್ರಸ್ಥಭೂಮಿ
* ಕರಾವಳಿ ಮೈದಾನ ಮತ್ತು ದ್ವೀಪಗಳು

2 ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳಿಗಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
| --- | --- |
| * ಹೆಚ್ಚು ಎತ್ತರವಾಗಿವೆ. | * ಹೆಚ್ಚು ಎತ್ತರವಾಗಿಲ್ಲ. |
| * ನಿರಂತರವಾಗಿವೆ. | * ನಿರಂತರವಾಗಿಲ್ಲ. |
| * ನದಿಗಳಿಂದ ಪ್ರತ್ಯೇಕಗೊಂಡಿಲ್ಲ. | * ನದಿಗಳಿಂದ ಪ್ರತ್ಯೇಕಗೊಂಡಿವೆ. |

3 'ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ.' ಈ ಹೇಳಿಕೆಯನ್ನು ಸಮರ್ಥಿಸಿ. **ಅಥವಾ** ಉತ್ತರ ಪರ್ವತಗಳ ಪ್ರಾಮುಖ್ಯತೆಯನ್ನು ತಿಳಿಸಿ.

* ಮಳೆ ಸುರಿಸುತ್ತದೆ.
* ಅನೇಕ ನದಿಗಳ ಉಗಮ ಸ್ಥಾನ.
* ಖನಿಜಗಳ ಉಗ್ರಾಣ.
* ಜಲಶಕ್ತಿ ತಯಾರಿಕೆಗೆ ಸಹಾಯಕ.
* ಪ್ರವಾಸಿ ತಾಣವಾಗಿದೆ.

4 ಕರಾವಳಿ ಮೈದಾನಗಳ ಪ್ರಾಮುಖ್ಯತೆ ತಿಳಿಸಿ.

* ಕೃಷಿಗೆ ಉಪಯುಕ್ತ * ವ್ಯಾಪಾರ ಅಭಿವೃದ್ಧಿ
* ಉಪ್ಪು ತಯಾರಿಕೆ * ಮೀನುಗಾರಿಕೆಗೆ ಸಹಾಯಕ.

5 ಉತ್ತರದ ಮೈದಾನಗಳ ಪ್ರಾಮುಖ್ಯತೆ ತಿಳಿಸಿ.

* ಕೃಷಿಗೆ ಉಪಯುಕ್ತ * ವ್ಯಾಪಾರ ಅಭಿವೃದ್ಧಿ
* ನಗರೀಕರಣ * ಕೈಗಾರಿಕರಣಕ್ಕೆ ನೆರವು.

## ಅಧ್ಯಾಯ-3

## ಭಾರತದ ವಾಯುಗುಣ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದಲ್ಲಿ ಈ ಮಾದರಿಯ ವಾಯುಗುಣವಿದೆ. **ಉಷ್ಣವಲಯದ ಮಾನ್ಸೂನ್ ವಾಯುಗುಣ.**

2 ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಮತ್ತು ಅತಿ ಶುಷ್ಕವಾದ ಪ್ರದೇಶ. **ರೂಯ್ಲಿ**

3 ಭಾರತದಲ್ಲಿ ಅತಿ ಹೆಚ್ಚು ಮಳೆ ಪಡೆಯುವ ಪ್ರದೇಶ. **ಮಾಸಿನ್ ರಾಮ್.**

4 ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಸ್ಥಳ ಗಂಗಾನಗರ.

5 ಭಾರತದಲ್ಲಿ ಅತಿ ಕಡಿಮೆ ಉಷ್ಣಾಂಶ ದಾಖಲಾಗಿರುವ ಸ್ಥಳ **ಡ್ರಾಸ್.**

6 ಈ ಋತುಕಾಲದಲ್ಲಿ ಬಂಗಾಳಕೊಲ್ಲಿಯಲ್ಲಿ ಆವರ್ತ ಮಾರುತಗಳು (ಸೈಕ್ಲೋನ್) ಸಂಭವಿಸುತ್ತವೆ. **ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ. ( ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ)**

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 'ಮಾವಿನ ಹೊಯ್ಲು', 'ಕಾಫಿಯ ಹೂಮಳೆ', 'ಕಾಲ ಬೈಸಾಕಿ' ಹಾಗೂ ಆಂಧಿಸ್' ಎಂದರೇನು?

ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬೀಳುವ ಪರಿಸರಣ ಮಳೆ.

2 ಚಳಿಗಾಲದಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶವಿರಲು ಕಾರಣವೇನು?

ಏಕೆಂದರೆ ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದ ಮೇಲೆ ಹಾಗೂ ಓರೆ ಕಿರಣಗಳು ಉತ್ತರ ಗೋಳಾರ್ಧದ ಮೇಲೆ ಬೀಳುವುದರಿಂದ.

3 ಬೇಸಿಗೆಕಾಲದಲ್ಲಿ ಭಾರತದಲ್ಲಿ ಉಷ್ಣಾಂಶ ಹೆಚ್ಚಾಗಿರಲು ಕಾರಣವೇನು?

ಏಕೆಂದರೆ ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದ ಮೇಲೆ ಬೀಳುವುದರಿಂದ.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

ಮಾನ್ಸೂನ್ ಮಾರುತಗಳು, ಸ್ಥಾನ, ಜಲರಾಶಿಗಳು, ಮೇಲ್ಮೈ ಲಕ್ಷಣಗಳು

2 ನೈಋತ್ಯ ಮಾನ್ಸೂನ್ ಮಾರುತಗಳು ಭಾರತದಲ್ಲಿ ಹೇಗೆ ಮಳೆ ಸುರಿಸುತ್ತವೆ?

ಬೇಸಿಗೆ ಅಂತ್ಯದಲ್ಲಿ ಉಷ್ಣಾಂಶವು ಹೆಚ್ಚಾಗಿ ಭಾರತದ ಮಧ್ಯಭಾಗವು ಕಡಿಮೆ ಒತ್ತಡ ಪ್ರದೇಶವಾಗುತ್ತದೆ. ಆಗ ಹೆಚ್ಚು ಒತ್ತಡವಿರುವ ಹಿಂದೂ ಮಹಾಸಾಗರದಿಂದ ನೈಋತ್ಯ ಮಾನ್ಸೂನ್ ಮಾರುತಗಳು ಭಾರತದ ಕಡೆ ಬೀಸುತ್ತವೆ. ಇವು ತೇವಾಂಶಭರಿತ ಮಾರುತಗಳಾಗಿದ್ದು, ಪಶ್ಚಿಮ ಘಟ್ಟ ಹಾಗೂ ಹಿಮಾಲಯದಿಂದ ತಡೆದು ಹೆಚ್ಚು ಮಳೆ ಸುರಿಸುತ್ತವೆ.

3 ಭಾರತದ ವಾಯುಗುಣದ ಋತುಮಾನಗಳಾವುವು?

*ಚಳಿಗಾಲ * ಮಳೆಗಾಲ * ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ * ಬೇಸಿಗೆಕಾಲ

4 ಭಾರತದಲ್ಲಿ ಅಧಿಕ ಮಳೆ ಬೀಳುವ ಪ್ರದೇಶಗಳಾವುವು?

ಪಶ್ಚಿಮ ಘಟ್ಟಗಳು, ಈಶಾನ್ಯ ಭಾರತ, ಪಶ್ಚಿಮ ತೀರ, ಉತ್ತರದ ಪರ್ವತದ ತಪ್ಪಲು.

## ಅಧ್ಯಾಯ-4

## ಭಾರತದ ಮಣ್ಣುಗಳು

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಮಣ್ಣಿನ ಸವೆತ ಎಂದರೇನು?

ಮಣ್ಣಿನ ಮೇಲ್ಭಾಗದ ಸಡಿಲವಾದ ಪದರವು ನೈಸರ್ಗಿಕ ಕರ್ತೃಗಳಿಂದ ಸವೆಯುವುದೇ ಮಣ್ಣಿನ ಸವೆತ.

2 'ರೀಗರ್' ಮಣ್ಣು ಎಂದು ಯಾವ ಮಣ್ಣನ್ನು ಕರೆಯುತ್ತಾರೆ?

ಕಪ್ಪು ಮಣ್ಣು.

3 ಮಣ್ಣಿನ ಸಂರಕ್ಷಣೆ ಎಂದರೇನು?

ಮಣ್ಣಿನ ಸವೆತ ನಿಯಂತ್ರಣ ಮತ್ತು ಫಲವತ್ತತೆ ಕಾಪಾಡುವುದೇ ಮಣ್ಣಿನ ಸಂರಕ್ಷಣೆ.

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಮಣ್ಣಿನ ಸವೆತಕ್ಕೆ ಕಾರಣಗಳೇನು?

* ಅರಣ್ಯ ನಾಶ
* ಅತಿಯಾಗಿ ಮೇಯಿಸುವುದು.
* ಅವೈಜ್ಞಾನಿಕ ಬೇಸಾಯ
* ವರ್ಗಾವಣೆ ಬೇಸಾಯ.

2 ಮಣ್ಣಿನ ಸಂರಕ್ಷಣಾ ವಿಧಾನಗಳನ್ನು ಪಟ್ಟಿ ಮಾಡಿರಿ. **ಅಥವಾ** ಮಣ್ಣಿನ ಸಂರಕ್ಷಣೆಗೆ ನಿಮ್ಮ ಸಲಹೆಗಳೇನು?

* ಅರಣ್ಯ ಬೆಳೆಸುವುದು.
* ಅತಿಯಾಗಿ ಮೇಯಿಸಬಾರದು.
* ವೈಜ್ಞಾನಿಕ ಬೇಸಾಯ.
* ಬದುಗಳ ನಿರ್ಮಾಣ
* ಸಮೋನ್ನತಿ ಬೇಸಾಯ.
* ಚೆಕ್ ಡ್ಯಾಮ್ ನಿರ್ಮಾಣ.

3 ಮಣ್ಣಿನ ಸವೆತದ ಪರಿಣಾಮಗಳೇನು? **ಅಥವಾ** ಮಣ್ಣಿನ ಸವೆತವು ದೇಶದ ಆರ್ಥಿಕ ವ್ಯವಸ್ಥೆಯ ಹಿನ್ನಡೆಗೆ ಹೇಗೆ ಕಾರಣವಾಗುತ್ತದೆ?

* ಕಡಿಮೆ ಕೃಷಿ ಇಳುವರಿ.
* ನದಿ ಪ್ರವಾಹ
* ಅಂತರ್ಜಲ ಮಟ್ಟ ಕುಸಿತ.
* ಮಣ್ಣಿನ ಸಾರ ಕಡಿಮೆ.

## ಅಧ್ಯಾಯ-5

## ಭಾರತದ ಅರಣ್ಯ ಸಂಪತ್ತು

**I ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಅರಣ್ಯಗಳ ಪ್ರಾಮುಖ್ಯತೆಯಲ್ಲಿ ಯಾವುದಾದರೂ ನಾಲ್ಕನ್ನು ತಿಳಿಸಿ.

* ಮಳೆ ಬೀಳಿಸುತ್ತವೆ
* ಪ್ರವಾಹ ನಿಯಂತ್ರಣ
* ಮಣ್ಣಿನ ಫಲವತ್ತತೆ ಹೆಚ್ಚಳ
* ಪರಿಸರ ಸಮತೋಲನ
* ವನ್ಯಜೀವಿಗಳಿಗೆ ಆಶ್ರಯ.

2 ಅರಣ್ಯ ನಾಶಕ್ಕೆ ಕಾರಣಗಳೇನು?

* ಕೃಷಿ ಕ್ಷೇತ್ರದ ವಿಸ್ತರಣೆ.
* ರಸ್ತೆ ನಿರ್ಮಾಣ.
* ಕಾಡ್ಗಿಚ್ಚು
* ಅತಿಯಾಗಿ ಮೇಯಿಸುವುದು.
* ನಗರೀಕರಣ
* ಕೈಗಾರಿಕೀರಣ.

3 ಅರಣ್ಯ ಸಂರಕ್ಷಣೆಗೆ ನಿಮ್ಮ ಸಲಹೆಗಳೇನು? **ಅಥವಾ** ಅರಣ್ಯ ಸಂರಕ್ಷಣೆಗೆ ಕೈಗೊಳ್ಳಬಹುದಾದ 4 ಕ್ರಮಗಳನ್ನು ತಿಳಿಸಿ.

* ಅರಣ್ಯ ಬೆಳೆಸುವುದು. * ಅತಿಯಾಗಿ ಮೇಯಿಸಬಾರದು.
* ಕಾಡ್ಗಿಚ್ಚು ನಿಯಂತ್ರಣ. * ಬೀಜಗಳನ್ನು ಹರಡುವುದು.
* ಕೀಟ ಮತ್ತು ರೋಗ ನಿಯಂತ್ರಣ. * ಜನ ಜಾಗೃತಿ.

4 ಕರ್ನಾಟಕದ ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.

ನಾಗರಹೊಳೆ, ಬಂಡಿಪುರ, ಬನ್ನೇರುಘಟ್ಟ, ಕುದುರೆಮುಖ ಮತ್ತು ಅನ್ಸಿ ರಾಷ್ಟ್ರೀಯ ಉದ್ಯಾನ.

5 ಭಾರತದ ಯಾವುದಾದರೂ 4 ಜೀವಿ ಸಂರಕ್ಷಣಾ ವಲಯಗಳನ್ನು ಹೆಸರಿಸಿ.

ನೀಲಗಿರಿ, ನಂದಾದೇವಿ, ಮಾನಸ, ಸುಂದರಿಬನ, ಕಾಂಚನಗಂಗಾ.

6 ನಿತ್ಯ ಹರಿದ್ವರ್ಣ ಕಾಡುಗಳು ಮತ್ತು ಎಲೆ ಉದುರಿಸುವ ಕಾಡುಗಳ ವ್ಯತ್ಯಾಸಗಳೇನು?

| **ನಿತ್ಯ ಹರಿದ್ವರ್ಣ ಕಾಡುಗಳು** | **ಎಲೆ ಉದುರಿಸುವ ಕಾಡುಗಳು** |
|---|---|
| * ಸದಾ ಹಸಿರಾಗಿರುತ್ತವೆ. | * ಬೇಸಿಗೆ ಆರಂಭದಲ್ಲಿ ಎಲೆ ಉದುರಿಸುತ್ತವೆ. |
| * 250 ಸೆ.ಮೀ.ಗಿಂತ ಹೆಚ್ಚು ಮಳೆಯಾಗುವ ಕಡೆ ಕಂಡುಬರುತ್ತವೆ. | * 100-200 ಸೆ.ಮೀ. ಮಳೆಯಾಗುವ ಕಡೆ ಕಂಡುಬರುತ್ತವೆ. |
| * ಪಶ್ಚಿಮ ಘಟ್ಟದ ಪಶ್ಚಿಮ ಭಾಗ, ಈಶಾನ್ಯ ಭಾರತ | * ತಮಿಳುನಾಡು, ಕರ್ನಾಟಕ. |

| ಮರುಭೂಮಿ ಸಸ್ಯವರ್ಗದ ಲಕ್ಷಣಗಳು | ಮ್ಯಾಂಗ್ರೋವ್ ಕಾಡುಗಳ ಲಕ್ಷಣಗಳು | ಪರ್ವತ ಕಾಡುಗಳ ಲಕ್ಷಣಗಳು |
|---|---|---|
| * ವಾರ್ಷಿಕ 10-15 ಸೆ.ಮೀ. ಮಳೆಯಾಗುವ ಕಡೆ ಕಂಡುಬರುತ್ತವೆ.<br>* ಉದಾ: ಥಾರ್ ಮರುಬೂಮಿ, ಪಂಜಾಬ್, ಹರಿಯಾಣ<br>* ಕಗ್ಗಲಿ, ಕಳ್ಳಿ, ಖರ್ಜೂರ ಮರ | * ನದಿ ಮುಖಜ ಭೂಮಿ ಮತ್ತು ನದಿ ಅಳಿವೆಗಳಲ್ಲಿ ಕಂಡುಬರುತ್ತವೆ.<br>* ಬಿಳಲು ಬೇರು ಹೊಂದಿವೆ.<br>* ಸುಂದರಿ ಮರ, ತಾಳೆ, ಜರಿಗಿಡ,ಬೆತ್ತ. | * ಪರ್ವತಗಳ ಇಳಿಜಾರುಗಳಲ್ಲಿ ಬೆಳೆಯುತ್ತವೆ.<br>* ಉದಾ: ಹಿಮಾಲಯ ಪರ್ವತ ಮತ್ತು ನೀಲಗಿರಿ ಬೆಟ್ಟ.<br>* ಓಕ್, ಬೀಚ್, ಪೈನ್ ಮರ |

| ಅರಣ್ಯಗಳು | ಬೆಳೆಯುವ ಪ್ರಮುಖ ಮರಗಳು |
|---|---|
| ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳು | ತೇಗ, ಬೀಟೆ, ಎಬೋನಿ, ಮಹೊಗನಿ,ಗುರ್ಜಾನ್, ಚಂಪ |
| ಉಷ್ಣವಲಯದ ಎಲೆ ಉದುರಿಸುವ ಕಾಡುಗಳು | ತೇಗ, ಸಲೆ, ಶ್ರೀಗಂಧ, ಕೆಂದಾಳ, ತಪಸಿ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ |
| ಕುರುಚಲು ಸಸ್ಯ ಮತ್ತು ಹುಲ್ಲುಗಾವಲು | ಕುಬ್ಜ ಒರಟಾದ ಹುಲ್ಲು, ಮುಳ್ಳು ಮರ ಗಿಡಗಳು |
| ಮರುಭೂಮಿ ಸಸ್ಯವರ್ಗ | ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ |
| ಪರ್ವತ ಕಾಡುಗಳು | ಓಕ್, ಚಸ್ಟ್ ನಟ್, ಆಶ್, ಬೀಚ್, ಪೈನ್, ಸಿಡಾರ್, ಸ್ಪ್ರೂಸ್, ಫರ್, ವಾಲ್ ನಟ್ |
| ಮ್ಯಾಂಗ್ರೋವ್ ಕಾಡುಗಳು | ಸುಂದರಿ, ಬೆತ್ತ, ಜರಿ ಗಿಡ, ತಾಳೆ, ಕಂದಾಳೆ, ಕೇದಿಗೆ |

# ಅಧ್ಯಾಯ-6

## ಭಾರತದ ಜಲಸಂಪನ್ಮೂಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದಲ್ಲಿ ಹೆಚ್ಚು ರೂಢಿಯಲ್ಲಿರುವ ನೀರಾವರಿ ವಿಧ. **ಬಾವಿ ನೀರಾವರಿ**

2 ಭಾರತದ ಮೊದಲ ವಿವಿಧೋದ್ಧೇಶ ನದಿ ಕಣಿವೆ ಯೋಜನೆ. **ದಾಮೋದರ ನದಿ ಕಣಿವೆ ಯೋಜನೆ**.

3 'ಬಂಗಾಳದ ದುಃಖಃಕಾರಿ ನದಿ' (ಪಶ್ಚಿಮ ಬಂಗಾಳದ ದುಃಖಃದ ನದಿ) **ದಾಮೋದರ.**

4 ಭಾರತದ ಅತಿ ಎತ್ತರವಾದ ಅಣೆಕಟ್ಟೆ. **ಭಾಕ್ರಾ ಅಣೆಕಟ್ಟೆ.**

5 ಭಾಕ್ರಾ ಅಣೆಕಟ್ಟೆಯಿಂದ ನಿರ್ಮಿತಗೊಂಡ ಜಲಾಶಯಕ್ಕೆ **ಗೋವಿಂದ ಸಾಗರ** ಎಂದು ಕರೆಯುವರು.

6 ಭಾರತದ ಅತಿ ಉದ್ದವಾದ ಅಣೆಕಟ್ಟೆ(ನದಿ ಕಣಿವೆ ಯೋಜನೆ) **ಹಿರಾಕುಡ್ ಯೋಜನೆ**.

7 ತುಂಗಭದ್ರ ಯೋಜನೆಯನ್ನು **ಪಂಪಸಾಗರ** ಎಂದು ಕರೆಯುವರು.

8 ಕರ್ನಾಟಕದ ಅತಿ ದೊಡ್ಡ ವಿವಿಧೋದ್ಧೇಶ ನದಿ ಕಣಿವೆ ಯೋಜನೆ. **ಕೃಷ್ಣ ಮೇಲ್ದಂಡೆ ಯೋಜನೆ.**

9 'ಬಿಹಾರದ ಕಣ್ಣೀರಿನ ನದಿ' ( ದುಃಖಃದ ನದಿ) **ಕೋಸಿ.**

10 'ಒಡಿಶಾದ ಕಣ್ಣೀರಿನ ನದಿ' ( ದುಃಖಃದ ನದಿ) **ಮಹಾನದಿ.**

11 ಭಾರತದ ಉದ್ದವಾದ ನದಿ **ಗಂಗಾ.**

12 ದಕ್ಷಿಣ ಭಾರತದ ಉದ್ದವಾದ ನದಿ **ಗೋದಾವರಿ.**

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ನೀರಾವರಿ ಎಂದರೇನು? ನೀರಾವರಿ ವಿಧಗಳಾವುವು?

ಕೃಷಿಗೆ ಕೃತಕವಾಗಿ ನೀರು ಪೂರೈಕೆ ಮಾಡುವುದೇ ನೀರಾವರಿ.

**ವಿಧಗಳು**: 1 ಬಾವಿ ನೀರಾವರಿ. 2 ಕಾಲುವೆ ನೀರಾವರಿ. 3 ಕೆರೆ ನೀರಾವರಿ.

2 ವಿವಿಧೋದ್ಧೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳನ್ನು ಪಟ್ಟಿಮಾಡಿರಿ. **ಅಥವಾ** ನೀರಿನ ಪ್ರಾಮುಖ್ಯತೆ ತಿಳಿಸಿ.

* ನೀರಾವರಿಗಾಗಿ.
* ಪ್ರವಾಹ ನಿಯಂತ್ರಣ.
* ಮನರಂಜನೆ.
* ಜಲ ವಿದ್ಯುತ್ ತಯಾರಿಕೆ.
* ಮೀನುಗಾರಿಕೆ.
* ಮಣ್ಣಿನ ಸವೆತ ನಿಯಂತ್ರಣ.

3 ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ. ಏಕೆ? **ಅಥವಾ** ಭಾರತಕ್ಕೆ ನೀರಾವರಿಯ ಅವಶ್ಯಕತೆ ತಿಳಿಸಿ.

* ಭಾರತವು ಕೃಷಿ ಪ್ರಧಾನ ದೇಶ.
* ಅಕಾಲಿಕ ಮತ್ತು ಅಸಮಾನ ಮಳೆಯಿಂದಾಗಿ.
* ನಿರಂತರ ನೀರಿನ ಪೂರೈಕಗೆ.
* ಅಧಿಕ ಇಳುವರಿಗೆ.

4 ಭಾರತದಲ್ಲಿ ಬಾವಿ ನೀರಾವರಿಯು ಹೆಚ್ಚು ರೂಢಿಯಲ್ಲಿದೆ. ಏಕೆ?

* ಕಡಿಮೆ ಮಳೆಯಾಗುವ ಕಡೆ ಲಭ್ಯ.
* ಕಡಿಮೆ ವೆಚ್ಚ.
* ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ.
* ಸಣ್ಣ ರೈತರಿಗೂ ಲಭ್ಯ.

## ನದಿಗಳು ಮತ್ತು ಅವುಗಳ ಉಗಮ ಸ್ಥಾನಗಳು.

| ನದಿಗಳು | ಉಗಮ ಸ್ಥಾನ | | ನದಿಗಳು | ಉಗಮ ಸ್ಥಾನ |
|---|---|---|---|---|
| ಸಿಂಧು | ಕೈಲಾಸ ಪರ್ವತ | | ಗೋದಾವರಿ | ತ್ರಯಂಬಕ |
| ಗಂಗಾ | ಗಂಗೋತ್ರಿ | | ಕೃಷ್ಣ | ಮಹಾಬಲೇಶ್ವರ |
| ಕಾವೇರಿ | ತಲಕಾವೇರಿ | | ತಾಪಿ | ಮೂಲ್ತಾಯಿ |
| ನರ್ಮದಾ | ಅಮರಕಂಟಕ | | ಮಹಾನದಿ | ಸಿವಾಹ |
| ಬ್ರಹ್ಮಪುತ್ರ | ಚೆಮಯಂಗ್ ಡಂಗ್ | | | |

## ಅಧ್ಯಾಯ-7
## ಭಾರತದ ಭೂ ಸಂಪನ್ಮೂಲಗಳು

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಭೂ ಬಳಕೆ ಎಂದರೇನು?

ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದೇ ಭೂ ಬಳಕೆ.

2 ವ್ಯವಸಾಯ **ಅಥವಾ** ಕೃಷಿ ಎಂದರೇನು?

ಭೂಮಿಯನ್ನು ಉಳುಮೆ ಮಾಡಿ ಬೆಳೆಗಳನ್ನು ಬೆಳೆಯುವುದೇ ವ್ಯವಸಾಯ.

3 ಸಾಂದ್ರ ಬೇಸಾಯ ಎಂದರೇನು?

ಒಂದು ವರ್ಷದಲ್ಲಿ ಒಂದೇ ಕೃಷಿ ಭೂಮಿಯಲ್ಲಿ 2-3 ಬೆಳೆಗಳನ್ನು ಬೆಳೆಯುವುದೇ ಸಾಂದ್ರ ಬೇಸಾಯ.

4 ಮಿಶ್ರ ಬೇಸಾಯ ಎಂದರೇನು?

ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಮಾಡುವ ಬೇಸಾಯವೇ ಮಿಶ್ರಣ ಬೇಸಾಯ.

5 ಜೈಡ್ ಬೇಸಾಯ (ಜೇಡ್ ಬೇಸಾಯ) ಎಂದರೇನು?

ಹಿಂಗಾರು ಮತ್ತು ಮುಂಗಾರು ಬೇಸಾಯದ ನಡುವಿನ ಅವಧಿಯಲ್ಲಿ ಮಾಡುವ ಬೇಸಾಯ ಜೇಡ್ ಬೇಸಾಯ.

6 ಭಾರತದಲ್ಲಿ ಅತಿ ಹೆಚ್ಚು ಗೋಧಿ ಉತ್ಪಾದಿಸುವ ರಾಜ್ಯ ಯಾವುದು?

ಉತ್ತರ ಪ್ರದೇಶ.

7 ನಾರು ಬೆಳೆಗಳನ್ನು ಹೆಸರಿಸಿ.

ಹತ್ತಿ ಮತ್ತು ಸೆಣಬು.

8 ತೋಟಗಾರಿಕೆ ಬೇಸಾಯ ಎಂದರೇನು?

ಹಣ್ಣು, ತರಕಾರಿ ಹೂವು ಮುಂತಾದವುಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದೇ ತೋಟಗಾರಿಕೆ ಬೇಸಾಯ.

9 ಭಾರತದಲ್ಲಿ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ ಯಾವುದು?

ಪಶ್ಚಿಮ ಬಂಗಾಳ.

10 ಆರ್ದ್ರ ಬೇಸಾಯ ಎಂದರೇನು?

ಸಾಕಷ್ಟು ಮಳೆಯಾಗುವ ಪ್ರದೇಶದಲ್ಲಿ ನೀರಾವರಿ ನೆರವಿಲ್ಲದೆ ಬೆಳೆ ಬೆಳೆಯುವುದೇ ಆರ್ದ್ರ ಬೇಸಾಯ.

11 ವಾಣಿಜ್ಯ ಬೇಸಾಯ ಎಂದರೇನು?

ವ್ಯಾಪಾರದ ಉದ್ದೇಶಕ್ಕಾಗಿ ಬೆಳೆ ಬೆಳೆಯುವುದೇ ವಾಣಿಜ್ಯ ಬೇಸಾಯ.

ಜಿಲ್ಲಾ ಪಂಚಾಯತ್ ಮೈಸೂರು ಜಿಲ್ಲೆ

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ವ್ಯವಸಾಯದ ಪ್ರಾಮುಖ್ಯತೆ ತಿಳಿಸಿ.

* ಜನರ ಜೀವನಾಧಾರ. * ಜನರಿಗೆ ಆಹಾರ ಮತ್ತು ಪ್ರಾಣಿಗಳಿಗೆ ಮೇವು ಒದಗಿಸುತ್ತದೆ.
* ರಾಷ್ಟ್ರೀಯ ಆದಾಯದ ಮೂಲ. * ಕೈಗಾರಿಕೆಗಳಿಗೆ ಕಚ್ಚಾವಸ್ತು ಒದಗಿಸುತ್ತದೆ.

2 ಭಾರತದಲ್ಲಿ ಭೂಬಳಕೆಯನ್ನು **ಅಥವಾ** ಬೆಳೆಯಿಡುವ ಮಾದರಿಯನ್ನು ನಿರ್ಧರಿಸುವ ಅಂಶಗಳಾವುವು?

ಮೇಲ್ಮೈ ಲಕ್ಷಣ, ವಾಯುಗುಣ, ಮಣ್ಣು, ಆರ್ಥಿಕ ಸ್ಥಿತಿ, ತಾಂತ್ರಿಕತೆ.

3 ಭಾರತದಲ್ಲಿ ತೋಟಗಾರಿಕೆಯ ಮಹತ್ವವನ್ನು ತಿಳಿಸಿ.

* ಸಮರ್ಪಕ ಭೂಬಳಕೆ * ರಫ್ತು ವ್ಯಾಪಾರ ವೃದ್ಧಿ * ಆಹಾರ ಭದ್ರತೆಗೆ ನೆರವು * ಹೆಚ್ಚು ಲಾಭ ಗಳಿಸಲು ಉತ್ತೇಜನ.

## ಅಧ್ಯಾಯ-8

## ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1 ಉಕ್ಕು ತಯಾರಿಸಲು ಹೆಚ್ಚಾಗಿ ಈ ಮಿಶ್ರಲೋಹವನ್ನು ಬಳಸುತ್ತಾರೆ.

ಅ) ಕಬ್ಬಿಣದ ಅದಿರು ಆ) ಬಾಕ್ಸೈಟ್ ಇ) **ಮ್ಯಾಂಗನೀಸ್** ಈ) ಅಬ್ರಕ

2 ಇತ್ತೀಚೆಗೆ ಭಾರತದ ಅಬ್ರಕದ (ಮೈಕಾ) ರಫ್ತು ಕಡಿಮೆಯಾಗಿದೆ. ಏಕೆಂದರೆ.______

ಅ) **ಕೃತಕ ಅಬ್ರಕದ ಉತ್ಪಾದನೆಯಿಂದ** ಆ) ಅಬ್ರಕದ ನಿಕ್ಷೇಪ ಖಾಲಿಯಾದ್ದರಿಂದ.

ಇ) ಅಬ್ರಕದ ಬಳಕೆ ನಿಷೇಧಿಸಲ್ಪಟ್ಟಿದೆ. ಈ) ಅಬ್ರಕದ ಉತ್ಕೃಷ್ಟತೆ ಕಡಿಮೆಯಾಗಿದೆ.

**II ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದ ಮೊದಲ ವಾಸ್ತವ ಜಲ ವಿದ್ಯುತ್ ಉತ್ಪಾದನಾ ಕೇಂದ್ರ-**ಶಿವನಸಮುದ್ರ.**

2 ಅಲ್ಯೂಮಿನಿಯಂ ಲೋಹ ತಯಾರಿಕೆಗೆ ಬಳಸುವ ಕಚ್ಚಾವಸ್ತು-**ಬಾಕ್ಸೈಟ್**

3 ಭಾರತದ ಮೊದಲ ಪೆಟ್ರೋಲಿಯಂ ನಿಕ್ಷೇಪವನ್ನು **ಮಾಕುಂ** ಎಂಬಲ್ಲಿ ಕಂಡುಹಿಡಿಯಲಾಯಿತು.

4 ಭಾರತದಲ್ಲೆ ಅತಿ ಹೆಚ್ಚು ಕಚ್ಚಾ ತೈಲ ( ಪೆಟ್ರೋಲಿಯಂ) ಉತ್ಪಾದಿಸುವ ಸ್ಥಳ -**ಬಾಂಬೆ ಹೈ.**

5 ಭಾರತದ ಮೊದಲ ಪರಮಾಣು ವಿದ್ಯುತ್ ಉತ್ಪಾದನಾ ಕೇಂದ್ರ -**ತಾರಾಪುರ.**

6 ಕರ್ನಾಟಕದಲ್ಲಿರುವ ಪರಮಾಣು ವಿದ್ಯುತ್ ಉತ್ಪಾದನಾ ಕೇಂದ್ರ -**ಕೈಗಾ**.

7 ಪರಮಾಣು ವಿದ್ಯುತ್ ಉತ್ಪಾದನೆಗೆ ಬೇಕಾದ ಖನಿಜಗಳು -**ಯುರೇನಿಯಂ ಮತ್ತು ಥೋರಿಯಂ**.

8 ಕಲ್ಲಿದ್ದಲನ್ನು '**ಕಪ್ಪು ಬಂಗಾರ**' ಎಂದೂ, ಪೆಟ್ರೋಲಿಯಂ ಅನ್ನು '**ದ್ರವ ಚಿನ್ನ**' ಎಂದೂ, ಅಲ್ಯೂಮಿನಿಯಮ್ (ಬಾಕ್ಸೈಟ್) ಅನ್ನು '**ಅದ್ಭುತ ಲೋಹ**' ಎಂದು ಕರೆಯುವರು.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1** ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳು ಯಾವುವು?

ಸೌರಶಕ್ತಿ, ಪವನ ಶಕ್ತಿ, ಉಬ್ಬರವಿಳಿತ ಶಕ್ತಿ, ಭೂಗರ್ಭ ಶಕ್ತಿ, ಜೈವಿಕ ಅನಿಲ.

2 ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ತಿಳಿಸಿ.

* ಇವುಗಳು ನವೀಕರಿಸಬಹುದಾದ ಮೂಲಗಳು * ಮಾಲಿನ್ಯ ಮುಕ್ತವಾದವು * ಪರಿಸರ ಸ್ನೇಹಿಗಳಾಗಿವೆ.

3 ಭಾರತದಲ್ಲಿ ವಿದ್ಯುತ್ ಅಭಾವಕ್ಕೆ ಕಾರಣಗಳೇನು?

* ಪೆಟ್ರೋಲಿಯಂ ತೈಲದ ಕೊರತೆ * ಕಡಿಮೆ ದರ್ಜೆಯ ಕಲ್ಲಿದ್ದಲು * ಮಳೆಯ ಕೊರತೆ * ವಿದ್ಯುತ್ ಸೋರಿಕೆ.

4 ವಿದ್ಯುಚ್ಛಕ್ತಿ ಅಭಾವಕ್ಕೆ ಪರಿಹಾರಗಳೇನು?

* ಪೆಟ್ರೋಲಿಯಂ ಮತ್ತು ಕಲ್ಲಿದ್ದಲು ಉತ್ಪಾದನೆ ಹೆಚ್ಚಳ * ಪರ್ಯಾಯ ಶಕ್ತಿಗಳ ಬಳಕೆ
* ಜಲ ವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ * ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಬಳಕೆ.

## ಅಧ್ಯಾಯ-9
## ಭಾರತದ ಸಾರಿಗೆ ಮತ್ತು ಸಂಪರ್ಕ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದ ಹೆಬ್ಬಾಗಿಲು' ಮತ್ತು ಭಾರತದ ದೊಡ್ಡ ಬಂದರು -**ಮುಂಬೈ**

2 ಕರ್ನಾಟಕದ ಹೆಬ್ಬಾಗಿಲು' -**ಮಂಗಳೂರು.**

3 ಭಾರತದ ಹಳೆಯ ಕೃತಕ ಬಂದರು- **ಚೆನ್ನೈ**

4 ಮುಂಬೈ ಬಂದರಿನ ಒತ್ತಡವನ್ನು ಕುಗ್ಗಿಸಲು **ಜವಾಹರ್ ಲಾಲ್ ನೆಹರು (ನವ್ಹಾಶೇವ)** ಬಂದರನ್ನು ನಿರ್ಮಾಣ ಮಾಡಲಾಗಿದೆ.

5 ಭಾರತದ ಅತ್ಯಂತ ಹಳೆಯ ಮತ್ತು ಇಂದಿಗೂ ಅಸ್ತಿತ್ವದಲ್ಲಿರುವ ಪತ್ರಿಕೆ- **ಬಾಂಬೆ ಸಮಾಚಾರ.**

6 'ಅರಬ್ಬಿ ಸಮುದ್ರದ ರಾಣಿ' ಎಂದು ಕರೆಯಲ್ಪಡುವ ಬಂದರು- **ಕೊಚ್ಚಿ.**

7 ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ **ಕೆಂಪೇಗೌಡ ವಿಮಾನ ನಿಲ್ದಾಣ** ಎಂದು ಹೆಸರಿಡಲಾಗಿದೆ.

8 ಚೆನ್ನೈ ಬಂದರಿನ ಒತ್ತಡವನ್ನು ಕಡಿಮೆ ಮಾಡಲು ನಿರ್ಮಿಸಿರುವ ಬಂದರು **ಎನ್ನೋರ್**

9 ಕೊಲ್ಕತ ಬಂದರಿನಲ್ಲಿ ಹಡಗು ಸಂಚಾರಕ್ಕೆ ತೊಂದರೆಯಾಗುವುದು. ಏಕೆಂದರೆ **ಹೂಗ್ಲಿ ನದಿಯಲ್ಲಿ ಹೂಳು ತುಂಬುವುದರಿಂದ.**

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ರಸ್ತೆ ಸಾರಿಗೆ **ಅಥವಾ** ಸಾರಿಗೆಯ ಪ್ರಾಮುಖ್ಯತೆಯನ್ನು ತಿಳಿಸಿ.

* ಕೃಷಿ ಅಭಿವೃದ್ಧಿಗೆ ಸಹಾಯಕ. * ಕೈಗಾರಿಕೆ ಅಭಿವೃದ್ಧಿಗೆ ಸಹಾಯಕ.
* ಹಳ್ಳಿ ಹಳ್ಳಿಗಳಿಗೆ ಸಂಪರ್ಕ. * ವ್ಯಾಪಾರ ಅಭಿವೃದ್ಧಿಗೆ ಸಹಾಯಕ.
* ಗಣಿಗಾರಿಕೆ ಅಭಿವೃದ್ಧಿಗೆ ಸಹಾಯಕ.

2 ಸಾರಿಗೆಯ ಮೂರು ವಿಧಗಳಾವುವು?

1 ಭೂಸಾರಿಗೆ 2 ಜಲ ಸಾರಿಗೆ 3 ವಾಯು ಸಾರಿಗೆ

3 ಭಾರತದಲ್ಲಿ ಒಳನಾಡಿನ ಜಲ ಸಾರಿಗೆಯ ಮಹತ್ವ ಕಡಿಮೆಯಾಗಿದೆ. ಏಕೆ?

ಇಂದು ರಸ್ತೆ ಮತ್ತು ರೈಲು ಸಾರಿಗೆಗಳ ಪ್ರಗತಿಯಿಂದಾಗಿ ಒಳನಾಡಿನ ಜಲಸಾರಿಗೆಯ ಮಹತ್ವ ಕಡಿಮೆಯಾಗಿದೆ.

4 ಭಾರತದ ಸಾಗರದ ಜಲ ಸಾರಿಗೆಗೆ ಪೂರಕವಾಗಿರುವ ಅಂಶಗಳಾವುವು?

* ಉದ್ದವಾದ ಸಮುದ್ರ ತೀರ * ಕೆಲವು ನೈಸರ್ಗಿಕ ಬಂದರುಗಳು
* ವಿದೇಶೀ ವ್ಯಾಪಾರದ ಶೇ.85 ಭಾಗವು ಸಾಗರದ ಮೂಲಕ ನಡೆಯುತ್ತದೆ. * ಭಾರತವು ಪೂರ್ವಾರ್ಧ ಗೋಳದಲ್ಲಿದೆ.

5 ಸಂಪರ್ಕದ ಪ್ರಾಮುಖ್ಯತೆ ತಿಳಿಸಿ.

* ಸರ್ಕಾರದ ನೀತಿ ನಿಯಮಗಳನ್ನು ತಿಳಿಸುತ್ತದೆ. * ನೈಸರ್ಗಿಕ ವಿಪತ್ತುಗಳ ಮುನ್ಸೂಚನೆ ನೀಡುತ್ತದೆ.
* ಕೃಷಿ, ಕೈಗಾರಿಕೆ ಅಭಿವೃದ್ಧಿಗೆ ಸಹಾಯಕ. * ದೇಶದ ಏಕತೆಗೆ ನೆರವು.

6 ಪ್ರಮುಖ ಸಂಪರ್ಕ ಮಾಧ್ಯಮಗಳನ್ನು ಹೆಸರಿಸಿ.

ಅಂಚೆ, ದೂರವಾಣಿ, ದೂರದರ್ಶನ, ಅಂತರ್ಜಾಲ, GIS, GPS.

7 ಭೌಗೋಳಿಕ ಮಾಹಿತಿ ವ್ಯವಸ್ಥೆ (GIS) ಮತ್ತು ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ (GPS) ನಡುವಣ ವ್ಯತ್ಯಾಸ ತಿಳಿಸಿ.

**ಭೌಗೋಳಿಕ ಮಾಹಿತಿ ವ್ಯವಸ್ಥೆ:** ಭೂಮಿಯ ಮೇಲ್ಭಾಗದ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಸುವ ವ್ಯವಸ್ಥೆ.

**ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ:** ಭೂಮಿಯ (ಪೃಥ್ವಿಯ) ಮೇಲಿನ ಚರ, ಸ್ಥಿರ ವಸ್ತು ಅಥವಾ ವ್ಯಕ್ತಿಯ ಸ್ಥಾನವನ್ನು ನಿರ್ಧರಿಸುವ ವ್ಯವಸ್ಥೆ.

8 ದೂರ ಸಂವೇಧಿ ತಂತ್ರಜ್ಞಾನ ಎಂದರೇನು?

ಒಂದು ವಸ್ತು, ಸ್ಥಳ ಅಥವಾ ಲಕ್ಷಣಗಳನ್ನು ನೇರ ಸಂಪರ್ಕ ಹೊಂದದೆ ಮಾಹಿತಿ ಸಂಗ್ರಹಿಸುವ ಮಾಧ್ಯಮವೇ ದೂರ ಸಂವೇಧಿ ತಂತ್ರಜ್ಞಾನ. ಇದರ ಮೂಲಕ ಬಾಹ್ಯ ಮತ್ತು ಉಪಗ್ರಹ ಛಾಯಾಚಿತ್ರ ತೆಗೆದುಕೊಳ್ಳಬಹುದು.

| ಪಶ್ಚಿಮ ತೀರದ ಬಂದರುಗಳು | ಪೂರ್ವ ತೀರದ ಬಂದರುಗಳು |
|---|---|
| ಕಾಂಡ್ಲ, ಮುಂಬಯಿ, ನವ್ಹಾಶೇವ, ಮರ್ಮಗೋವ, ನವ ಮಂಗಳೂರು, ಕೊಚಿ. | ತುತಕುಡಿ, ಚೆನ್ನೈ, ಎನ್ನೋರ್, ವಿಶಾಖಪಟ್ಟಣ, ಪಾರಾದೀಪ್, ಹಾಲ್ದಿಯಾ, ಕೊಲ್ಕತ, ಪೋರ್ಟ್ ಬ್ಲೇರ್. |

## ಅಧ್ಯಾಯ-10

# ಭಾರತದ ಕೈಗಾರಿಕೆಗಳು

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1 ಭಾರತದ ಮೊದಲ ಆಧುನಿಕ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಪಶ್ಚಿಮ ಬಂಗಾಳದ____ ಎಂಬಲ್ಲಿ ಸ್ಥಾಪನೆಯಾಯಿತು.

ಅ) **ಕುಲ್ಟಿ** ಆ) ಬಳ್ಳಾರಿ ಇ) ದುರ್ಗಾಪುರ ಈ) ಸೇಲಂ

2 ಭಾರತದ ಮೊದಲ ಆಧುನಿಕ ಹತ್ತಿ ಬಟ್ಟೆ ಕೈಗಾರಿಕೆಯು________ ಎಂಬಲ್ಲಿ ಸ್ಥಾಪನೆಯಾಯಿತು.

ಅ) ಕೊಲ್ಕತ್ತಾ ಆ) ಅಹಮದಾಬಾದ್ ಇ) **ಮುಂಬೈ** ಈ) ಸೇಲಂ

3 'ಭಾರತದ ಕಾಟನೊಪೊಲೀಸ್' ಮತ್ತು 'ಭಾರತದ ಮ್ಯಾಂಚೆಸ್ಟರ್' ___________

ಅ) ಕೊಲ್ಕತ್ತಾ ಆ) **ಮುಂಬೈ** ಇ) ಬೆಂಗಳೂರು ಈ) ಸೇಲಂ

4 ಭಾರತದ ಮೊದಲ ಆಧುನಿಕ ಕಾಗದದ ಕೈಗಾರಿಕೆಯು ಪಶ್ಚಿಮ ಬಂಗಾಳದ________ಎಂಬಲ್ಲಿ ಸ್ಥಾಪನೆಯಾಯಿತು.

ಅ) **ಸೆರಾಂಪುರ** ಆ) ರೇನೂಕೂಟ ಇ) ದುರ್ಗಾಪುರ ಈ) ಬೆಳಗಾವಿ

5 ಬಾಕ್ಸೈಟ್ ಅದಿರು ಈ ಕೈಗಾರಿಕೆಯ ಪ್ರಮುಖ ಕಚ್ಚಾವಸ್ತು ಆಗಿದೆ.________

ಅ) ಕಾಗದ ಕೈಗಾರಿಕೆ ಆ) **ಅಲ್ಯೂಮಿನಿಯಂ ಕೈಗಾರಿಕೆ** ಇ)ಹತ್ತಿ ಬಟ್ಟೆ ಕೈಗಾರಿಕೆ ಈ) ಸಕ್ಕರೆ ಕೈಗಾರಿಕೆ

6 ಇವುಗಳಲ್ಲಿ ಕೇವಲ ವ್ಯವಸಾಯಾಧಾರಿತ ಕೈಗಾರಿಕೆಗಳ ಗುಂಪು._______

ಅ) ಕಬ್ಬಿಣ, ಅಲ್ಯೂಮಿನಿಯಂ, ತಾಮ್ರದ ಕೈಗಾರಿಕೆಗಳು ಆ) **ಹತ್ತಿ ಬಟ್ಟೆ, ಸೆಣಬು, ಸಕ್ಕರೆ ಕೈಗಾರಿಕೆಗಳು**

ಇ) ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು ಈ) ಚಿತ್ರೋದ್ಯಮ, ಪ್ಲಾಸ್ಟಿಕ್ ಕೈಗಾರಿಕೆಗಳು

7 'ಭಾರತದ ಸಿಲಿಕಾನ್ ವ್ಯಾಲಿ' (ಸಿಲಿಕಾನ್ ಸಿಟಿ) ಇದಾಗಿದೆ.

ಅ) **ಬೆಂಗಳೂರು** ಆ) ಚೆನ್ನೈ ಇ) ಹೈದರಾಬಾದ್ ಈ) ಪುಣೆ

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಇಂದು ನಮ್ಮ ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ. ಏಕೆ?

ಭಾರತವು ಸಾಕಷ್ಟು ಯುವ ಜನ ಮತ್ತು ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ಹೊಂದಿರುವುದರಿಂದ.

2 ಕರ್ನಾಟಕದ ಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಎಲ್ಲಿ ಸ್ಥಾಪನೆಯಾಯಿತು?

ಭದ್ರಾವತಿ.

ಸಾ.ಶಿ.ಇ. ಮೈಸೂರು ಜಿಲ್ಲೆ

3 ಮುಂಬಯಿಯನ್ನು 'ಭಾರತದ ಮ್ಯಾಂಚೆಸ್ಟರ್' ಎಂದು ಕರೆಯಲು ಕಾರಣವೇನು?

ಮುಂಬಯಿಯು ಭಾರತದ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾದ್ಧರಿಂದ.

4 ಬೆಂಗಳೂರನ್ನು ಭಾರತದ 'ಸಿಲಿಕಾನ್ ವ್ಯಾಲಿ' ಅಥವಾ 'ಸಿಲಿಕಾನ್ ಸಿಟಿ' ಎಂದು ಕರೆಯಲು ಕಾರಣವೇನು?

ಭಾರತದಲ್ಲಿ ಬೆಂಗಳೂರು ಸಾಫ್ಟವೇರ್ ಕೈಗಾರಿಕೆಯ (ಮಾಹಿತಿ ತಂತ್ರಜ್ಞಾನದ) ಪ್ರಮುಖ ಕೇಂದ್ರವಾದ್ದರಿಂದ.

**III ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಕೈಗಾರಿಕಾ ಸ್ಥಾನೀಕರಣವನ್ನು ನಿರ್ಧರಿಸುವ (ಪ್ರಭಾವ ಬೀರುವ) ಪ್ರಮುಖಾಂಗಳಾವುವು?

* ಕಚ್ಚಾವಸ್ತುಗಳ ಲಭ್ಯತೆ
* ಶಕ್ತಿ ಸಂಪನ್ಮೂಲಗಳು
* ಮಾರುಕಟ್ಟೆ
* ಬಂಡವಾಳ
* ಸಂಚಾರ ಸೌಲಭ್ಯ
* ಕಾರ್ಮಿಕರ ಲಭ್ಯತೆ
* ಸರ್ಕಾರದ ನೀತಿ

2 ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಪಟ್ಟಿಮಾಡಿರಿ.

1 ಹೂಗ್ಲಿ-ಕೊಲ್ಕತ್ತಾ ಪ್ರದೇಶ
2 ಮುಂಬಯಿ-ಪುಣೆ ಪ್ರದೇಶ
3 ಅಹಮದಾಬಾದ್-ವಡೋದರ ಪ್ರದೇಶ
4 ಮಧುರೈ-ಕೊಯಮತ್ತೂರು-ಬೆಂಗಳೂರು ಪ್ರದೇಶ
5 ದೆಹಲಿ-ಮೀರತ್ ಪ್ರದೇಶ
6 ಛೋಟಾ ನಾಗಪುರ ಪ್ರದೇಶ

3 ಭಾರತದ ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಹೆಸರಿಸಿ.

* ಬರ್ನಪುರದ ಭಾರತೀಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
* ದುರ್ಗಾಪುರ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
* ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
* ಬೊಕಾರೊ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
* ಬಿಲಾಯಿ ಹಿಂದೂಸ್ತಾನ್ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
* ರೂರ್ಕೆಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
* ಸೇಲಂ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
* ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ

4 ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ಕುರಿತು ಬರೆಯಿರಿ.

ಮಾನವನ ಜ್ಞಾನಾಧಾರಿತ ಉತ್ಪಾದನೆ ಹಾಗೂ ಸೇವೆಗಳನ್ನೊಳಗೊಂಡ ಉದ್ಯಮಗಳೇ ಜ್ಞಾನಾಧಾರಿತ ಕೈಗಾರಿಕೆಗಳು. ಇವು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಾಧನವಾಗಿವೆ. ಭಾರತವು ಸಾಕಷ್ಟು ಯುವ ಜನ ಮತ್ತು ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ಹೊಂದಿರುವುದರಿಂದ ಜ್ಞಾನಾಧಾರಿತ ಕೈಗಾರಿಕೆಗಳು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿವೆ. ಹೆಚ್ಚು ಸಾಫ್ಟ್ ವೇರ್ ವಸ್ತುಗಳನ್ನು ರಫ್ತು ಮಾಡಲಾಗುತ್ತಿದೆ. ದೇಶಕ್ಕೆ ಹೆಚ್ಚು ವಿದೇಶೀ ವಿನಿಮಯ ಗಳಿಕೆಯಾಗುತ್ತಿದೆ.

## ಅಧ್ಯಾಯ-11

## ಭಾರತದ ನೈಸರ್ಗಿಕ ವಿಪ್ಪತ್ತುಗಳು

**I ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಪ್ರವಾಹ ಉಂಟಾಗಲು ಕಾರಣಗಳೇನು?

* ಅಧಿಕ ಮಳೆ
* ಹಿಮ ಕರಗುವಿಕೆ
* ಆವರ್ತ ಮಾರುತಗಳು
* ನದಿಯಲ್ಲಿ ಹೂಳು ತುಂಬುವುದು.
* ನದಿಗಳು ಪಾತ್ರ ಬದಲಾಯಿಸುವುದು
* ಅರಣ್ಯನಾಶ
* ಅಣೆಕಟ್ಟು ಒಡೆಯುವುದರಿಂದ.

2 ಆವರ್ತ ಮಾರತಗಳ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸಿ.

* ಅಪಾಯಕಾರಿ ತಗ್ಗು ಪ್ರದೇಶಗಳಿಂದ ಜನರ ಸ್ಥಳಾಂತರ
* ಸಮೂಹ ಮಾಧ್ಯಮಗಳ ಮೂಲಕ ಜಾಗೃತಿ

STF ಶಿವಮೊಗ್ಗ ತಾ. ಮೈಸೂರು ಜಿಲ್ಲೆ

* ಮ್ಯಾಂಗ್ರೋವ್ ಕಾಡುಗಳನ್ನು ಬೆಳೆಸುವುದು.
* ಅಗತ್ಯವಿರುವ ಸೇನಾ ತುಕಡಿಗಳನ್ನು ಸಿದ್ಧಗೊಳಿಸುವುದು
* ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವುದು.
* ರಸ್ತೆ-ರೈಲು ಮಾರ್ಗದ ಬದಲಾವಣೆ

3 ಪ್ರವಾಹವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಕ್ರಮಗಳಾವುವು?

* ಕಾಡು ಬೆಳೆಸುವುದು.
* ಅಣೆಕಟ್ಟು ನಿರ್ಮಾಣ
* ಪ್ರವಾಹ ಮುನ್ಸೂಚನಾ ಕೇಂದ್ರ ಸ್ಥಾಪನೆ
* ಒಡ್ಡುಗಳ ನಿರ್ಮಾಣ
* ನದಿ ಬದಿಯಲ್ಲಿ ಅಡ್ಡಗಟ್ಟೆ ನಿರ್ಮಾಣ

4 ಭೂ ಕುಸಿತಕ್ಕೆ ಕಾರಣಗಳೇನು? **ಅಥವಾ** ಪ್ರಪಂಚದಲ್ಲಿ ಇಂದು ಸಂಭವಿಸುವ ಭೂಕುಸಿತಗಳಿಗೆ ಮಾನವ ಕೃತ್ಯಗಳು ಕಾರಣವಾಗಿವೆ. ಹೇಗೆ?

* ಅರಣ್ಯ ನಾಶ
* ರೈಲು ಮತ್ತು ರಸ್ತೆ ನಿರ್ಮಾಣ
* ಗಣಿಗಾರಿಕೆ
* ಅಣೆಕಟ್ಟು ನಿರ್ಮಾಣ
* ಕಲ್ಲು ಗಣಿಗಾರಿಕೆ
* ನಗರೀಕರಣ
* ಅಧಿಕ ಮಳೆ
* ಭೂಕಂಪ

5 ಭೂಕುಸಿತವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಕ್ರಮಗಳಾವುವು?

* ಇಳಿಜಾರು ತಗ್ಗಿಸುವುದು
* ಇಳಿಜಾರುಗಳಲ್ಲಿ ಬಂಡೆ ಬೀಳದಂತೆ ತಡೆಯುವುದು
* ಕಾಡು ಬೆಳೆಸುವುದು
* ಗಣಿಗಾರಿಕೆ ನಿಷೇಧ
* ಕಲ್ಲುಗಣಿಗಾರಿಕೆ ನಿಷೇಧ

6 ಸಮುದ್ರ ತೀರದ ಸವೆತ (ಕೊರೆತ) ಕ್ಕೆ ಕಾರಣಗಳೇನು?

* ಸುನಾಮಿ
* ಸಮುದ್ರದ ಅಲೆಗಳು
* ನೈಋತ್ಯ ಮಾನ್ಸೂನ್ ಮಾರುತಗಳು
* ಆವರ್ತ ಮಾರುತಗಳು
* ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ.

7 ಸಮುದ್ರ ತೀರದ ಸವೆತ (ಕೊರೆತ) ದ ನಿಯಂತ್ರಣ ಕ್ರಮಗಳನ್ನು ತಿಳಿಸಿ.

* ತೀರ ಪ್ರದೇಶಗಳಲ್ಲಿ ಮರಳು ತೆಗೆಯಬಾರದು
* ತಡೆಗೋಡೆ ನಿರ್ಮಾಣ
* ದಪ್ಪ ಬಂಡೆಗಳನ್ನು ಹಾಕುವುದು
* ಮ್ಯಾಂಗ್ರೋವ್ ಕಾಡು ಬೆಳೆಸುವುದು.
* ಗಣಿಗಾರಿಕೆ ನಿಷೇಧ

8 ಭೂಕಂಪಕ್ಕೆ ಕಾರಣಗಳೇನು?

* ಜ್ವಾಲಾಮುಖಿ
* ಭೂಫಲಕಗಳ ಚಲನೆ
* ಭೂಕುಸಿತ
* ಶಿಲಾಸ್ತರಗಳ ಭಂಗ
* ನಗರೀಕರಣ
* ಅಣೆಕಟ್ಟು ನಿರ್ಮಾಣ
* ಗಣಿಗಾರಿಕೆ

9 ಭೂಕಂಪಗಳಿಂದಾಗುವ ಪರಿಣಾಮಗಳನ್ನು ಮಿತಗೊಳಿಸುವುದಕ್ಕೆ ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

* ಜನವಸತಿಗಳ ನಿರ್ಮಾಣ ನಿಷೇಧ
* ಭೂಕಂಪ ನಿರೋಧಕ ಕಟ್ಟಡಗಳ ನಿರ್ಮಾಣ
* ಬಹು ಅಂತಸ್ತು ಕಟ್ಟಡಗಳ ನಿರ್ಮಾಣ ನಿಷೇಧ
* ಅರಣ್ಯನಾಶ ನಿಯಂತ್ರಣ
* ವಿದ್ಯುತ್ ಸಂಪರ್ಕ ಕಡಿತ
* ಮೂಲ ಸೌಕರ್ಯಗಳ ಪೂರೈಕೆ

10 ಪ್ರವಾಹಗಳಿಂದ **ಅಥವಾ** ಭೂಕುಸಿತದಿಂದ **ಅಥವಾ** ಆವರ್ತ ಮಾರುತಗಳು **ಅಥವಾ** ಸಮುದ್ರ ತೀರ ಸವೆತ **ಅಥವಾ** ಭೂಕಂಪದಿಂದಾಗುವ ಪರಿಣಾಮಗಳೇನು?

* ಅಪಾರ ಸಾವು ನೋವು ಸಂಭವಿಸುತ್ತದೆ.
* ಆಸ್ತಿ ಹಾನಿ
* ಬೆಳೆ ಹಾನಿ
* ಗಿಡ ಮರ ನಾಶ

* ಸಾರಿಗೆ ಸಂಪರ್ಕ ಅಸ್ತವ್ಯಸ್ತವಾಗುತ್ತದೆ. * ವಿದ್ಯುತ್ ಸಂಪರ್ಕ ಕಡಿತ * ಪ್ರಾಣಿ ಸಂಕುಲ ನಾಶ

## ಅಧ್ಯಾಯ-12
## ಭಾರತದ ಜನಸಂಖ್ಯೆ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 2011ರ ಜನಗಣತಿಯಂತೆ ಭಾರತದ ಜನಸಂಖ್ಯೆ- **121 ಕೋಟಿ**

2 ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯ- **ಉತ್ತರ ಪ್ರದೇಶ**

3 ಭಾರತದಲ್ಲಿ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ರಾಜ್ಯ- **ಸಿಕ್ಕಿಂ**

4 ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯ- **ಬಿಹಾರ**

5 ಭಾರತದಲ್ಲಿ ಅತಿ ಕಡಿಮೆ ಜನಸಾಂದ್ರತೆ ಹೊಂದಿರುವ ರಾಜ್ಯ- **ಅರುಣಾಚಲ ಪ್ರದೇಶ**

6 ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆ ಮತ್ತು ಜನಸಾಂದ್ರತೆ ಹೊಂದಿರುವ ಕೇಂದ್ರಾಡಳಿತ ಪ್ರದೇಶ- **ದೆಹಲಿ.**

7 ಭಾರತದಲ್ಲಿ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಕೇಂದ್ರಾಡಳಿತ ಪ್ರದೇಶ- **ಲಕ್ಷದ್ವೀಪ**

8 ಭಾರತದಲ್ಲಿ ಅತಿ ಕಡಿಮೆ ಜನಸಾಂದ್ರತೆ ಹೊಂದಿರುವ ಕೇಂದ್ರಾಡಳಿತ ಪ್ರದೇಶ- **ಅಂಡಮಾನ್ ಮತ್ತು ನಿಕೋಬಾರ್**.

9 2011ರ ಜನಗಣತಿಯಂತೆ ಕರ್ನಾಟಕದ ಜನಸಾಂದ್ರತೆ- **319**

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಜನಸಂಖ್ಯೆ ಎಂದರೇನು?

ಒಂದು ಪ್ರದೇಶದಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಗೆ ಜನಸಂಖ್ಯೆ ಎನ್ನುವರು.

2 ಜನ ಸಾಂದ್ರತೆ ಎಂದರೇನು? ಅಥವಾ ಜನ ಸಾಂದ್ರತೆಯನ್ನು ವ್ಯಾಖ್ಯಾನಿಸಿ.

ಪ್ರತಿ ಚದುರ ಕೀ.ಮೀ.ನಲ್ಲಿ ವಾಸಿಸುವ ಜನರ ಸಂಖ್ಯೆಗೆ ಜನ ಸಾಂದ್ರತೆ ಎನ್ನುವರು.

3 ಭೌಗೋಳಿಕ ಮೇಲ್ಮೈ ಲಕ್ಷಣಗಳು ಜನಸಂಖ್ಯಾ ಹಂಚಿಕೆ ಮೇಲೆ ಹೇಗೆ ಪ್ರಭಾವ ಬೀರುತ್ತವೆ?

ಗುಡ್ಡಗಾಡ ಪ್ರದೇಶದಲ್ಲಿ ವಿರಳ ಜನವಸತಿ ಹಾಗೂ ಮೈದಾನ ಪ್ರದೇಶದಲ್ಲಿ ಹೆಚ್ಚು ಜನಸಂಖ್ಯೆಯು ಇದ್ದು ಜನಸಂಖ್ಯಾ ಹಂಚಿಕೆ ಮೇಲೆ ಹೇಗೆ ಪ್ರಭಾವ ಬೀರುತ್ತವೆ.

**III ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಕಾರಣಗಳೇನು?

* ಬಾಲ್ಯ ವಿವಾಹ * ಬಡತನ
* ಬಹು ಪತ್ನಿತ್ವ * ಅನಕ್ಷರತೆ * ವೈದ್ಯಕೀಯ ಸೌಲಭ್ಯ

2 ಜನಸಂಖ್ಯಾ ಬೆಳವಣಿಗೆಯ ಪರಿಣಾಮಗಳಾವುವು?

* ಆಹಾರ ಸಮಸ್ಯೆ * ವಸತಿ ಸಮಸ್ಯೆ
* ಉದ್ಯೋಗ ಸಮಸ್ಯೆ * ಬಡತನ

3 ಜನಸಂಖ್ಯಾ ಬೆಳವಣಿಗೆ ನಿಯಂತ್ರಣ ಕ್ರಮಗಳಾವುವು?

* ಕುಟುಂಬ ಯೋಜನೆ * ಮಹಿಳಾ ಕಲ್ಯಾಣ ಯೋಜನೆ
* ಪ್ರಚಾರ ಮತ್ತು ಜಾಹಿರಾತು * ಜನ ಜಾಗೃತಿ

4 ಜನಸಂಖ್ಯೆ ಹಂಚಿಕೆ ನಿಯಂತ್ರಿಸುವ ( ಪ್ರಭಾವ ಬೀರುವ) ಅಂಶಗಳಾವುವು?

* ವಾಯುಗುಣ * ಮೇಲ್ಮೈ ಲಕ್ಷಣಗಳು
* ಮಣ್ಣು * ಭದ್ರತೆ * ಸಂಪನ್ಮೂಲಗಳು

# ಅರ್ಥಶಾಸ್ತ್ರ

## ಅಧ್ಯಾಯ-1

## ಅಭಿವೃದ್ಧಿ

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ರಾಷ್ಟ್ರೀಯ ವರಮಾನ (ರಾಷ್ಟ್ರೀಯ ಆದಾಯ) ಎಂದರೇನು?

ಒಂದು ರಾಷ್ಟ್ರವು ಒಂದು ವರ್ಷದ ಅವಧಿಯಲ್ಲಿ ಉತ್ಪಾದಿಸಿದ ಎಲ್ಲಾ ಸರಕು-ಸೇವೆಗಳ ಒಟ್ಟು ಮೌಲ್ಯವೇ ರಾಷ್ಟ್ರೀಯ ವರಮಾನ.

2 ತಲಾ ವರಮಾನವನ್ನು ಹೇಗೆ ಕಂಡುಹಿಡಿಯಲಾಗುತ್ತದೆ? **ಅಥವಾ** ತಲಾದಾಯ ಎಂದರೇನು?

ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿ ತಲಾ ವರಮಾನವನ್ನು ಕಂಡುಹಿಡಿಯಲಾಗುತ್ತದೆ.

3 ಮಾನವ ಅಭಿವೃದ್ಧಿ ಸೂಚ್ಯಾಂಕ (HDI)ಎಂದರೇನು?

ನಿರೀಕ್ಷಿತ ಜೀವಿತಾವಧಿ, ಸಾಕ್ಷರತೆ ಪ್ರಮಾಣ ಮತ್ತು ತಲಾ ವರಮಾನ ಈ ಮೂರು ಸೂಚಿಗಳ ಸರಾಸರಿಯೇ ಮಾನವ ಅಭಿವೃದ್ಧಿ ಸೂಚ್ಯಾಂಕ.

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 'ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ'. ಸಮರ್ಥಿಸಿ.

- ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಾಯ.
- ವರಮಾನ ಮತ್ತು ಉಳಿತಾಯ ವೃದ್ಧಿ.
- ಸ್ವ ಉದ್ಯೋಗಕ್ಕಾಗಿ ಸಾಲ ಸೌಲಭ್ಯ.
- ಸ್ತ್ರೀ ಶೋಷಣೆಯಿಂದ ರಕ್ಷಣೆ.
- ಸಾಮಾಜಿಕ ಪಿಡುಗುಗಳ ನಿವಾರಣೆ
- ಮಹಿಳೆಯರ ಘನತೆ ಹೆಚ್ಚಳ

2 ರಾಷ್ಟ್ರೀಯ ವರಮಾನದ ಮೂಲಕ ಆರ್ಥಿಕ ಪ್ರಗತಿಯನ್ನು ಅಳೆಯುವುದು ಸೂಕ್ತವಲ್ಲ. ಏಕೆ?

ಏಕೆಂದರೆ ರಾಷ್ಟ್ರೀಯ ವರಮಾನದ ಜೊತೆಗೆ ಜನಸಂಖ್ಯೆಯು ಹೆಚ್ಚಳವಾದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.

3 ಆರ್ಥಿಕ ಪ್ರಗತಿಯನ್ನು ಅಳೆಯಲು ತಲಾ ವರಮಾನವು ಸೂಕ್ತ ಮಾನದಂಡವಲ್ಲ. ಹೇಗೆ?

ತಲಾ ವರಮಾನವು ಜನರ ನಡುವಿನ ಆದಾಯ ಹಂಚಿಕೆಯನ್ನು ತೋರಿಸುವುದಿಲ್ಲ, ಅಲ್ಲದೇ ಆಹಾರ, ವಸತಿ, ಶಿಕ್ಷಣ ಮುಂತಾದ ಅಂಶಗಳ ಲಭ್ಯತೆ ಪರಿಗಣಿಸುವುದಿಲ್ಲವಾದ್ದರಿಂದ ಸೂಕ್ತ ಮಾನದಂಡವಲ್ಲ.

4 ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೇ ಸ್ವಾತಂತ್ರ್ಯ, ಸಮಾನತೆ ನೀಡಿದ್ದರೂ ತಾರತಮ್ಯ ಇನ್ನೂ ಕಡಿಮೆಯಾಗಿಲ್ಲ. ಏಕೆ?

ಏಕೆಂದರೆ ಮಹಿಳೆಯರು ಇನ್ನೂ ಅಭಿವೃದ್ಧಿಯಲ್ಲಿ ಸಮಾನ ಪಾಲುದಾರರಲ್ಲ. ಕಡಿಮೆ ಸಾಕ್ಷರತೆ, ಕಡಿಮೆ ವೇತನ, ಅಪೌಷ್ಟಿಕತೆ ಇದೆ. ರಾಜಕೀಯದಲ್ಲೂ ಇವರ ಧ್ವನಿಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.

5 ಅನಭಿವೃದ್ಧಿಗೆ ಕಾರಣಗಳೇನು?

ಜನಸಂಖ್ಯೆ ಹೆಚ್ಚಳ, ಬಡತನ, ಅನಕ್ಷರತೆ, ಕಡಿಮೆ ರಾಷ್ಟ್ರೀಯ ಆದಾಯ ಮತ್ತು ತಲಾದಾಯ.

## ಅಧ್ಯಾಯ-2

# ಗ್ರಾಮೀಣ ಅಭಿವೃದ್ಧಿ

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1 'ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು.________

ಅ) **ಮಹಾತ್ಮ ಗಾಂಧೀಜಿ** ಆ) ಅಮರ್ತ್ಯ ಸೇನ್ ಇ) ಡಾ. ಎಂ.ಎಸ್. ಸ್ವಾಮಿನಾಥನ್ ಈ) ನೆಹರು

2 ಗ್ರಾಮಗಳ ಆರ್ಥಿಕ ಮತ್ತು ಸಾಮಾಜಿಕ ಉನ್ನತಿ ಸಾಧಿಸುವ ಒಂದು ಸಮಗ್ರ ಅಭಿವೃದ್ಧಿಯೇ.__________

ಅ) ಅಭಿವೃದ್ಧಿ ಆ) **ಗ್ರಾಮೀಣ ಅಭಿವೃದ್ಧಿ** ಇ) ಪ್ರಗತಿ ಈ) ಮಾನವ ಅಭಿವೃದ್ಧಿ

3 ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದೇ__

ಅ) **ವಿಕೇಂದ್ರೀಕರಣ** ಆ) ಗ್ರಾಮೀಣ ಅಭಿವೃದ್ಧಿ ಇ) ಪ್ರಗತಿ ಈ) ಅಭಿವೃದ್ಧಿ

4 ಭಾರತದ ಆಡಳಿತ ವ್ಯವಸ್ಥೆಯಲ್ಲಿ 73ನೇ ಸಂವಿಧಾನದ ತಿದ್ದುಪಡಿ ಒಂದು ಪ್ರಮುಖ ಮೈಲಿಗಲ್ಲಾಗಿದೆ. ಕಾರಣ________

ಅ) ನಾಗರಿಕ ಸೇವಾ ಪದ್ಧತಿ ಜಾರಿಗೆ. ಆ) **ಏಕರೂಪದ ಪಂಚಾಯತ್ ರಾಜ್ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು**

ಇ) ಮೀಸಲಾತಿ ಪದ್ಧತಿ ಜಾರಿಗೆ ಈ) ಸಮಾನ ವೇತನ ಕಾಯ್ದೆ ಜಾರಿಗೆ.

5 ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಆರ್ಥಿಕ ಸ್ವಾವಲಂಬಿಗಳಾಗಿ ಮಾಡಲು ________ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

ಅ) ಭೂ ಸುಧಾರಣೆ ಆ) ಪಂಚಾಯತ್ ರಾಜ್ ಸಂಸ್ಥೆ ಇ) ಚುನಾವಣೆ ಈ) **ಮಹಿಳಾ ಸ್ವಸಹಾಯ ಸಮೂಹ**

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?

* ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಭಾಗವಹಿಸುವಂತೆ ಮಾಡುತ್ತವೆ.
* ಬಡತನ ನಿರ್ಮೂಲನೆ
* ಪಡಿತರ ವ್ಯವಸ್ಥೆ ಬಲಪಡಿಸುತ್ತವೆ.
* ಕೃಷಿ ಅಭಿವೃದ್ಧಿ.
* ಮೂಲ ಸೌಕರ್ಯಗಳ ಪೂರೈಕೆ.
* ಮಹಿಳಾ ಸಬಲೀಕರಣ

2 ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.

1 ಗ್ರಾಮ ಪಂಚಾಯತಿ 2 ತಾಲ್ಲೂಕು ಪಂಚಾಯತಿ 3 ಜಿಲ್ಲಾ ಪಂಚಾಯತಿ.

3 ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ತಿಳಿಸಿ.

* ಕೃಷಿ ವಲಯದ ಅಭಿವೃದ್ಧಿ
* ಉದ್ಯೋಗ ಸೃಷ್ಟಿ
* ಸರಕು-ಸೇವೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ
* ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ
* ಬಡತನ ಮತ್ತು ನಿರುದ್ಯೋಗ ನಿವಾರಣೆ
* ಮೂಲ ಸೌಕರ್ಯಗಳ ಪೂರೈಕೆ.

4 ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ತಿಳಿಸಿ.

* ಗ್ರಾಮೀಣ ಅಭಿವೃದ್ಧಿಯಲ್ಲಿ ವಿಕೇಂದ್ರೀಕರಣವು ಪ್ರಮುಖ ಪಾತ್ರ ವಹಿಸುತ್ತದೆ.
* ಗ್ರಾಮದ ಅಧಿಕಾರವನ್ನು ಗ್ರಾಮದ ಜನರಿಗೆ ನೀಡುತ್ತದೆ
* ಜನರ ಪಾಲುಗಾರಿಕೆ ಹೆಚ್ಚುತ್ತದೆ
* ವಿಕೇಂದ್ರೀಕರಣವು ಎಲ್ಲಾ ಶೋಷಣೆ ತಡೆದು ಸ್ವಾತಂತ್ರ್ಯ ಮತ್ತು ಘನತೆಯನ್ನು ರಕ್ಷಿಸುತ್ತದೆ.
* ಇದನ್ನೆ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದಿದ್ದಾರೆ.

5 ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳೇನು?

* ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯನ್ನು ಹೊಂದಿದ ವ್ಯವಸ್ಥೆಯಾಗಿದೆ.
* ನೇರ ಮತ್ತು ನಿಯಮಿತ ಚುನಾವಣೆಗಳು
* ಎಸ್ಸಿ, ಎಸ್ಟಿ, ಹಿಂದುಳಿದ ವರ್ಗ ಮತ್ತು ಮಹಿಳಿಯರಿಗೆ ಸ್ಥಾನ ಮೀಸಲಾತಿ
* ಹಣಕಾಸು ಮತ್ತು ಆಡಳಿತಾತ್ಮಕ ಜವಾಬ್ದಾರಿ ನೀಡಿಕೆ
* ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ

## ಅಧ್ಯಾಯ-3

## ಹಣ ಮತ್ತು ಸಾಲ

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಹಣ ಎಂದರೇನು?

ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಸಾಲ ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ವಸ್ತುವೇ ಹಣ.

2 ಸಾಟಿ (ವಸ್ತು) ವಿನಿಮಯ ಪದ್ಧತಿ ಎಂದರೇನು?

ಸರಕುಗಳಿಗೆ ಸರಕುಗಳನ್ನು ವಿನಿಮಯ ಮಾಡಿಕೊಳ್ಳುವ ಪದ್ಧತಿ.

3 ಬ್ಯಾಂಕು ಹಣಕ್ಕೆ ಉದಾಹರಣೆ ಕೊಡಿ.

ಚೆಕ್ಕುಗಳು ಮತ್ತು ಡ್ರಾಫ್ಟ್ ಗಳು

4 ಭಾರತೀಯ ರಿಜರ್ವ್ ಬ್ಯಾಂಕು ಯಾವಾಗ ಸ್ಥಾಪನೆಯಾಯಿತು?

ಏಪ್ರಿಲ್ 1, 1935

5 'ಬ್ಯಾಂಕುಗಳ ಬ್ಯಾಂಕು' **ಅಥವಾ** 'ಬ್ಯಾಂಕುಗಳ ತಾಯಿ' ಎಂದು ಯಾವ ಬ್ಯಾಂಕನ್ನು ಕರೆಯುತ್ತಾರೆ?

ಭಾರತೀಯ ರಿಜರ್ವ್ ಬ್ಯಾಂಕು (RBI)

6 ಹಣಕಾಸು ನೀತಿ ಎಂದರೇನು?

ಹಣದ ಪೂರೈಕೆ, ಸಾಲ ಮತ್ತು ಬಡ್ಡಿ ದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳೇ ಹಣಕಾಸು ನೀತಿ.

7 ಭಾರತದಲ್ಲಿ ಹಣವನ್ನು ಏನೆಂದು ಕರೆಯುವರು?

ರೂಪಾಯಿ

**II ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಹಣದ ಕಾರ್ಯಗಳೇನು?

* ವಿನಿಮಯ ಮಾಧ್ಯಮ
* ಮೌಲ್ಯ ನಿರ್ಣಯ
* ಮೌಲ್ಯ ಸಂಗ್ರಹ
* ಮೌಲ್ಯ ವರ್ಗಾವಣೆ
* ವಿಳಂಬಿತ ಸಂದಾಯದ ಪ್ರಮಾಣ

2 ಭಾರತೀಯ ರಿಜರ್ವ್ ಬ್ಯಾಂಕಿನ (RBIನ)ಕಾರ್ಯಗಳೇನು?

* ನೋಟು ಚಲಾವಣೆಯ ಏಕಸ್ವಾಮ್ಯ
* ಸರ್ಕಾರದ ಬ್ಯಾಂಕು
* ಬ್ಯಾಂಕುಗಳ ಬ್ಯಾಂಕು
* ರಾಷ್ಟ್ರೀಯ ಸಂದಾಯ ಕೇಂದ್ರ
* ಸಾಲ ನಿಯಂತ್ರಕ
* ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ
* ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ.

3 ಭಾರತೀಯ ರಿಜರ್ವ್ ಬ್ಯಾಂಕ್ (RBI) ಬಳಸುವ ಸಾಲ ನಿಯಂತ್ರಕ ( ಪತ್ತು ನಿಯಂತ್ರಕ) ಕ್ರಮಗಳನ್ನು ವಿವರಿಸಿ. **ಅಥವಾ** ಭಾರತೀಯ ರಿಜರ್ವ್ ಬ್ಯಾಂಕ್ ನ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಸಾಲ ನಿಯಂತ್ರಕ ಕ್ರಮಗಳನ್ನು ತಿಳಿಸಿ.

* ಬ್ಯಾಂಕು ದರ
* ಮೀಸಲು ಅನುಪಾತದ ಅವಶ್ಯಕತೆಯನ್ನು ಏರಿಳಿತಗೊಳಿಸುವುದು
* ಮಾರ್ಜಿನ್ ಪ್ರಮಾಣದ ಬದಲಾವಣೆ
* ಸಾಲದ ಪಡಿತರ
* ಮುಕ್ತ ಮಾರುಕಟ್ಟೆ ಕಾರ್ಯಾಚರಣೆ
* ನೈತಿಕ ಒತ್ತಡ
* ನೇರ ಕ್ರಮ

## ಅಧ್ಯಾಯ-4

## ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಸಾರ್ವಜನಿಕ ಹಣಕಾಸು ಎಂದರೇನು?

ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತ ಅಧ್ಯಯನ.

2 ಕೋಶೀಯ ನೀತಿ **ಅಥವಾ** ವಿತ್ತೀಯ ನೀತಿ ಎಂದರೇನು?

ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಕ್ಕೆ ಸಂಬಂಧಿಸಿದಂತೆ ಅನುಸರಿಸುವ ನೀತಿಯೇ ಕೋಶೀಯ ನೀತಿ.

3 ಆಯವ್ಯಯ **ಅಥವಾ** ಮುಂಗಡ ಪತ್ರ ಎಂದರೇನು?

ಸರ್ಕಾರದ ಒಂದು ವರ್ಷದ ವರಮಾನ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯೇ ಆಯ-ವ್ಯಯ

4 ಭಾರತದ ಹಣಕಾಸು ವರ್ಷ ಯಾವುದು?

ಏಪ್ರಿಲ್ 1ರಿಂದ ಮುಂದಿನ ವರ್ಷದ ಮಾರ್ಚ್ 31.

5 ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಯಾರು ಮಂಡಿಸುತ್ತಾರೆ?

ಕೇಂದ್ರ ಹಣಕಾಸು ಸಚಿವರು.

6 ತೆರಿಗೆ ವರಮಾನ ಎಂದರೇನು?

ಜನರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆ.

7 ಪ್ರತ್ಯಕ್ಷ ತೆರಿಗೆ ಎಂದರೇನು?

ಸರ್ಕಾರವು ಯಾರ ಮೇಲೆ ತೆರಿಗೆ ವಿಧಿಸುತ್ತದೆಯೋ ಅವರೇ ಆ ತೆರಿಗೆಯನ್ನು ಪಾವತಿಸಿದರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುವರು.

8 ಪರೋಕ್ಷ ತೆರಿಗೆ ಎಂದರೇನು?

ಸರ್ಕಾರವು ವಿಧಿಸುವ ತೆರಿಗೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ, ಅದನ್ನು ಪರೋಕ್ಷ ತೆರಿಗೆ ಎನ್ನುವರು.

9 ಕೊರತೆ ಹಣಕಾಸು **ಅಥವಾ** ಕೊರತೆ ಎಂದರೇನು?

ಭಾರತೀಯ ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು ಮತ್ತು ಹೊಸ ಹಣ ಸೃಷ್ಟಿಸುವುದೇ ಕೊರತೆ.

10 ವಿತ್ತೀಯ ಕೊರತೆ ಎಂದರೇನು? **ಅಥವಾ** ವಿತ್ತೀಯ ಕೊರತೆಯ ಸೂತ್ರ ಬರೆಯಿರಿ.

ವಿತ್ತೀಯ ಕೊರತೆ= (ಕಂದಾಯ ವರಮಾನ+ಸಾಲೇತರ ಬಂಡವಾಳ ವರಮಾನ) - ಒಟ್ಟು ವೆಚ್ಚ.

11 GST (ಸರಕು ಮತ್ತು ಸೇವಾ ತೆರಿಗೆ) ಯಾವಾಗ ಜಾರಿಗೆ ಬಂದಿತು?

ಜುಲೈ 1, 2017.

ಸಾಹಿತಿ ಸರ್ವೋತ್ತಮ ಮೈಸೂರು ಜಿಲ್ಲೆ

**II ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಸಾರ್ವಜನಿಕ ಹಣಕಾಸಿನ ಮಹತ್ವವನ್ನು ತಿಳಿಸಿ.

* ಆರ್ಥಿಕ ಅಭಿವೃದ್ಧಿಗಾಗಿ.
* ಆರ್ಥಿಕ ಸ್ಥಿರತೆ
* ಸಂಪನ್ಮೂಲಗಳ ಸದ್ಬಳಕೆ
* ಸಂಪತ್ತಿನ ಸಮಾನ ಹಂಚಿಕೆ
* ಬೆಲೆ ಏರಿಳಿತಗಳ ನಿಯಂತ್ರಣ
* ಬಡತನ ಮತ್ತು ನಿರುದ್ಯೋಗ ನಿವಾರಣೆ.

2 ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳೇನು? ಅಥವಾ ಸಾರ್ವಜನಿಕ ವೆಚ್ಚದ ಏರಿಕೆಗೆ ಕಾರಣಗಳೇನು?

* ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು.
* ವಾಣಿಜ್ಯ ಮತ್ತು ಉದ್ಯಮದ ಪ್ರೋತ್ಸಾಹ
* ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ
* ಸಂಪೂರ್ಣ ಉದ್ಯೋಗ
* ಸಾಮಾಜಿಕ ಕಲ್ಯಾಣ
* ಮೂಲ ಸೌಕರ್ಯ ನಿರ್ಮಿಸುವುದು
* ಪ್ರಾದೇಶಿಕ ಬೆಳವಣಿಗೆ.

3 ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನದ (ಆದಾಯದ) ಮೂಲಗಳಾವುವು?

* RBI ಗಳಿಸುವ ಲಾಭ
* ಭಾರತೀಯ ರೈಲ್ವೆ ಗಳಿಸುವ ಲಾಭ
* ಅಂಚೆ ಮತ್ತು ದೂರವಾಣಿಯಿಂದ ಬರುವ ವರಮಾನ
* ಸಾರ್ವಜನಿಕ ಉದ್ಯಮಗಳು ಗಳಿಸುವ ಲಾಭ
* ಟಂಕಸಾಲೆಯಿಂದ ಬರುವ ವರಮಾನ
* ವಿವಿಧ ಶುಲ್ಕ, ದಂಡಗಳು.

STF ತಿ.ನರಸೀಪುರ ತಾ. ಮೈಸೂರು ಜಿಲ್ಲೆ

# ವ್ಯವಹಾರ ಅಧ್ಯಯನ

## ಅಧ್ಯಾಯ-1

## ಬ್ಯಾಂಕಿನ ವ್ಯವಹಾರಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ರಾಷ್ಟೀಯ ಉಳಿತಾಯ ಪತ್ರಗಳನ್ನು **ಅಂಚೆ** ಇಲಾಖೆಯು ನೀಡುತ್ತದೆ.

2 ಸಾಮಾನ್ಯವಾಗಿ ವೇತನ ಪಡೆಯುವವರು ಹಾಗೂ ವಿದ್ಯಾರ್ಥಿಗಳು ಈ ಖಾತೆಯನ್ನು ತೆರೆಯುತ್ತಾರೆ. **ಉಳಿತಾಯ ಖಾತೆ**

3 ಸಾಮಾನ್ಯವಾಗಿ ಉದ್ಯಮಿಗಳು ಮತ್ತು ವ್ಯಾಪಾರಿಗಳು ಈ ಖಾತೆ ತೆರೆಯುತ್ತಾರೆ. **ಚಾಲ್ತಿ ಖಾತೆ**

4 ಈ ಖಾತೆಯಲ್ಲಿ ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು ಮತ್ತು ಹಿಂಪಡೆಯಬಹುದು. **ಚಾಲ್ತಿ ಖಾತೆ**

5 ಭವಿಷ್ಯದಲ್ಲಿ ಯಾವುದಾದರೂ ಒಂದು ನಿರ್ಧಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆರೆಯಲ್ಪಡುವ ಖಾತೆ. **ಆವರ್ತ ಠೇವಣಿ ಖಾತೆ**

6 ರಾಮು ಭವಿಷ್ಯದಲ್ಲಿ ತನ್ನ ಮಗಳ ಮದುವೆಗಾಗಿ ಹಣವನ್ನು ಕೂಡಿಡಲು ಬಯಸುತ್ತಾನೆ. ಅವನಿಗೆ ನೀವು ಸಲಹೆ ನೀಡುವ ಬ್ಯಾಂಕು ಖಾತೆಯ ಪ್ರಕಾರ.- **ಆವರ್ತ ಠೇವಣಿ ಖಾತೆ.**

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಬ್ಯಾಂಕು ಎಂದರೇನು

ಹಣವನ್ನು ತಮ್ಮಲ್ಲಿ ಇಡುಗಂಟಾಗಿ ಇಟ್ಟುಕೊಂಡದನ್ನು ಸಾಲ ಕೊಡುವ ಸಂಸ್ಥೆ.

2. '**ಬ್ಯಾಂಕುಗಳ ಬ್ಯಾಂಕು**' ಅಥವಾ '**ಬ್ಯಾಂಕುಗಳ ತಾಯಿ**' ಎಂದು ಯಾವ ಬ್ಯಾಂಕನ್ನು ಕರೆಯುತ್ತಾರೆ?

ಭಾರತೀಯ ರಿಸರ್ವ್ ಬ್ಯಾಂಕು.(RBI)

**III ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣ ಲಕ್ಷಣಗಳನ್ನು ಪಟ್ಟಿಮಾಡಿರಿ.

* ಹಣದ ವಹಿವಾಟು
* ಠೇವಣಿ ಅಂಗೀಕಾರ
* ಸಾಲ ಕೊಡುವುದು
* ಹಣದ ಪಾವತಿ
* ಹಣದ ವಸೂಲು
* ಲಾಭ ಮತ್ತು ಸೇವಾ ಭಾವನೆ
* ಹೆಸರಿನ ಗುರುತು

2. ಬ್ಯಾಂಕು ಖಾತೆ ತೆಗೆಯುವುದರಿಂದಾಗುವ ಅನುಕೂಲಗಳೇನು?( ಲಾಭಗಳೇನು?) **ಅಥವಾ** ಬ್ಯಾಂಕು ನಿರ್ವಹಿಸುವ ಕಾರ್ಯಗಳಾವುವು? ಬ್ಯಾಂಕ್ ಸಲ್ಲಿಸುವ ಸೇವೆಗಳಾವುವು?

* ಹಣದ ಭದ್ರತೆ ಕಾಪಾಡುತ್ತದೆ.
* ಹಣದ ವಸೂಲಿ
* ಹಣದ ಪಾವತಿ.
* ಸಾಲ ಪಡೆಯಬಹುದು.
* ಭದ್ರತಾ ಕಪಾಟು ಸೌಲಭ್ಯ. .
* ಠೇವಣಿ ಅಂಗೀಕಾರ.
* ವ್ಯವಹಾರಗಳು ಸುಗಮವಾಗಿ ನಡೆಯಲು ಸಹಾಯಕ

3. ಬ್ಯಾಂಕು ಖಾತೆ ತೆಗೆಯುವಾಗ ಅನುಸರಿಸಬಹುದಾದ ವಿಧಾನಗಳನ್ನು ಪಟ್ಟಿ ಮಾಡಿರಿ.

* ಯಾವ ವಿಧದ ಬ್ಯಾಂಕು ಖಾತೆ ತೆಗೆಯಬೇಕೆಂದು ನಿರ್ದರಿಸುವುದು.
* ಬ್ಯಾಂಕು ಅಧಿಕಾರಿಯ ಭೇಟಿ.
* ಖಾತೆ ತೆರೆಯುವ ನಮೂನೆ ತುಂಬುವುದು.
* ಪರಿಚಿತರ ಉಲ್ಲೇಖನ ಕೊಡುವುದು.

* ಖಾತೆ ತೆರೆಯುವ ನಮೂನೆಯನ್ನು ಬ್ಯಾಂಕಿಗೆ ನೀಡುವುದು.
* ಅಧಿಕಾರಿಯ ಒಪ್ಪಿಗೆ.
* ಪ್ರಾರಂಭಿಕ ಠೇವಣಿ.

4.ಅಂಚೆ ಕಛೇರಿಗಳು ಒದಗಿಸುವ ಸೇವೆಗಳಾವುವು? ಅಥವಾ 'ಅಂಚೆ ಕಚೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನು ಸಹ ಕೈಗೊಳ್ಳುತ್ತಿವೆ.' ಸಮರ್ಥಿಸಿ.

* ಅಂಚೆ ವಿಮೆ ಸೌಲಭ್ಯ
* ನಿವೃತ್ತಿ ವೇತನ ಸೌಲಭ್ಯ
* ಠೇವಣಿ ಅಂಗೀಕಾರ
* ಹಣದ ಪಾವತಿ
* ಅಂಚೆ ಉಳಿತಾಯ ಖಾತೆಗಳು
* ಹಣದ ವರ್ಗಾವಣೆ ಮುಂತಾದ ಹಣಕಾಸಿನ ವ್ಯವಹಾರ ಕೈಗೊಂಡಿವೆ.

5 ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಯ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

| **ಉಳಿತಾಯ ಖಾತೆ** | **ಚಾಲ್ತಿ ಖಾತೆ** |
| --- | --- |
| * ವಿದ್ಯಾರ್ಥಿಗಳು, ವೇತನ ಪಡೆಯುವವರು ತೆರೆಯುತ್ತಾರೆ | * ವ್ಯಾಪಾರಿಗಳು ತೆರೆಯುತ್ತಾರೆ |
| * ಠೇವಣಿಗೆ ಬಡ್ಡಿ ಸಿಗುತ್ತದೆ | * ಬಡ್ಡಿ ನೀಡುವುದಿಲ್ಲ |
| * ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಲು ಆಗುವುದಿಲ್ಲ. | * ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದು |

6 ಆವರ್ತ ಠೇವಣಿ ಖಾತೆ ಮತ್ತು ನಿಶ್ಚಿತ ಠೇವಣಿ ಖಾತೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

| **ಆವರ್ತ ಠೇವಣಿ ಖಾತೆ** | **ನಿಶ್ಚಿತ ಠೇವಣಿ ಖಾತೆ** |
| --- | --- |
| * ಭವಿಷ್ಯದಲ್ಲಿ ಒಂದು ನಿರ್ಧಿಷ್ಟ ದಿನ ಪಡೆಯಲಾಗುತ್ತದೆ | * ಒಂದು ನಿಗಧಿತ ಅವಧಿಗೆ ಇಡಲಾಗುತ್ತದೆ |
| * ತಿಂಗಳು ತಿಂಗಳು ಠೇವಣಿ ಜಮಾ ಮಾಡುತ್ತಾರೆ | * ಒಂದೇ ಬಾರಿಗೆ ಠೇವಣಿ ಇಡಲಾಗುತ್ತದೆ |
| * ಅವಧಿ ಮುಗಿದ ನಂತರ ಠೇವಣಿ ಹಣವನ್ನು ಬಡ್ಡಿ ಸಮೇತ ಪಡೆಯಬಹುದು | * ಬಡ್ಡಿ ದರ ಅವಧಿಗನುಗುಣವಾಗಿ ಹೆಚ್ಚುತ್ತದೆ. |

<u>**ಅಧ್ಯಾಯ-2**</u>

# ಉದ್ಯಮಗಾರಿಕೆ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 'ಭಾರತದ ಬಿಳಿ ಕ್ರಾಂತಿಯ ಪಿತಾಮಹಾ"- <u>**ವರ್ಗಿಸ್ ಕುರಿಯನ್**</u>

2. ಭಾರತದ ಅತಿ ದೊಡ್ಡ ಜೀವ ವಿಜ್ಞಾನ ತಂತ್ರಜ್ಞಾನ ಸಂಸ್ಥೆ.- <u>**ಬಯೋಕಾನ್ ನಿಗಮ**</u>

3. ಭಾರತದ ದೂರದರ್ಶನ ಕ್ಷೇತ್ರದಲ್ಲಿ 'ಅಧಿಪತ್ಯ ಸಾಧಿಸಿದ ರಾಣಿ' ಎಂದು ಹೆಸರು ಮಾಡಿ 2001ರಲ್ಲಿ 'ವರ್ಷದ ಶ್ರೇಷ್ಠ ಉದ್ಯಮಿ' ಪ್ರಶಸ್ತಿ ಪಡೆದ ಉದ್ಯಮಿ.- <u>**ಏಕ್ತಾ ಕಪೂರ್**</u>

4. NASDAQ ನಲ್ಲಿ ನೋಂದಾಯಿತಗೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ.-**ಇನ್ಫೋಸಿಸ್**

5. ಭಾರತದ ಅತಿ ದೊಡ್ಡ ಆಂತರಿಕ ವಾಯುಮಾರ್ಗ- <u>**ಜೆಟ್ ವಾಯುಮಾರ್ಗ**</u>

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಉದ್ಯಮಿ ಎಂದರೇನು?

ಒಂದು ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವವನೇ ಉದ್ಯಮಿ.

2. ವರ್ಗಿಸ್ ಕುರಿಯನ್ ರವರನ್ನು 'ಭಾರತದ ಬಿಳಿ ಕ್ರಾಂತಿಯ ಪಿತಾಮಹಾ' ಎಂದು ಕರೆಯಲು ಕಾರಣವೇನು?

ಹೈನುಗಾರಿಕೆ ಕ್ಷೇತ್ರದಲ್ಲಿ (ಹಾಲಿನ ಉತ್ಪಾದನೆಯಲ್ಲಿ) ಅಪಾರ ಪ್ರಗತಿ ಸಾಧಿಸಿದ್ದರಿಂದ.

**III ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1 ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ಪಟ್ಟಿಮಾಡಿರಿ.

* ಸೃಜನಾತ್ಮಕ
* ಕ್ರಿಯಾತ್ಮಕ
* ನಾಯಕತ್ವ
* ಗುರಿ ಮುಟ್ಟುವಿಕೆ
* ಸಮಸ್ಯೆ ಪರಿಹಾರ
* ತಂಡ ಕಟ್ಟುವುದು
* ಆತ್ಮ ವಿಶ್ವಾಸ

2. ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ. **ಅಥವಾ** 'ಭಾರತದ ಆರ್ಥಿಕ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ಬಹುಮುಖ್ಯವಾಗಿದೆ.' ಸಮರ್ಥಿಸಿ.

* ಜನರ ಉಳಿತಾಯ ಸಂಗ್ರಹ
* ಉದ್ಯೋಗಗಳನ್ನು ನೀಡುತ್ತಾರೆ.
* ಜನರ ತಲಾ ವರಮಾನ ಹೆಚ್ಚಿಸುತ್ತಾರೆ.
* ದೇಶದ ರಫ್ತು ವ್ಯಾಪಾರದ ಹೆಚ್ಚಳ
* ದೇಶದ ನಿವ್ವಳ ದೇಶಿಯ ಉತ್ಪನ್ನ ಹೆಚ್ಚಳ
* ಜನರ ಜೀವನ ಮಟ್ಟ ಉತ್ತಮಗೊಳ್ಳಲು ಸಹಾಯ.
* ಕೈಗಾರಿಕಾ ಅಭಿವೃದ್ಧಿ.
* ವಸ್ತುಗಳ ಬೆಲೆ ನಿಯಂತ್ರಣ.

3. ಉದ್ಯಮಿಯು ನಿರ್ವಹಿಸುವ ಕಾರ್ಯಗಳಾವುವು?

* ಉತ್ಪಾದನಾಂಗಗಳ ಸಂಯೋಜನೆ.
* ಹೊಸ ವಿಧಾನಗಳನ್ನು ರೂಢಿಗೆ ತರುತ್ತಾರೆ.
* ಹಣಕಾಸಿನ ಆಯವ್ಯಯ ನಿಭಾಯಿಸುವಿಕೆ.
* ಕಷ್ಟ ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾರೆ.
* ವಸ್ತು, ತಾಂತ್ರಿಕತೆ, ಮಾರುಕಟ್ಟೆ ಮತ್ತು ಉದ್ಯೋಗಗಳ ಬಗ್ಗೆ ನಿರ್ಧಾರ.
* ಎಲ್ಲಾ ಅಂಶಗಳ ಸಂಯೋಜನೆ.

4 ಸ್ವಯಂ ಉದ್ಯೋಗ ಪ್ರಾರಂಭಿಸಲು ಹಣಕಾಸು ಪೂರೈಸುವ ಪ್ರಮುಖ ಹಣಕಾಸು ಸಂಸ್ಥೆಗಳಾವುವು?

* ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
* ಭಾರತದ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
* ನಬಾರ್ಡ್
* ರಾಜ್ಯ ಹಣಕಾಸು ನಿಗಮ
* ಎಕ್ಸಿಂ ಬ್ಯಾಂಕ್
* ಭಾರತೀಯ ಜೀವ ವಿಮಾ ನಿಗಮ

5 ಒಬ್ಬ ವ್ಯಕ್ತಿಯು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಸಹಾಯಕವಾಗುವ ವ್ಯವಹಾರ ಸಂಸ್ಥೆಗಳಾವುವು?

* ಜಾಹಿರಾತು ಸಂಸ್ಥೆಗಳು
* ಮಾರುಕಟ್ಟೆ ಸಲಹಾ ಸಂಸ್ಥೆ
* ಕೈಗಾರಿಕಾ ಸಲಹಾ ಸಂಸ್ಥೆ
* ಅಂತರ್ಜಾಲ ಅಂಗಡಿಗಳು
* ಬ್ಯೂಟಿ ಪಾರ್ಲರ್
* ಛಾಯಾಪ್ರತಿ ತೆಗೆಯುವ ಕೇಂದ್ರ

6 ಉದ್ದಿಮೆಗಳನ್ನು ಹುಟ್ಟುಹಾಕಲು ಮತ್ತು ಸ್ಥಾಪಿಸಲು ಸಹಾಯಕವಾಗುವ ಉದ್ಯಮ ಪ್ರವರ್ತಕ ಸಂಸ್ಥೆಗಳಾವುವು?

* ಜಿಲ್ಲಾ ಕೈಗಾರಿಕಾ ಕೇಂದ್ರಗಳು
* ಸಣ್ಣ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ
* ಕೈಗಾರಿಕಾ ಪ್ರದೇಶಗಳು
* ತಾಂತ್ರಿಕ ಸಲಹಾ ಸಂಸ್ಥೆಗಳು
* ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
* ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ
* ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ

ಡಾ|| ಶಿ.ನರಸಿಂಹಪುರ ತಾ. ಮೈಸೂರು ಜಿಲ್ಲೆ

## ಭಾರತದ ಪ್ರಮುಖ ಉದ್ಯಮಿಗಳು ಮತ್ತು ಅವರ ಉದ್ಯಮಗಳು:

| ಕ್ರ.ಸಂ | ಉದ್ಯಮಿಯ ಹೆಸರು | ಉದ್ಯಮ |
|---|---|---|
| 1 | ಡಾ. ಪ್ರತಾಪ ರೆಡ್ಡಿ | ‘**ಅಪೋಲೋ**’ ವೈದ್ಯಶಾಲೆ |
| 2 | ನರೇಶ್ ಗೋಯಲ್ | **ಜೆಟ್** ವಾಯುಮಾರ್ಗ |
| 3 | ನಾರಾಯಣ ಮೂರ್ತಿ | ‘**ಇನ್ಫೋಸಿಸ್**’ ತಂತ್ರಜ್ಞಾನ ಸಂಸ್ಥೆ |
| 4 | ವರ್ಗಿಸ್ ಕುರಿಯನ್ | ಅಮುಲ್ ಸಂಸ್ಥೆ |
| 5 | ಧೀರುಬಾಯಿ ಅಂಬಾನಿ | ‘**ರಿಲಯನ್ಸ್**’ ಸಂಸ್ಥೆ |
| 6 | ಅಜೀಮ್ ಪ್ರೇಮ್ ಜಿ | ‘**ವಿಪ್ರೋ**’ ತಂತ್ರಜ್ಞಾನ ಸಂಸ್ಥೆ |
| 7 | ಏಕ್ತಾ ಕಪೂರ್ | ಬಾಲಾಜಿ ದೂರದರ್ಶನ ಸಂಸ್ಥೆ |
| 8 | ಕಿರಣ್ ಮುಜಮ್ ದಾರ್ ಷಾ | ‘**ಬಯೋಕಾನ್**’ ನಿಗಮ |

## ಅಧ್ಯಾಯ-3

## ವ್ಯವಹಾರದಲ್ಲಿ ಜಾಗತೀಕರಣ

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ವಿಶ್ವ ವ್ಯಾಪಾರ ಸಂಘಟನೆ **ಜನವರಿ 1, 1995** ರಂದು ಅಸ್ತಿತ್ವಕ್ಕೆ ಬಂದಿತು.

2 ವಿಶ್ವ ವ್ಯಾಪಾರಯ ಕೇಂದ್ರ ಕಚೇರಿ ಸ್ವಿಟ್ಜರಲ್ಯಾಂಡಿನ **ಜಿನೇವಾ** ದಲ್ಲಿದೆ.

3 ಜಾಗತೀಕರಣ ಮುಕ್ತ ವ್ಯಾಪಾರ ವಲಯ ಸೃಷ್ಟಿಸುವುದು ಇದನ್ನು ನಿರ್ಮೂಲನ ಮಾಡುವುದರ ಮೂಲಕ.- **ಆಮದು ಮತ್ತು ರಫ್ತು ಸುಂಕ ನಿರ್ಮೂಲನ.**

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಜಾಗತೀಕರಣದ ಅರ್ಥ ತಿಳಿಸಿ.

ಸರಕು ಮತ್ತು ಸೇವೆಗಳು, ಬಂಡವಾಳ, ತಾಂತ್ರಿಕತೆ ಮತ್ತು ಮಾಹಿತಿಯ ಹೆಚ್ಚುತ್ತಿರುವ ಗಡಿಯಾಚೆಗಿನ ಚಲನೆ.

2 ಜಾಗತೀಕರಣದ ಮುಖ್ಯ ಲಕ್ಷಣಗಳೇನು? ಅಥವಾ ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳನ್ನು ತಿಳಿಸಿ.

* ಅಂತರರಾಷ್ಟ್ರೀಯ ವ್ಯಾಪಾರ ಪ್ರೋತ್ಸಾಹ
* ಅಂತರರಾಷ್ಟ್ರೀಯ ಬಂಡವಾಳ ವೃದ್ಧಿ.
* ಆಮದು ಮತ್ತು ರಫ್ತು ಸುಂಕ ನಿರ್ಮೂಲನ
* ಸಾಂಸ್ಕೃತಿಕ ವಿನಿಮಯ
* ಕಡಿಮೆ ಸಾರಿಗೆ ವೆಚ್ಚ

3 ಜಾಗತೀಕರಣ ಯಾವುದಾದರೂ 4 ಅನುಕೂಲಗಳನ್ನು ತಿಳಿಸಿ. **ಅಥವಾ** ಜಾಗತೀಕರಣದಿಂದಾಗುವ ಸಕಾರಾತ್ಮಕ ಪರಿಣಾಮಗಳೇನು?

* ಆರ್ಥಿಕ ಬೆಳವಣಿಗೆ
* ಜನರ ಜೀವನ ಮಟ್ಟ ಹೆಚ್ಚಿಸಲು ಸಹಾಯ
* ಜನರ ವರಮಾನ ಹೆಚ್ಚಳ
* ವಸ್ತುಗಳ ಗುಣಮಟ್ಟ ಉತ್ತಮ
* ದೇಶದ ರಾಷ್ಟ್ರೀಯ ಉತ್ಪನ್ನ ಹೆಚ್ಚಳ
* ರಾಜಕೀಯ ಸಾಮರಸ್ಯ

4 ಜಾಗತೀಕರಣ ಯಾವುದಾದರೂ 4 ಅನಾನುಕೂಲಗಳನ್ನು ತಿಳಿಸಿ. **ಅಥವಾ** ಜಾಗತೀಕರಣದಿಂದಾಗುವ ನಕಾರಾತ್ಮಕ ಪರಿಣಾಮಗಳೇನು?

* ಗುಲಾಮಿತನ ಮತ್ತು ಬಾಲ ಕಾರ್ಮಿಕ ಪದ್ಧತಿ ಉಂಟಾಗುತ್ತದೆ.
* ಭಯೋತ್ಪಾದನೆಗೆ ಸಹಾಯ
* ಸಾಂಪ್ರದಾಯಕ ಆಹಾರ ಸೇವನೆ ನಿರ್ಮೂಲನ
* ಪರಿಸರ ಮಾಲಿನ್ಯ
* ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆ ಇಲ್ಲವಾಗುತ್ತದೆ.

5 ವಿಶ್ವ ವ್ಯಾಪಾರ ಸಂಘಟನೆಯ ಯಾವುದಾದರೂ 4 ಉದ್ದೇಶಗಳನ್ನು (ಗುರಿಗಳನ್ನು) ಪಟ್ಟಿಮಾಡಿ.

* ಮುಕ್ತ ವ್ಯಾಪಾರ
* ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳ ಜಾರಿ
* ವ್ಯಾಪಾರಿ ಭಿನ್ನಾಭಿಪ್ರಾಯ ನಿವಾರಣೆ.
* ತೆರಿಗೆ ಕಡಿಮೆ ಮಾಡುವುದು.

6 ಜಾಗತೀಕರಣದಿಂದ ಸಾಂಪ್ರದಾಯಕ ಆಹಾರ ಸೇವನೆಗಳು ನಿರ್ಮೂಲನ ಹೊಂದುತ್ತವೆ. ಹೇಗೆ?

ಶೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡಿ ಅವುಗಳ ಸೇವನೆ ಜಾಸ್ತಿಯಾಗಿ ಸಾಂಪ್ರದಾಯಕ ಆಹಾರ ಸೇವನೆಗಳು ನಿರ್ಮೂಲನ ಹೋದುತ್ತವೆ.

7 ಜಾಗತೀಕರಣದಿಂದ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದೇ ಹೋಗುತ್ತದೆ. ಹೇಗೆ?

ಅಭಿವೃದ್ಧಿ ಹೊಂದಿದ ದೇಶಗಳು ಹೆಚ್ಚು ವಸ್ತುಗಳನ್ನು ತಂದು ಕಡಿಮೆ ಬೆಲೆಗೆ ಮಾರುವುದರಿಂದ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದೇ ಹೋಗುತ್ತದೆ.

8 ಜಾಗತೀಕರಣದಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ. ಹೇಗೆ?

ಜಾಗತೀಕರಣದಿಂದ ಪಟ್ಟಣಗಳು ಕಸದ ತೊಟ್ಟಿಗಳಾಗುತ್ತವೆ ಮತ್ತು ಕೈಗಾರಿಕೆಗಳಿಂದ ಮಾಲಿನ್ಯ ಉಂಟಾಗಿ ಪರಿಸರ ಮಾಲಿನ್ಯವಾಗುತ್ತದೆ.

## ಅಧ್ಯಾಯ-4

## ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1 ಗ್ರಾಹಕ ಎಂದರೆ ಯಾರು?

ಸರಕು-ಸೇವೆಗಳನ್ನು ಕೊಳ್ಳುವವರೇ ಗ್ರಾಹಕರು.

2 ಗ್ರಾಹಕ ರಕ್ಷಣೆ ಎಂದರೇನು?

ಗ್ರಾಹಕರನ್ನು ಉತ್ಪಾದಕರು ಹಾಗೂ ವ್ಯಾಪಾರಿಗಳಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳೇ ಗ್ರಾಹಕ ರಕ್ಷಣೆ.

3 ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂದಿತು?

1986

4 ವಿಶ್ವ ಗ್ರಾಹಕ ದಿನವನ್ನು ಯಾವಾಗ ಆಚರಿಸುತ್ತಾರೆ?

ಮಾರ್ಚ್ 15.

5 ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ದೂರನ್ನು ಯಾರಿಗೆ ಸಲ್ಲಿಸಬೇಕು?

ಜಿಲ್ಲಾ ವೇದಿಕೆ.

6 ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದರೆ ದೂರನ್ನು ಯಾರಿಗೆ ಸಲ್ಲಿಸಬೇಕು?

ರಾಜ್ಯ ಆಯೋಗ

7 ಪರಿಹಾರ ಮೊತ್ತವು ಒಂದ ಕೋಟಿ ರೂಪಾಯಿಗಳನ್ನು ಮೀರಿದ್ದರೆ ದೂರನ್ನು ಯಾರಿಗೆ ಸಲ್ಲಿಸಬೇಕು?

ರಾಷ್ಟ್ರೀಯ ಆಯೋಗ

8 'ಮಾರುಕಟ್ಟೆಯ ರಾಜ' ಯಾರು?

ಗ್ರಾಹಕ (ಬಳಕೆದಾರ)

**II ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1 ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ಧೇಶಗಳೇನು?

* ವಸ್ತುಗಳ ಗುಣಮಟ್ಟ ಮತ್ತು ಸುರಕ್ಷತೆಗೆ ಆದ್ಯತೆ ನೀಡುವುದು. * ಅನುಚಿತ ವ್ಯವಹಾರ ತಡೆಯುವುದು.
* ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟ ನಿಷೇಧ * ಗ್ರಾಹಕ ಶಿಕ್ಷಣದ ಮೂಲಕ ಜಾಗೃತಿ.

2 ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಯಾವುದಾದರೂ 4 ಮಾಹಿತಿಗಳನ್ನು ತಿಳಿಸಿ.

* ದೂರುಗಳು ಬೆರಳಚ್ಚು ಅಥವಾ ಕೈಬರಹದಲ್ಲಿರಬೇಕು * ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ನಮೂದಿಸಬೇಕು.
* ದೂರು ಕೊಡಬೇಕಾದ ವ್ಯಾಪಾರಿಯ ಬಗ್ಗೆ ಮಾಹಿತಿ ನೀಡಬೇಕು. * ಸಂಬಂಧಪಟ್ಟ ಬಿಲ್ಲನ್ನು ಲಗತ್ತಿಸಬೇಕು.

3 ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?

* ಅಧಿಕ ಬೆಲೆ * ತೂಕ ಮತ್ತು ಅಳತೆಯಲ್ಲಿ ಮೋಸ
* ಕಲಬೆರಕೆ * ವಸ್ತುಗಳ ಕಳಪೆ ಗುಣಮಟ್ಟ
* ಕೃತಕ ಅಭಾವ

4 ಗ್ರಾಹಕರ ಯಾವುದಾದರೂ ನಾಲ್ಕು ಗ್ರಾಹಕ ಹಕ್ಕುಗಳನ್ನು ಹೆಸರಿಸಿ.

* ಮಾಹಿತಿ ಪಡೆಯುವ ಹಕ್ಕು * ಗ್ರಾಹಕ ಶಿಕ್ಷಣದ ಹಕ್ಕು
* ವಂಚನೆ ಮತ್ತು ಮೋಸದ ವಿರುದ್ಧದ ಹಕ್ಕು * ವಸ್ತುಗಳ ಆಯ್ಕೆಯ ಹಕ್ಕು.

STF ತಿ.ನರಸೀಪುರ ತಾ. ಮೈಸೂರು ಜಿಲ್ಲೆ

# ಭಾರತ

1. 23½° ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ)
2. 82½° ಪೂರ್ವ ರೇಖಾಂಶ
3. ಇಂದಿರಾ ಪಾಯಿಂಟ್
4. ಲಕ್ಷದ್ವೀಪ
5. ದೆಹಲಿ
6. ಅಂಡಮಾನ್ ಮತ್ತು ನಿಕೋಬಾರ್
7. ಮೌಂಟ್ ಎವರೆಸ್ಟ್
8. K2 (ಮೌಂಟ್ ಗಾಡ್ವಿನ್ ಆಸ್ಟಿನ್)
9. ಪಶ್ಚಿಮ ಘಟ್ಟಗಳು
10. ಅರಾವಳಿ ಬೆಟ್ಟಗಳು (ಗುರು ಶಿಖರ) (ಮೌಂಟ್ ಅಬು)
11. ಅಣ್ಣೈಮುಡಿ
12. ಮಲಬಾರ್ ತೀರ
13. ಕೊಂಕಣ ತೀರ
14. ಕೋರಮಂಡಲ ತೀರ
15. ಉತ್ಕಲ ಸರಕಾರ ತೀರ
16. ನೈಋತ್ಯ ಮಾನ್ಸೂನ್ ಮಾರುತಗಳು
17. ರೂಯ್ಲಿ
18. ಗಂಗಾ ನಗರ
19. ಮಾಸಿನ್‌ರಾಮ್
20. ಕಪ್ಪು ಮಣ್ಣಿನ ಪ್ರದೇಶ
21. ಪಾಕ್ ಜಲಸಂಧಿ - ಮನ್ನಾರ್ ಖಾರಿ
22. ಜಬ್ಬಲ್‌ಪುರ - ಭಾರತದ ಭೌಗೋಳಿಕ ಕೇಂದ್ರ.




## ಭಾರತದ ಪ್ರಮುಖ ನದಿಗಳು ಮತ್ತು ನದಿ ಕಣಿವೆ ಯೋಜನೆಗಳು:

1. ದಾಮೋದರ ನದಿ ಕಣಿವೆ ಯೋಜನೆ
2. ಭಾಕ್ರಾ - ನಂಗಲ್ ಯೋಜನೆ - (ಗೋವಿಂದ ಸಾಗರ)
3. ಹಿರಾಕುಡ್ ಯೋಜನೆ
4. ತುಂಗಭದ್ರಾ ಯೋಜನೆ (ಪಂಪಾ ಸಾಗರ
5. ನಾಗಾರ್ಜುನ ಸಾಗರ ಯೋಜನೆ
6. ಕೃಷ್ಣಾ ಮೇಲ್ದಂಡೆ ಯೋಜನೆ
7. ಕೋಸಿ ಯೋಜನೆ (ಕೋಸಿ ನದಿ)
8. ಚಂಬಲ್ ಯೋಜನೆ (ಚಂಬಲ್ ನದಿ)
9. ರಿಹಾಂಡ್ ಯೋಜನೆ (ರಿಹಾಂಡ್ ನದಿ)

10. ಸಿಂಧೂ ನದಿ
11. ಗಂಗಾ ನದಿ
12. ಬ್ರಹ್ಮಪುತ್ರ
13. ಮಹಾನದಿ
14. ಕೃಷ್ಣಾ ನದಿ
15. ಗೋದಾವರಿ ನದಿ
16. ಕಾವೇರಿ ನದಿ
17. ನರ್ಮದಾ ನದಿ
18. ತಾಪಿ ನದಿ
19. ಕನ್ಯಾಕುಮಾರಿ






Scanned by CamScanner

## ಭಾರತದ ಪ್ರಮುಖ ಬಂದರುಗಳು ಮತ್ತು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳು :

1. ಕಾಂಡ್ಲಾ
2. ಮುಂಬಯಿ (ಭಾರತದ ಹೆಬ್ಬಾಗಿಲು)
3. ನವ್ಹಾಶೇವಾ (ಜವಾಹರ್ ಲಾಲ್ ನೆಹರು ಬಂದರು)
4. ಮರ್ಮಗೋವ
5. ನವ ಮಂಗಳೂರು (ಕರ್ನಾಟಕದ ಹೆಬ್ಬಾಗಿಲು)
6. ಕೊಚ್ಚಿ ( ಅರಬ್ಬಿ ಸಮುದ್ರದ ರಾಣಿ)
7. ತುತಕುಡಿ
8. ಚೆನ್ನೈ
9. ವಿಶಾಖಪಟ್ಟಣ
10. ಪಾರಾದೀಪ್
11. ಹಾಲ್ದಿಯಾ
12. ಕೊಲ್ಕತ್ತ
13. ಪೋರ್ಟ್ ಬ್ಲೇರ್
14. ಎನ್ನೋರ್

A. ಇಂದಿರಾಗಾಂಧಿ ವಿಮಾನ ನಿಲ್ದಾಣ - ದೆಹಲಿ
B. ಛತ್ರಪತಿ ಶಿವಾಜಿ ವಿಮಾನ ನಿಲ್ದಾಣ - ಮುಂಬಯಿ
C. ನೇತಾಜಿ ಸುಭಾಷ್‌ಚಂದ್ರ ಬೋಸ್ ವಿಮಾನ ನಿಲ್ದಾಣ - ಕೊಲ್ಕತ
D. ಅಣ್ಣಾ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ - ಚೆನ್ನೈ
E ಕೆಂಪೇಗೌಡ ವಿಮಾನ ನಿಲ್ದಾಣ - ಬೆಂಗಳೂರು
F. ರಾಜೀವಗಾಂಧಿ ವಿಮಾನ ನಿಲ್ದಾಣ - ಹೈದರಾಬಾದ್
G. ಅಮೃತ ಸರ
H. ಗೌಹಾತಿ (ಗುವಹಾತಿ)




## ಪರಮಾಣು ಶಕ್ತಿ ವಿದ್ಯುತ್ ಕೇಂದ್ರಗಳು :

1. ತಾರಾಪುರ
2. ರಾಣಾ ಪ್ರತಾಪ ಸಾಗರ
3. ಕಲ್ಪಾಕಂ
4. ನರೋರ
5. ಕಾಕ್ರಪಾರ
6. ಕೈಗಾ
7. ಕುಂಡನ್ ಕುಲಂ

---

A. ಬಾಂಬೆ ಹೈ
B. ದಿಗ್ಬಾಯ್
C. ನಹರ್ಕಾತಿಯ - ಲಖಂಪುರ
D. ರೇನೂಕೂಟ
E. ಬೆಂಗಳೂರು
F. ಅಂಕಲೇಶ್ವರ
G - ಕೆಮ್ಮಣ್ಣುಗುಂಡಿ






Scanned by CamScanner